ISSN 2277 - 5730
AN INTERNATIONAL MULTIDISCIPLINARY
QUARTERLY RESEARCH JOURNAL

# AJANTA

Volume - VIII Issue - I Kannada January - March - 2019

Peer Reviewed Refereed
and UGC Listed Journal

Journal No. 40776

ज्ञान-विज्ञान विमुक्तये

IMPACT FACTOR / INDEXING
2018 - 5.5
www.sjifactor.com

❖ EDITOR ❖
Asst. Prof. Vinay Shankarrao Hatole
M.Sc (Maths), M.B.A. (Mktg.), M.B.A. (H.R.),
M.Drama (Acting), M.Drama (Prod. & Dir.), M.Ed.

❖ PUBLISHED BY ❖

Ajanta Prakashan
Aurangabad. (M.S.)

The information and views expressed and the research content published in this journal, the sole responsibility lies entirely with the author(s) and does not reflect the official opinion of the Editorial Board, Advisory Committee and the Editor in Chief of the Journal **"AJANTA"**.

Owner, printer & publisher Vinay S. Hatole has printed this journal at Ajanta Computer and Printers, Jaisingpura, University Gate, Aurangabad, also Published the same at Aurangabad.

**Printed by**

Ajanta Computer, Near University Gate, Jaisingpura, Aurangabad. (M.S.)

**Published by :**

Ajanta Prakashan, Near University Gate, Jaisingpura, Aurangabad. (M.S.)

Cell No. : 9579260877, 9822620877, Ph.No. : (0240) 2400877

E-mail : ajanta1977@gmail.com, www.ajantaprakashan.com

**AJANTA - ISSN 2277 - 5730 - Impact Factor - 5.5 (www.sjifactor.com)**

# EDITORIAL BOARD

**Professor Kaiser Haq**
Dept. of English, University of Dhaka,
Dhaka 1000, Bangladesh.

**Roderick McCulloch**
University of the Sunshine Coast,
Locked Bag 4, Maroochydore DC,
Queensland, 4558 Australia.

**Dr. Ashaf Fetoh Eata**
College of Art's and Science
Salmau Bin Adbul Aziz University. KAS

**Dr. Nicholas Loannides**
Senior Lecturer & Cisco Networking Academy Instructor,
Faculty of Computing, North Campus,
London Metropolitan University, 166-220 Holloway Road,
London, N7 8DB, UK.

**Muhammad Mezbah-ul-Islam**
Ph.D. (NEHU, India) Assot. Prof. Dept. of
Information Science and Library Management
University of Dhaka, Dhaka - 1000, Bangladesh.

**Dr. Meenu Maheshwari**
Assit. Prof. & Former Head Dept.
of Commerce & Management
University of Kota, Kota.

**Dr. S. Sampath**
Prof. of Statistics University of Madras
Chennari 600005.

**Dr. D. H. Malini Srinivasa Rao**
M.B.A., Ph.D., FDP (IIMA)
Assit. Prof. Dept. of Management
Pondicherry University
Karaikal - 609605.

**Dr. S. K. Omanwar**
Professor and Head, Physics,
Sat Gadge Baba Amravati
University, Amravati.

**Dr. Rana Pratap Singh**
Professor & Dean, School for Environmental
Sciences, Dr. Babasaheb Bhimrao Ambedkar
University Raebareily Road, Lucknow.

**Dr. Shekhar Gungurwar**
Hindi Dept. Vasantrao Naik
Mahavidyalaya Vasarni, Nanded.

**Memon Sohel Md Yusuf**
Dept. of Commerece, Nirzwa College
of Technology, Nizwa Oman.

**Dr. S. Karunanidhi**
Professor & Head,
Dept. of Psychology,
University of Madras.

**Prof. Joyanta Borbora**
Head Dept. of Sociology,
University, Dibrugarh.

**Dr. Walmik Sarwade**
HOD Dept. of Commerce
Dr. Babasaheb Ambedkar Marathwada
University, Aurangabad.

**Dr. Manoj Dixit**
Professor and Head,
Department of Public Administration Director,
Institute of Tourism Studies,
Lucknow University, Lucknow.

**Prof. P. T. Srinivasan**
Professor and Head,
Dept. of Management Studies,
University of Madras, Chennai.

**Dr. P. A. Koli**
Professor & Head (Retd.),
Department of Economics,
Shivaji University, Kolhapur.

# EDITORIAL BOARD

**Dr. P. Vitthal**
School of Language and Literature
Marathi Dept. Swami Ramanand
Teerth Marathwada University, Nanded.

**Dr. Jagdish R. Baheti**
H.O.D. S. N. J. B. College of Pharmacy,
Meminagar, A/P. Tal Chandwad, Dist. Nashik.

**Dr. Sadique Razaque**
Univ. Department of Psychology,
Vinoba Bhave University,
Hazaribagh, Jharkhand.

**Prof. Ram Nandan Singh**
Dept. of Buddhist Studies University of Jammu.

**Prof. Dinesh R. Jaronde**
Head of Psychology Dept.
Indira Mahavidyalaya Kalamb, Yavatmal.

**Dr. Sidhharth Bhagat**
Head of Marathi Dept. Art & Commerce
Mahavidyalaya, Ralegoan, Yavatmal.

**Prof. Pravin Walke**
Dept. of History, Jagannath Maharaj Mahavidyalaya,
Wani, Yavatmal.

**Ku. Manjusha S. Walke**
Assistant Teacher, ZPUP School Narsapur,
Kalamb, Yawatmal.

**PUBLISHED BY**

**Ajanta Prakashan**
Aurangabad. (M.S.)

# CONTENTS OF KANNADA


| S. No. | Title & Author | Page No. |
|---|---|---|
| ೧. | ಶಿವತತ್ವರತ್ನಾಕರದಲ್ಲಿ ಯೋಗ ಮತ್ತು ನೈತಿಕಶಿಕ್ಷಣದ ವಿಚಾರಗಳು<br>**Mahaganapathi P. S.** | ೧–೧೦ |
| ೨. | ಅನರ್ಥಗಳಿಗೆ ದ್ವಾರ ದ್ಯೂತ<br>ಸಂಪಾದನೆ | ೧೧–೧೩ |
| ೩. | ಉಡುಪಿಯ ಶ್ರೀಕೃಷ್ಣನ ಪೂಜಾ ವೈಭವ ಹದಿನಾಲ್ಕು ಲೋಕದೊಡೆಯನಿಗೆ ಹದಿನಾಲ್ಕು ಪೂಜೆ<br>ಬಿ. ಜಿ. ಪರಿಮಳ | ೧೪–೧೭ |
| ೪. | ಅಧ್ಯಾತ್ಮವೀಥಿಯ ಆತ್ಮಾನುಭವದ ಸಂತೃಪ್ತಿಯ ಪರಾಕಾಷ್ಠೆ – 'ಭಕ್ತಿ'<br>ಚೇತನಾ ಆಚಾರ್, ಎನ್. | ೧೮–೨೪ |
| ೫. | ಭಾಸನ ಊರುಭಂಗ ರೂಪಕದಲ್ಲಿ ತಾತ್ತ್ವಿಕದೃಷ್ಟಿ<br>ವಿದ್ವಾನ್ ವನರಾಜ ಬಿ.ಕೆ. | ೨೫–೩೨ |
| ೬. | ಯೋಗ – ಆಧ್ಯಾತ್ಮಿಕ – ಆರೋಗ್ಯ– ಒಂದು ಅಧ್ಯಯನ<br>ಡಾ.ಜಯರೇವಣ್ಣ.ಎಂ.ವಿ | ೩೩–೪೦ |
| ೭. | ಭಾರತೀಯ ಕರ್ಮಸಿದ್ಧಾಂತದ ತತ್ವಮೀಮಾಂಸೆ<br>ಋಷಿದೇವ್ ಭಾರ್ಗವ್ ಎನ್. | ೪೧–೫೬ |
| ೮. | ಶಿವತತ್ವರತ್ನಾಕರದಲ್ಲಿನ ಅಲಂಕಾರ ವಿಚಾರ<br>**Bheemanaik S.** | ೫೭–೬೩ |

# ೧. ಶಿವತತ್ತ್ವರತ್ನಾಕರದಲ್ಲಿ ಯೋಗ ಮತ್ತು ನೈತಿಕಶಿಕ್ಷಣದ ವಿಚಾರಗಳು

**Mahaganapathi P. S.**
Sanskrit Teacher, Alva's English Medium High School, Vivekananda Nagara Puttige Village, P.O. Sampige, Moodabidre, D. K. District , Karnataka.

**ಪ್ರಸ್ತಾವನೆ**

'भाषासु मुख्या मधुरा दिव्या गीर्वाणभारती' ಎಂಬಂತೆ ಸುರಭಾರತಿ ಎಂದೆನಿಸಿರುವ ಸಂಸ್ಕೃತ ಭಾಷೆಯು ಜಗತ್ತಿನಭಾಷಾ ಸಮೂಹದಲ್ಲೇ ಮುಕುಟರತ್ನವಾಗಿ ಸುಶೋಭಿತವಾಗಿದೆ. ಸಂಸ್ಕೃತ ಸಾಹಿತ್ಯಪ್ರಪಂಚವೂ ಸವಿಸ್ತಾರವಾಗಿ ಬೆಳೆದು ನಿಂತಿದೆ. ದೃಶ್ಯ ಶ್ರವ್ಯಗಳೆಂಬ ವಿಭಾಗದೊಳಗೆ ಗದ್ಯ ಪದ್ಯ ಚಂಪೂ ನಾಟಕಗಳೆಂಬ ಪ್ರಕಾರಗಳಲ್ಲಿ ಇದು ಪ್ರಕಟಗೊಂಡಿದೆ. ಸಂಸ್ಕೃತದ ಭಾಷಾಲೋಕಕ್ಕೆ ಕರ್ನಾಟಕ ಪ್ರಾಂತದ ಕೊಡುಗೆಗಳೂ ಅಪಾರವಾಗಿವೆ. ಕರ್ನಾಟದ ಮಹಿಮೆಯನ್ನು ಸೂತ್ರರೂಪದಲ್ಲಿ ವರ್ಣಿಸಿದ ಕವಿ, ದೊರೆ ನೃಪತುಂಗನೂ ವಸುಧಾವಲಯವಿಲೀನ ವಿಶದವಿಷಯವಿಶೇಷಂ ಎಂದು ವರ್ಣಿಸಿದನು. ಇಲ್ಲಿರುವ ಪ್ರತಿಯೊಂದು ಪದವೂ ಸಂಸ್ಕೃತದ್ದೇ ಆಗಿದೆ. ಹೀಗೆ ಕನ್ನಡದ ಆದಿಕವಿ ಪಂಪನಿಂದಾರಭಿಸಿ ಆಧುನಿಕ ಕವಿಪುಂಗವರ ವರೆಗೆ ಕನ್ನಡ ಭಾಷೆ ಸಾಹಿತ್ಯದೊಂದಿಗೆ ಸಂಸ್ಕೃತ ಭಾಷೆಯ ಸಂಬಂಧ ಘನಿಷ್ಠವಾಗಿದೆ.

ಕರ್ನಾಟಕದ ಇತಿಹಾಸದಲ್ಲಿ ಕೆಳದಿ ಸಂಸ್ಥಾನದ ಆಳ್ವಿಕೆಯ ಕಾಲ ಮಹತ್ವದ ಮೈಲಿಗಲ್ಲೇ ಆಗಿದೆ. ಛತ್ರಪತಿ ಎಂದೇ ಸುವಿಖ್ಯಾತನಾದ ಮರಾಠಾ ನೃಪ ಶಿವಾಜೀಯನ್ನೇ ಸೋಲಿಸಿದ ಕೀರ್ತಿ ಕೆಳದಿಯ ರಾಜ ಸೋಮಶೇಖರನಾಯಕನ ರಾಣಿ ಚೆನ್ನಮ್ಮಾಜಿಗೆಸಲ್ಲುತ್ತದೆ. ಮುಂದೆ ಶಿವಾಜಿಪುತ್ರ ರಾಜಾರಾಮನು ಮೊಘಲರಾಜ ಔರಂಗಾಜೇಬನಿಂದ ಸೋತು ಆತ್ಮರಕಣೆಗಾಗಿ ಬಂದಾಗ, ಆತನಿಗೆ ಆಶ್ರಯವನ್ನಿತ್ತು ಪ್ರಬಲರಾದ ಮೊಘಲರವಿರುದ್ಧವೇ ಹೋರಾಡಿದ ವೀರರಾಣಿ, ಕರುಣಾಮಯಿ ಈ ಚೆನ್ನಮ್ಮ. ನಂತರದಲ್ಲಿ ಈಕೆಯ ದತ್ತುಪುತ್ರ ಬಸವಭೂಪ ರಾಜ್ಯಾಭಿಷಿಕ್ತನಾಗುತ್ತಾನೆ. ಈ ಕಾಲಘಟ್ಟದಲ್ಲಿ ಸಾಹಿತ್ಯ ಸಂಸ್ಕೃತಿಗೆ ನೀಡಿರುವ ಕೊಡುಗೆಗಳೂ ಅನುಪಮ. ಅದರಲ್ಲೂ ಸಂಸ್ಕೃತ ಭಾಷೆ ಸಾಹಿತ್ಯಗಳಿಗೆ ಅಪಾರ ಪ್ರೋತ್ಸಾಹ ಲಭಿಸಿತ್ತು ಎನ್ನುವುದಕ್ಕೆ ಈ ಕಾಲದಲ್ಲಿ ಒಡಮೂಡಿದ ಸಾಹಿತ್ಯಗಳೇ ಸಾಕ್ಷಿಯಾಗಿವೆ. ಸ್ವತಃ ರಾಜವಂಶಜರೂ ಸಂಸ್ಕೃತಾನುರಾಗಿಯಾಗಿದ್ದರು.

**ಕೆಳದಿ ರಾಜರಕಾಲದಲ್ಲಿ ಸಂಸ್ಕೃತಸಾಹಿತ್ಯ**

ಸಂಸ್ಕೃತ ಸಾರ್ವತ್ರಿಕವಾದ ಭಾಷೆಯಾಗಿದ್ದ ಆ ಕಾಲದಲ್ಲಿ ಸಂಸ್ಕೃತದಲ್ಲಿ ಸಾಹಿತ್ಯರಚನೆಯೂ ಸ್ವಾಭಾವಿಕವಾಗಿಯೇ ಮೂಡಿಬಂದಿದೆ ಎನ್ನಬಹುದು. ವಿಶೇಷವೆಂದರೆ ಸ್ವತಃ ರಾಜರಾಗಿದ್ದ ಹಿರಿಯ ವೆಂಕಟಪ್ಪನಾಯಕ, ಬಸವಪ್ಪನಾಯಕ ಸೇರಿ ಮೂವರು ಭೂಪಾಲರು ಮತ್ತು ಹದಿನಾರು ಜನ ವಿದ್ವಾಂಸರು ಒಟ್ಟು ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಸಂಸ್ಕೃತದಲ್ಲಿ ರಚನೆ ಮಾಡಿರುವುದು ಆ ಕಾಲದಲ್ಲಿ ಸಂಸ್ಕೃತಕ್ಕಿದ್ದ ಜನಮನ್ನಣೆಗೆ ಕೈಗನ್ನಡಿಯಾಗಿದೆ. ಭಾಷ್ಯ, ವ್ಯಾಖ್ಯಾನ ಗ್ರಂಥಗಳು ಧರ್ಮ, ನೀತಿ,ವ್ಯಾಕರಣ ಶಾಸ್ತ್ರಗ್ರಂಥಗಳೂ ಈ ಕಾಲಘಟ್ಟದಲ್ಲಿ ರಚಿತವಾದವು.

**ಶ್ರೀಶಿವತತ್ವರತ್ನಾಕರ –ಬಹುವಿಷಯವಸ್ತುಕೋಶ (ವಿಶ್ವಕೋಶ)**

ಸಂಸ್ಕೃತದಲ್ಲಿ ಸಾಮಾನ್ಯವಾಗಿ ಕಂಡುಬರುವ ಗ್ರಂಥ ಪ್ರಕಾರಗಳೆಂದರೆ, ನಿರ್ದಿಷ್ಟ ಕಥಾವಸ್ತುವಿನ ನಿರೂಪಣೆ ಇರುವ ಕಾವ್ಯಗಳು, ಶಾಸ್ತ್ರೀಯ ವಿವೇಚನೆ ನೀಡುವ ಲಕ್ಷಣಗ್ರಂಥಗಳು, ಇದಕ್ಕಿಂತ ಭಿನ್ನವಾದುವೆಂದರೆ ವೇದೋಪನಿಷತ್

ಸಾಹಿತ್ಯಗಳು ಅವುಗಳ ವ್ಯಾಖ್ಯಾನ ಭಾಷ್ಯ ಟೀಕೆ ಇತ್ಯಾದಿ. ಹಾಗೂ ನಿರುಕ್ತವೇ ಮೊದಲಾದ ಶಬ್ದಾರ್ಥಕೋಶಗಳು. ಆದರೆ ತೀರಾ ವಿರಳವಾಗಿರುವವು ಈ ಬಹುವಿಷಯವಸ್ತುಕೋಶ ಅಥವಾ ವಿಶ್ವಕೋಶಗಳು. ಪಾಶ್ಚಾತ್ಯರಲ್ಲಿ ಸಾಮಾನ್ಯವೆನಿಸಿದರೂ ಭಾರತೀಯ ಭಾಷೆಗಳಲ್ಲಿ ಇಂಥ ಗ್ರಂಥರಚನೆ ಅತ್ಯಲ್ಪ. ಕರ್ನಾಟಕದಲ್ಲಿ ಈ ಪಥದಲ್ಲೂ ಪ್ರಾಜ್ಞರು ಪ್ರವೃತ್ತರಾಗಿದ್ದಾರೆ ಎನ್ನುವುದಕ್ಕೆ ಸಾಕ್ಷೀಭೂತವಾಗಿ ವಿರಾಜಮಾನವಾಗಿರುವ ಕೆಲವೇ ಗ್ರಂಥಗಳಲ್ಲಿ ಬಸವಭೂಪಾಲನಿಂದ ಸಂಕಲಿತ ಶ್ರೀಶಿವತತ್ವರತ್ನಾಕರವೂ ಒಂದು.

ಶ್ರೀಶಿವತತ್ವರತ್ನಾಕರವು ೯ ಕಲ್ಲೋಲಗಳಾಗಿ ವಿಭಕ್ತವಾಗಿದೆ. ಒಂದೊಂದು ಕಲ್ಲೋಲವನ್ನೂ ಆಯಾ ವಿಷಯಕ್ಕನುಗುಣವಾಗಿ ತರಂಗಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಒಟ್ಟು ಹದಿಮೂರುಸಾವಿರ ಶ್ಲೋಕಗಳಿಂದ ಕೂಡಿರುವ ಇದು ಒಂದು ಬೃಹದ್ಗ್ರಂಥವೇ ಆಗಿದೆ. ಏತತ್ಪೂರ್ವದಲ್ಲಿ ಹನ್ನೆರಡನೆಯ ಶತಮಾನದಲ್ಲಿ ರಚಿತವಾದ ಚಾಲುಕ್ಯಸೋಮೇಶ್ವರನು ವಿರಚಿಸಿದ 'ಮಾನಸೋಲ್ಲಾಸ' ಕನ್ನಡನಾಡಿನಲ್ಲುದಿಸಿದ ಮೊದಲನೆಯ ಸಂಸ್ಕೃತ ವಿಶ್ವಕೋಶವೆನಿಸಿದೆ. ಅದರ ಕರ್ತೃ ಸರ್ವಜ್ಞ ಸೋಮೇಶ್ವರನೆಂದೇ ಪ್ರತೀತಿ. ಅಲ್ಲಿ ಸುಮಾರು ಏಳುಸಾವಿರ ಶ್ಲೋಕಗಳಿವೆ. ಆದರೆ ಶಿವತತ್ವರತ್ನಾಕರವು ಬಸವಭೂಪಾಲನಿಂದ ಸಂಕಲಿತವಾದ ಕೃತಿಯಾಗಿದೆ. ರಾಜಾಶ್ರಯದಲ್ಲಿ ಪ್ರಸಿದ್ಧ ಕವಿವರೇಣ್ಯರಿದ್ದರೆಂಬ ಐತಿಹ್ಯವಿದೆ. ಅವರೆಲ್ಲರ ಸಹಯೋಗಿತ್ವದಲ್ಲಿ ಈ ಗ್ರಂಥವನ್ನು ಸಂಕಲಿಸಲಾಗಿದೆ. ಹೀಗಾಗಿ ಈ ಗ್ರಂಥ ಅತ್ಯಂತ ಸತ್ವಯುತವಾದುದಾಗಿದೆ. ಅಧ್ಯಯನಾಕಾಂಕ್ಷಿಗಳಿಗೆ ತಮ್ಮ ತಮ್ಮ ವಿಷಯಗಳಿಗನುಗುಣವಾಗಿ ಅಪಾರ ವಿಷಯ ಸಂಪತ್ತು ಈ ಗ್ರಂಥದಲ್ಲಿ ಕಾಣಬಹುದು. ನನ್ನ ಅವಲೋಕನದಲ್ಲಿ ಕಂಡುಬಂದ ಕೆಲವೊಂದು ಅನನ್ಯತೆಯನ್ನು ಗುರುತಿಸುವ ಪ್ರಯತ್ನ ಮಾಡಿರುವೆ.

**ಶ್ರೀಶಿವತತ್ವರತ್ನಾಕರದ ಅನನ್ಯತೆ**

ಸಾಮಾನ್ಯವಾಗಿ ಪ್ರಾಚೀನ ಗ್ರಂಥರಚನಾಕಾರರು ಗ್ರಂಥರಚನೆಯ, ಸಮಾಪ್ತಿಯ ಕಾಲವನ್ನು ನಮೂದಿಸುವ ಪರಿಪಾಠ ಕಂಡುಬರುವುದಿಲ್ಲ ಆದರೆ ಇಲ್ಲಿ –

**ಶ್ರೀಮತ್ಯುನ್ನತಶಾಲಿವಾಹನಶಕೇ ಚಂದ್ರಾತುನೃತುಕ್ಷ್ಮಾ ್ಯಮಿತೇ**
**ವರ್ಷೇ ವುಶ್ರುತಸರ್ವಧಾರಿಣಿತಥಾ ಮಾಸೇ ನಭಸ್ಯಾಹ್ವಯೇ ।**
**ವಾರೇ ನಿರ್ಜರವೈರಿಣಾಪಿ ಗುರೋಃ ಪೌರ್ಣಮಾಸೀದಿನೇ**
**ಗ್ರಂಥೋಯಂ ಪರಿಪೂರ್ಣತಾಮವಹತ ಪ್ರಖ್ಯಾತಸಾರಾರ್ಥಯುಕ್ ॥**[೧]

ಎಂಬುದಾಗಿ ಗ್ರಂಥರಚಿತವಾದ ಕಾಲವನ್ನು ಸುಸ್ಪಷ್ಟವಾಗಿ ತಿಳಿಸಲಾಗಿದೆ.

ಒಂಭತ್ತು ಕಲ್ಲೋಲಗಳಲ್ಲಿ ವಿಷಯ ನಿರೂಪಿತವಾಗಿದ್ದರೂ ಕಲ್ಲೋಲದ ಸಮಾಪನದಲ್ಲಿ ಆಯಾ ಕಲ್ಲೋಲದಲ್ಲಿರುವ ತರಂಗಗಳ, ಶ್ಲೋಕಗಳ ಸಂಖ್ಯೆಯನ್ನು ಹೇಳುತ್ತಾ ನಿರೂಪಿತ ವಿಷಯಗಳ ಆಕರಗ್ರಂಥಗಳ ಆವಲಿಯನ್ನೇ ತಿಳಿಸಲಾಗುತ್ತದೆ.

ಉದಾಹರಣೆಗೆ ಮೂರನೆಯ ಕಲ್ಲೋಲದ ಕೊನೆಯಲ್ಲಿ –

**ತರಂಗೈಃ ಸಪ್ತಭಿರ್ಯುಕ್ತೇ ಕಲ್ಲೋಲೇಸ್ಮಿಮಸ್ತ್ರಿತೀಯಕೇ**
**ಗ್ರಂಥಾನಾಂ ಷಟ್ ಶತೀಪಂಚಚತ್ವಾರಿಂಶತ್ ಸಮನ್ವಿತೇ।**
**ಮಹಾಭಾರತ ವಾರಾಹೇ ಕೌರ್ಮಂ ಸ್ಕಾಂದಂ ಚ ವೀಷ್ಣವಮ್**
**ಕುಮಾರೀ ಕಾಂಡಶೈವಾದಿ ಸಂಗ್ರಾಹ್ಯಾಯಂ ಕೃತೋಭವತ್॥**[೨]

ಎಂದು ಸಮಾಪ್ತಿವಕ್ಯವಿದೆ.

- ಈ ಗ್ರಂಥದ ರಚನಾಸ್ವರೂಪವು ಭಿನ್ನವಾದುದಾಗಿದೆ. ಇಲ್ಲಿ ತಿಳಿಸಿರುವ ವಿಚಾರಗಳು ಪಿತಾಪುತ್ರರ ಸಂವಾದ ರೂಪದಲ್ಲಿದೆ. ಜಿಜ್ಞಾಸುವಾದ ಪುತ್ರನಿಗೆ, ಆತನ ಪ್ರಶ್ನೆಗಳಿಗೆ ಉತ್ತರಿಸುವ ರೂಪದಲ್ಲಿ ನಿರೂಪಿಸಲಾಗಿದೆ.
- ಪ್ರಕೃತಗ್ರಂಥದಲ್ಲಿ ಅನ್ಯಾನ್ಯ ಗ್ರಂಥಗಳಿಂದ ಸಂಗ್ರಹಿಸಿ ವಿವಿಧ ವಿಚಾರಗಳನ್ನು ವಿಶ್ವಕೋಶದೋಪಾದಿಯಲ್ಲಿ ನಿರೂಪಿಸಲಾಗಿದೆ. ಆದರೆ ಜೊತೆಜೊತೆಯಲ್ಲಿ ಕೆಳದಿ ಭೂಪಾಲರ ವರ್ಣನೆ, ವಿದ್ಯಾರಣ್ಯ ಯತಿವರ್ಯರ ವರ್ಣನೆಗಳು ಈ ಗ್ರಂಥಕ್ಕೆ ಕಾವ್ಯದ ಇತಿಹಾಸಗ್ರಂಥದ, ಸ್ವರೂಪವನ್ನು ನೀಡುತ್ತಿವೆ.
- ಪೂರ್ವಾಚಾರ್ಯರಿಂದ ಉಲ್ಲಿಖಿತವಾದ, ತತ್ ತದ್ವಿಷಯ ಸಂಬಂಧಿ ಮತಗಳನ್ನೆಲ್ಲಾ ಸಂಗ್ರಹಿಸಲಾಗಿರುವುದು ಈ ಗ್ರಂಥದಲ್ಲಿನ ಮೇಲ್ಮೆ.
- ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ರವರ ಸಂಪಾದಕತ್ವದಲ್ಲಿ ಈ ಕೃತಿಯನ್ನು ಇನ್ನಷ್ಟು ಓದುಗರ ಅನುಕೂಲಕ್ಕನುಗುಣವಾಗಿ ರೂಪಿಸಲಾಗಿದೆ. ಇಲ್ಲಿ ಸೃಷ್ಟಿಸಂಪುಟ, ಲೋಕಸಂಪುಟ, ವಿದ್ಯಾಸಂಪುಟ, ಶಾಸ್ತ್ರಸಂಪುಟ ಹಾಗೂ ದೈವಸಂಪುಟಗಳೆಂದು ವಿಭಾಗಮಾಡಿ ಗ್ರಂಥದ ವಸ್ತುವಿನ ನಿರೂಪಣೆ ಅತ್ಯಂತ ಮನೋಜ್ಞವೂ ಸುಕರವೂ ಆಗಿದೆ.

ಹೀಗೆ ಶ್ರೀ ಶಿವತತ್ವರತ್ನಾಕರ ಕರ್ನಾಟಕದಲ್ಲಿ ಸುರಭಾರತಿಯಲ್ಲುದಿಸಿದ ಒಂದು ಅಪೂರ್ವವಾದಕೃತಿಯಾಗಿಯೂ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ ರವರ ಸಂಪಾದಕತ್ವದಲ್ಲಿ ಕನ್ನಡ ವ್ಯಾಖ್ಯಾನ, ಟಿಪ್ಪಣಿಗಳೊಡನೆ ಒಡಮೂಡಿ ಜಿಜ್ಞಾಸುಗಳಿಗೆ ಜ್ಞಾನಾಮೃತಪಾನ ಮಾಡಿಸುತ್ತಿರುವುದು.

**ಶ್ರೀಶಿವತತ್ವರತ್ನಾಕರದಲ್ಲಿ ಯೋಗವಿಚಾರಗಳು**

ಯುಜ್- ಧಾತುವಿನಿಂದ ಜನಿತವಾದ ಪದ ಯೋಗ; ಒಟ್ಟಿಗೆ ಸೇರಿಸುವಿಕೆ, ಸಮಾಗಮ ಎಂಬಿತ್ಯಾದಿ ಅರ್ಥಗಳನ್ನು ನೀಡುತ್ತದೆ. ಭವ್ಯಭಾರತದ ಅಪ್ರತಿಮ ಕೊಡುಗೆಗಳಲ್ಲಿ ಯೋಗಶಾಸ್ತ್ರವೂ ಒಂದು. ಯೋಗಾಚಾರ್ಯನೆನಿಸಿರುವ ಶ್ರೀಕೃಷ್ಣಪರಮಾತ್ಮನಿಂದ ಆರಂಭಿಸಿ ಪ್ರಾಚೀನಮುನಿ ಪತಂಜಲಿಯಿಂದ ಪ್ರಚುರಗೊಂಡಿದೆ. ಇಂದಿಗೂ ವಿಶ್ವಯೋಗದಿನಾಚರಣೆಯನ್ನು ಆಚರಿಸುವ ಮೂಲಕ ಇದಕ್ಕಿರುವ ಜಾಗತಿಕ ಮನ್ನಣೆ ಅಭಿವ್ಯಕ್ತವಾಗಿದೆ. ಶ್ರೀಶಿವತತ್ವರತ್ನಾಕರದಲ್ಲಿ ಬಸವಭೂಪ ಮತ್ತು ಆತನ ಪುತ್ರನ ಸಂಭಾಷಣೆಯ ಮಧ್ಯದಲ್ಲಿ,

**ಯೋಗವಿದ್ಯಾ ಪುನಃ ಕೈಷಾ ತಾಂ ಮಹ್ಯಂ ಪರಿಕೀರ್ತಯ**[3]

ಎಂಬ ಪುತ್ರನ ಆಕಾಂಕ್ಷೆಗೆ ಉತ್ತರಿಸುತ್ತಾ, ತಾನು ಅರಿತಿರುವ ಯೋಗಶಾಸ್ತ್ರವನ್ನು ಬಸವರಾಜನು ವಿವರಿಸುತ್ತಾನೆ. ಈ ನಿರೂಪಣೆಯು ಏಳನೆಯ ಕಲ್ಲೋಲದಲ್ಲಿ ಕಾಣಬಹುದು. ಆದರೆ, ಮೊದಲಿಗೆ ವೇದ-ಉಪವೇದಗಳನ್ನು ತಿಳಿಸಿ, ಧರ್ಮಶಾಸ್ತ್ರ ಮತ್ತು ಆಗಮಗಳ ಕುರಿತಂತೆ ಹೇಳಲಾಗಿದೆ. ಆಗಮಗಳಲ್ಲೂ ನಾನಾ ವಿಧಗಳಿದ್ದು, ಪ್ರತಿಯೊಂದರಲ್ಲೂ ಕ್ರಿಯಾ, ಯೋಗ, ಚರ್ಯಾ ಮತ್ತು ಜ್ಞಾನಗಳೆಂಬ ನಾಲ್ಕು ಪಾದಗಳಿರುತ್ತವೆ. ಹೀಗಿರುವ ಪಾದಗಳಲ್ಲೊಂದಾದ ಯೋಗದ ವಿಧಗಳನ್ನೂ ತಿಳಿಸಲಾಗಿದೆ.

**ಶ್ರೀಕಂಠೇಶೋಪದಿಷ್ಟಾರ್ಥಾಃ ಶ್ವೇತಾದ್ಯಾ ಅಷ್ಟವಿಂಶತಿಃ ।**
**ಯೋಗಾಚಾರ್ಯಾಃ ಸಂಶ್ಲಿಷ್ಯಾಶ್ಚ ಯೋಗಶ್ಚಾಪಿ ಚತುರ್ವಿಧಃ ॥**

**ಯೋಗಪಾದೇ ಮಂತ್ರಲಯಹಠರಾಜಾಭಿದಾನವಾನ್।**

**ಈಶ್ವರೇ ಚಿತ್ತಸಂಧಾನರೂಪಶ್ಚ ಪ್ರತಿಪಾದ್ಯತೇ ॥[೪]**

ಹೀಗೆ ತಾನು ಸಂಗ್ರಹಿಸಿದ ವಿಚಾರಗಳಲ್ಲಿ ಮಂತ್ರ, ಲಯ, ಹಠ ಹಾಗೂ ರಾಜಯೋಗಗಳೆಂದು ನಾಲ್ಕು ವಿಧವನ್ನು ಹೇಳಿ, ಜೊತೆಯಲ್ಲಿ ಈಶ್ವರೇ ಚಿತ್ತಲಯರೂಪಶ್ಚ.... ಎಂದು ಮತ್ತೊಂದರ ಕುರಿತಾಗಿಯೂ ಉಲ್ಲೇಖಿಸುತ್ತಾನೆ. ಆದರೆ ಮುಂದೆ ಶಾಸ್ತ್ರಗಳ ಕುರಿತಾಗಿ ವಿವರಿಸುತ್ತಾ ಏಳನೆಯ ಕಲ್ಲೋಲದಲ್ಲಿ ಈರೀತಿ ಹೇಳಲಾಗಿದೆ–

**ಮಂತ್ರೋಲಯೋ ಹಠೋ ರಾಜಾ ಶೈವಶ್ಚೇತಪಿ ಪಂಚಧಾ ।**

**ಯೋಗಾಃ ಪೂರ್ವೈಸ್ಸಮಾಖ್ಯಾತಾ ಸಿದ್ಧೈಶ್ಶಂಭುಪ್ರಚೋದಿತೈಃ॥ [೫]**

ಭಗವಂತನಿಂದ ಸಿದ್ಧಿಯನ್ನು ಪಡಕೊಂಡ ಹಿರಿಯರು ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗ, ಶೈವಯೋಗಗಳೆಂದು ಐದುವಿಧವಾಗಿ ಯೋಗವ್‌ನ್ನು ತಿಳಿಸಿರುವರು. ಮುಂದುವರಿದಂತೆ ಪ್ರತಿಯೊಂದೂ ಅಂತರ್ವಿಭಾಗವನ್ನೂ ಸೋದಾಹರಣವಾಗಿ ವಿವರಿಸಿರುವರು. ಮೊದಲಾಗಿ ಮಂತ್ರಯೋಗವೆಂದರೆ –

**ವಾಚ್ಯವಾಚಕಭಾವಾಖ್ಯಂ ಸಂಬಂಧಂಪರಿಮೃಶ್ಯ ಚ ।**

**ಜಪೋ ಮಂತ್ರಸ್ಯ ಯೋ ಮಂತ್ರಯೋಗಸ್ಯ ತು ನಿಗದ್ಯತೇ ॥[೬]**

ವಾಚ್ಯವಾಚಕ ಸಂಬಂಧವನ್ನು ಪರಾಮರ್ಷೆಮಾಡಿ ಮಂತ್ರದಜಪವನ್ನು ಮಂತ್ರಯೋಗವೆಂದು ಹೇಳಿರುವರು.

**ಪುನಶ್ಚ ಮನುನಾ ಸಾರ್ಧಂ ಧ್ಯೇಯವಸ್ತುನಿ ಲೀಯತೇ ।**

**ನಾದೇ ವಾ ಯಸ್ಯ ಕಸ್ಯಾಯಂ ಲಯಯೋಗ ಇತ ಸ್ಫುಟಃ ॥[೭]**

ಮನನ ಮಾಡುವವನ ಮನಸ್ಸು ಧ್ಯೇಯವಸ್ತುವಿನಲ್ಲಿ ಯಾವ ನಾದದಲ್ಲಿ ಲಯವಾಗುವುದೋ ಅದನ್ನೇ ದ್ವಿತೀಯಪ್ರಕಾರವಾದ ಲಯಯೋಗವನ್ನು ಹೇಳಿರುವರು.

**ಅಷ್ಟಾಂಗಬಂಧಮುದ್ರೌಘಕರಣಾಧಾರವಾನ್ ಹಠಃ।[೮]**

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಅಷ್ಟಾಂಗಮುದ್ರೆಗಳಿಂದಸಹಿತವಾದುದೇ ಹಠಯೋಗವೆಂದು ವಿವರಿಸಲಾಗಿದೆ. ಇಲ್ಲಿ ಯಮ ನಿಯಮಗಳನ್ನು ಹೊರತಾಗಿಸಿ ಷಡಂಗವೆಂದು ಕೆಲವರಮತ ಎಂದೂ ಉಲ್ಲೇಖಿಸಿದೆ.

**ಸ್ವಾತ್ಮಾನಂ ಪರಮಾತ್ಮನಿ ನೀರೇ ನೀರಮಿವ ಯೋಜಯೇದ್ಯಸ್ತು।**

**ಏಷ ಸಮಾಧಿಃ ಪ್ರೋಕ್ತಃ ಪ್ರಾಹುರ್ವೈ ರಾಜಯೋಗಮಿಮಮಾದ್ಯಾಃ॥[೯]**

ಎಂದು ರಾಜಯೋಗವೆಂಬುದು ಹಠಯೋಗದ ಮುಂದುವರಿದ ಭಾಗವೇ ಆಗಿದೆ ಎನ್ನುವ ರೀತಿಯಲ್ಲಿ ನಿರೂಪಿಸಲಾಗಿದೆ. ಹಾಗೆಯೇ ರಾಜಯೋಗಿಯ ಸ್ವರೂಪವನ್ನು ವಿವರಿಸುತ್ತಾ ಮುಂದೆ ಹೀಗೆ ಹೇಳಲಾಗಿದೆ –

**ನೇತ್ರೇ ನಿಮೀಲಿತೇ  ನಿತ್ಯಂ ಕಿಂಚಿದುನ್ಮೀಲಿತೇ ತಥಾ।**

**ಯೋ ಮನಶ್ಚಕ್ಷುಷಾ ಬ್ರಹ್ಮ ಪಶ್ಯತೀತಿ ಸ ಯೋಗಿರಾಟ್ ॥[೧೦]**

ಭಗವಂತನಲ್ಲಿ ಸರ್ವರೀತಿಯಿಂದಲೂ ಐಕ್ಯವಾಗುವ ಮಾರ್ಗಾವಲಂಬನವೇ ರಾಜಯೋಗವೆಂದು ಅದನ್ನು ಅಭ್ಯಸಿಸುವ ವಿಧಾನ, ನಿಯಮಾದಿಗಳನ್ನು ಸವಿಸ್ತಾರವಾಗಿ ತಿಳಿಸಲಾಗಿದೆ.

**ದೃಗದೃಶ್ಯಭಾವಸಂಬಂಧಾದುನ್ಮನ್ಯಂತಂ ವಿಚಿಂತಯೇತ್ ।**

**ಶಿವಯೋಗಸ್ತ್ವಿದಂ ಗುಹ್ಯಂ ಜೀವನ್ಮುಕ್ತಿಕರಂ ಭವೇತ್ ॥[೧೧]**

ಹೀಗೆ ಕೊನೆಯದ್ದಾದ ಶಿವಯೋಗವನ್ನೂ ವಿವರಿಸಲಾಗಿದೆ. ಅಂತಿಮವಾಗಿ, ಯೋಗವೇ ಸಾಧನವಾಗಿ ಜೀವನ್ಮುಕ್ತಿಯನ್ನೇ ಸಾಧ್ಯವಗಿಸುವುದನ್ನು ಶಿವಯೋಗದಲ್ಲಿ ವಿವರಿಸಿದೆ. ಮೇಲೆ ಹೇಳಿರುವ ಐದು ಪ್ರಕಾರದ ಯೋಗವಿಭಾಗಗಳನ್ನೂ ಸವಿಸ್ತರವಾಗಿ ಯೋಗಶಾಸ್ತ್ರದ ವಿವರಿಸಲಾಗಿದೆ.

**ಇಲ್ಲಿ ಅವಶ್ಯವಾಗಿ ಗುರುತಿಸಬಹುದಾದ ಕೆಲವೊಂದು ಅಂಶಗಳೆಂದರೆ**

**ಮಂತ್ರ ಪ್ರಕಾರಗಳು: –**

**ಏಕಾಕ್ಷರಂ ದ್ವ್ಯಕ್ಷರಂ ವಾ ಷಡಕ್ಷರಮಥಾಪಿ ವಾ ।**
**ಅಷ್ಟಾಕ್ಷರಂ ವಾ ಮೋಕ್ಷಾಯ ಮಂತ್ರಂ ಯೋಗೀ ಜಪೇತ್ಸದಾ ॥** [೧೨]

ಎಂದು ಓಂಕಾರವೆಂಬ ಏಕಾಕ್ಷರ, ಹಂಸವೆಂಬ ದ್ವ್ಯಕ್ಷರ, ಮೂಲಮಂತ್ರವೆಂಬ ಷಡಕ್ಷರ, ಹಾಗೂ ಮಾಯೆಯೆಂಬ ಅಷ್ಟಾಕ್ಷರವನ್ನೂ ಮಂತ್ರವೆಂದು ಹೇಳಲಾಗಿದೆ.

**ನಾದಪ್ರಕಾರಗಳು**

**ಚಿಣ್ ಚಿಣ್ ಚಿಣಿಘಂಟಾಘನಶಂಖಧ್ವನಯೋ ನು ವಲ್ಲಕೀನಿನದಃ।**
**ಸತ್ತಾಲವೇಣುಭೇರೀಮರ್ದಲನಾದಾ ದಶೋದಿತಾ ನಾದಾಃ ॥**[೧೩]

ಚಿಣ್ ಚಿಣಿ, ಗಂಟೆ, ಘನ, ಶಂಖ,ವೀಣೆ, ತಂತಿ, ತಾಳ, ಕೊಳಲು, ನಗಾರಿ, ಮದ್ದಲೆ ಎಂಬುದಾಗಿ ಹತ್ತುವಿಧವಾಗಿ ನಾದಜನ್ಯದ ಸ್ಥಾನಗಳ ಮೂಲಕ ಅವುಗಳನ್ನು ಪ್ರತ್ಯೇಕಿಸಲಾಗಿದೆ.

**ಎಂಭತ್ತನಾಲ್ಕು ಆಸನಗಳು.**

ಹಠಯೋಗದ ಅಷ್ಟಾಂಗಗಳಲ್ಲಿ ಪ್ರಧಾನವಾಗಿ ಆಸನಗಳನ್ನು ಹೇಳಲಾಗಿದೆ.ಪ್ರಕೃತ ಗ್ರಂಥದಲ್ಲಿ ಏಳನೆಯ ಕಲ್ಲೋಲದ ಹದಿನೈದನೆಯ ತರಂಗದಲ್ಲಿ ೧೬ರಿಂದ ೨೦ನೆಯ ಶ್ಲೋಕದ ಪೂರ್ವಾರ್ಧದ ಭಾಗದಲ್ಲಿ ಈ ಆಸನಗಳನ್ನು ಹೆಸರಿಸಿ ಮುಂದೆ ಅವುಗಳ ಸ್ಥಿತಿಯನ್ನು ವಿಸ್ತರಿಸಲಾಗಿದೆ.

**ಅಷ್ಟಸಿದ್ಧಿಗಳು**

**ವಪುಃ ಪಟುತ್ವಂ ಚ ಮುಖಪ್ರಸಾದೋ ನಾದಸ್ಫುಟತ್ವಂನಯನಾಚ್ಛತಾ ಚ।**
**ಕಾಯಾಗ್ನಿದೀಪ್ತಿರ್ವಿಜಯಶ್ಚ ಬಿಂದೋಃ ನಾಡೀಷು ಶುದ್ಧಿರ್ವಿಗತಾಮಯತ್ವಂ ॥**[೧೪]

ಹೀಗೆಂದು ಎಂಟುವಿಧದ ಸಿದ್ಧಿಗಳನ್ನು ವಿವರಿಸಿರುವರು.

**ಯೋಗಿಯ ಆಹಾರಪದ್ಧತಿ**

ಯೋಗಾನುಸಂಧಾನವನ್ನು ಮಾಡಲು ತೊಡಗುವ ಯೋಗಿಯೊಬ್ಬನ ಆಹಾರಪದ್ಧತಿಯನ್ನೂ ತಿಳಿಸಲಾಗಿದೆ. ಯಾವ ಯಾವ ಆಹಾರಗಳು ಸೇವ್ಯ ಹಾಗೂ ಯಾವುವು ವರ್ಜ್ಯಗಳೆಂದು ಸಂಗ್ರಹಿಸಲಾಗಿದೆ.

**ಶ್ರೀಶಿವತತ್ವರತ್ನಾಕರದಲ್ಲಿ ನೈತಿಕವಿಚಾರಗಳು**

ಗ್ರಂಥಗಳೆಲ್ಲವೂ ಒಂದಲ್ಲ ಒಂದು ರೂಪದಲ್ಲಿ ಲೋಕಕ್ಕೆ ನೀತಿಯನ್ನು ತೋರಿಸುತ್ತಾ ತಮ್ಮ ಪ್ರಯೋಜನವನ್ನು ಬಿಂಬಿಸುತ್ತವೆ. ಪ್ರಕೃತ ಶ್ರೀ ಶಿವತತ್ವರತ್ನಾಕರವೂ ತನ್ನೊಳಗೆ ಹಲವಾರುವಿಚಾರಗಳನ್ನು ಹೊಂದಿದ್ದರೂ ಇನ್ನೊಂದು ಮಗ್ಗುಲಲ್ಲಿ ಜಗದುಪಕಾರಿಗಳಾದ ನೀತಿ ಮಾರ್ಗವನ್ನೂ ತೋರಿಸುತ್ತಿದೆ. ನನ್ನ ಅವಲೋಕನದಲ್ಲಿ ವೇದ್ಯವಾದ ಅಂತಹ ಕೆಲವೊಂದು ನೈತಿಕವಿಚಾರಗಳನ್ನು ಸಂಗ್ರಹಿಸಿ ವಿವರಿಸುವ ಪ್ರಯತ್ನ ಮಾಡಿರುವೆನು.

- ಐದನೆಯ ಕಲ್ಲೋಲದ ಹನ್ನೊಂದನೆಯ ತರಂಗದಲ್ಲಿ

**ಅಥ ನೀತಿಂ ಪ್ರವಕ್ಷ್ಯಾಮಿ ಶತ್ರುನಿಗ್ರಹಸಾಧಿಕಾಂ** ಎಂದು ಪ್ರಾರಂಭಿಸಿ, ಮುಂದಿನ ಮೂರುಶ್ಲೋಕಗಳಲ್ಲಿ ರಾಜನಿಗೆ ಯುಕ್ತವಾದ ನೀತಿಯನ್ನು ತಿಳಿಸಲಾಗಿದೆ.

**ಶ್ರೀಮಾನ್ ಕುಲೀನೋಽವ್ಯಸನೋಽತಿಶೂರಃ ಶ್ರುತಿಸ್ಮೃತಿಜ್ಞಃಸ್ಮೃತಿಮಾನ್ ಸುದಕ್ಷಃ ।**

**ಧರ್ಮಸ್ವರೂಪಿ ಸ್ವಗತಸ್ತ್ವಲುಬ್ಧಃ ಶುಚಿಸ್ಮಿತೋ ನೀತಿಪರಃ ಸುರೂಪಃ॥**

**ತಥ್ಯಾಭಿಭಾಷೀ ನಿಪುಣಃ ಕಲಾಸು ವಕ್ತಾ ಸುವೇಷಃ ಪ್ರಿಯವಾಕ್ ಕೃತಜ್ಞಃ ।**

**ವೃದ್ಧೋಪಸೇವೀ ಗುಣವಾನ್ ಗುಣಜ್ಞಃ ಸ್ವರಂಧ್ರಗೋಪ್ತಾ ಪರರಂಧ್ರವೇತ್ತಾ ॥**

**ದಾತಾ ಸಹಿಷ್ಣುರ್ವಿಜಿತೇಂದ್ರಿಯಶ್ಚಮಾನಿ ಚ ಸಪ್ತಾಂಗಯುತೋ ವಿನೀತಃ ।**

**ಉತ್ಸಾಹಮಂತ್ರಪ್ರಭುಶಕ್ತಿಯುಕ್ತಃ ಚತುರ್ವಿಧೋಪಾಯಯುತಸ್ತ್ವಭೀತಃ ॥**

**ಪಂಚಾಂಗಮಂತ್ರೇ ಕುಶಲಃ ಪ್ರಗಲ್ಭಃ ಷಾಡ್ಗುಣ್ಯವೃಂದೇ ವಿಜಯೀನೃಪಃ ಸ್ಯಾತ್ ॥**[೧೫]

ಒಬ್ಬ ರಾಜನಾಗಬೇಕಾದರೆ ಆತನಿಗಿರಬೇಕಾದ ಕನಿಷ್ಟತಮವಾದ ಗುಣಗಳ ಕುರಿತಾಗಿ ಮೇಲಿನ ಶ್ಲೋಕಗಳಲ್ಲಿ ಸಂಗ್ರಹಿಸಲಾಗಿದೆ. ಈ ವಿಚಾರಗಳು ಸಾರ್ವಕಾಲಿಕವಾದವುಗಳೇ ಆಗಿವೆ. ವರ್ತಮಾನದಲ್ಲಿ ರಾಜಕಾರಣಿ, ಮಂತ್ರಿ ಮೊದಲಾದ ಪದವಿಗಳನ್ನು ಹೊಂದಲು ಯಾವುದೇ ವಿದ್ಯಾರ್ಹತೆ ಮೊದಲಾದವುಗಳು ಅಗಣ್ಯವಾಗಿವೆ. ಕೇವಲ ಆರ್ಥಿಕ ಸಾಮರ್ಥ್ಯ, ಜಾತಿ–ಮತ–ಪಂಗಡಗಳೇ ಮಾನದಂಡಗಳಾಗಿವೆ. ಇಂತಹ ಸಂದರ್ಭ ಈ ವಿಚಾರಗಳು ಅತ್ಯಂತ ಪ್ರಶಸ್ತವೆನಿಸಿವೆ.

ರಾಜನಿಗೆ ಅತ್ಯುಪಯುಕ್ತವಾದ ಚತುರೋಪಾಯಗಳನ್ನು ವಿವರಿಸುತ್ತಾ –

**ಉಪಾಯೇಷೂತ್ತಮಂ ಸಾಮ ಭೇದೋ ಮಧ್ಯಮ್ಯೈಷ್ಯತೇ ।**

**ಉಪಪ್ರದಾನಮವರಂ ದಂಡಃ ಕಷ್ಟತರಃ ಸ್ಮೃತಃ॥**[೧೬]

ಈ ರೀತಿ ಪ್ರಾರಂಭಿಸಿ ಮುಂದಿನ ಐದು ಶ್ಲೋಕಗಳಲ್ಲಿ ಸಕಾರಣವಾಗಿ ಚತುರೋಪಾಯಗಳನ್ನು ನಿರೂಪಿಸಲಾಗಿದೆ. ಹಾಗೂ ಪ್ರತಿಯೊಂದು ಉಪಾಯದ ಉಪವಿಭಾಗ,

ಯೋಗ ವಿಭಾಗದಲ್ಲೊಂದಾದ ಹಠಯೋಗದಲ್ಲಿ  ಅಷ್ಟಾಂಗಗಳಲ್ಲಿ ಯಮಗಳನ್ನು ಕುರಿತಾಗಿ ಹೇಳಲಾಗಿದೆ. ಅವು ದಶಪ್ರಕಾರಕವಾಗಿವೆ ಹೇಗೆಂದರೆ–

**ಹಿಂಸಾಭಾವಃ ಸೂನೃತಮಸ್ತೇಯಂ ಬ್ರಹ್ಮಚರ್ಯಮೃಜುತಾ ಚ।**

**ಮಿತಭೋಜನಕ್ಷಮಾ ಧೃತಿಶೌಚದಯಾ ದಶ ಯಮಾ ಇತಿ ಪ್ರೋಕ್ತಾ॥**[೧೭]

ಹಿಂಸೆಮಾಡದಿರುವಿಕೆ, ಸತ್ಯ, ಕಳ್ಳತನಮಾಡದಿರುವುದು, ಬ್ರಹ್ಮಚರ್ಯ, ಋಜುತಾ, ಮಿತಭೋಜನ, ಕ್ಷಮೆ, ಧೃತಿ, ಶೌಚ ಮತ್ತು ದಯೆ ಈ ಗುಣಗಳು ಮನುಷ್ಯನಿಗೆ ಅತಿಮುಖ್ಯವಾದುವೇ ಆಗಿವೆ. ಹಾಗಾಗಿ ಯೋಗಸಾಧನೆ ಮಾಡಲು ಮುಂದಾದವನಿಗೆ ಮಾತ್ರವಲ್ಲ ಸಾಮಾನ್ಯನಿಗೂ ಈ ಗುಣಗಳ ಅಳವಡಿಕೆ ಜೀವನಸಾಫಲ್ಯಕ್ಕೆ ದಾರಿಯಾಗಿವುದು.

ನಾಲ್ಕನೆಯ ಕಲ್ಲೋಲದ ನಾಲ್ಕನೆಯ ತರಂಗದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರ  ಕರ್ತವ್ಯದ ಸೋದಾಹರಣ ವಿವರಣೆ ನೀಡಲಾಗಿದೆ. ಮುಂದೆ ಬ್ರಹ್ಮಚರ್ಯಾದಿ ಚತುರಾಶ್ರಮವನ್ನು ತಿಳಿಸಿದೆ–

**ಪ್ರಥಮಸ್ತ್ವಾಶ್ರಾ ್ರಮಣಾಂ ಚ ವ್ರತೀ ಗುರ್ವಗ್ನಿಸೇವಕಃ।**

**ಗೃಹೀ ದ್ವಿತೀಯೋ ವನಗಃ ತೃತೀಯಃ ಕೃಚ್ಛ್ರಸಾಧನಃ ॥**

**ಚತುರ್ಥೋ ಭಿಕ್ಷುರುದ್ದಿಷ್ಟಃ ಸರ್ವಸಂಗವಿವರ್ಜಿತಃ।**[೧೮]

ಈ ನಾಲ್ಕು ಆಶ್ರಮಗಳಲ್ಲಿ ಮೊದಲನೆಯದ್ದಾದ ಬ್ರಹ್ಮಚರ್ಯವನ್ನು ವಿಶೇಷವಾಗಿ ನಿರೂಪಿಸಲಾಗಿದೆ. ಶ್ರೇಷ್ಠವಾದ ಬ್ರಹ್ಮಚರ್ಯದ ನಿಯಮಗಳು, ಆಚಾರ ವಿಚಾರಾದಿಗಳನ್ನು ತಿಳಿಸಲಾಗುತ್ತದೆ. ಅಧ್ಯಯನದ ಕಾಲ, ಅನಧ್ಯಯನದ ಅವಧಿ, ಮೊದಲಾದವುಗಳನ್ನೂ ಕಾಣಬಹುದು.

ನಾಲ್ಕನೆಯ ಕಲ್ಲೋಲದ ಆರನೆಯ ತರಂಗದಲ್ಲಿ ಆಚಾರದಕುರಿತಂತೆ ತಿಳಿಸಲಾಗಿದೆ.:–

**ವರ್ಣಾನಾಮಾಶ್ರಮಾಣಾಂ ಚ ಸದಾಚಾರಾಃ ಪೃಥಕ್ ಪೃಥಕ್।**

**ವಿಶೇಷತಃ ಸಮುದ್ದಿಷ್ಟಾ ಅಥ ಸಾಧಾರಣಾಂಸ್ತು ತಾನ್ ॥**

**ಆಚಾರಾನಾಮಾಶ್ರಮಸ್ಥಾನಾಂ ವರ್ಣಯಾಮಿ ಸುಧೀಃ ಶೃಣು।**[೧೯]

**ರಾಜನೈತಿಕವಿಚಾರಗಳು–** ಐದನೆಯ ಕಲ್ಲೋಲದಲ್ಲಿ ಹತ್ತನೇ ತರಂಗದಲ್ಲಿನ ವಿಶೇಷವಾಗಿ ವರ್ಣಿತವಾಗಿರುವ ವಿಚಾರಗಳೆಂದರೆ ಶತ್ರುನಿಗ್ರಹ ಮೊದಲಾದ ರಾಜನೀತಿಯ ಉಪದೇಶ, ಹನ್ನೊಂದನೆಯ ತರಂಗದ ಮೊದಲಿಗೇ ಪಟ್ಟಾಭಿಷೇಕದ ನೀತಿ, ಹದಿನಾಲ್ಕನೆಯ ತರಂಗದಲ್ಲಿ ರಣಜಯಾವಹ ಎಂದರೆ ಯುದ್ಧಗೆಲ್ಲುವ ನೀತಿ ಎಂಬಿತ್ಯಾದಿ ನೀತಿಮಾರ್ಗಗಳನ್ನು ಕಾಣಾಬಹುದು. ಮುಂದೆ ಹದಿನೈದನೇ ತರಂಗದಲ್ಲಿ,

**ವಶ್ಯಸಾಮಂತತಾಶಕ್ತಿರ್ದಕ್ಷತ್ವಂ ಕ್ಷಿಪ್ರಕಾರಿತಾ ॥**

**ಉದ್ಯೋಗಿತ್ವಮನಿರ್ವೇದಃ ಸರ್ವದಾ ಧರ್ಮಕಾರಿತಾ।**

**ಆನಾನುರಾಗಃ ಸೌಭಾಗ್ಯಂ ಶಸ್ತ್ರಶಾಸ್ತ್ರೇಷು ನೈಪುಣಮ್॥**

**ದೋಷಾನುರೂಪದಂಡತ್ವಂ ಸರ್ವಸತ್ವಹಿತೈಷಿತಾ।**

**ಪ್ರಿಯವಾದಃ ಪ್ರಸನ್ನತ್ವಂ ಭೃತ್ಯಾನಾಂ ಸುಖದೃಶ್ಯತಾ॥**

**ಆರ್ಜವಂ ತತ್ವದರ್ಶಿತ್ವಮಕ್ಷುದ್ರಪರಿವಾರತಾ ।**

**ಮಂಗಲಾಚಾರ ಇತ್ಯಾತ್ಯೈರ್ಗುಣೈರ್ಯುಕ್ತೋ ನೃಪೋ ವರಃ॥**[೨೦]

ಮಂತ್ರಿ, ಸಚಿವ, ಜೌತಿಷಿಕ, ಸೇನಾಪತಿ, ಧರ್ಮಾಧಿಕಾರಿ, ದಂಡಧರ ಎಂಬಿತ್ಯಾದಿ ರಾಜನ ಸಹವರ್ತಿಗಳ ಕುರಿತಂತೆ ಅವರಲ್ಲಿರಬೇಕಾದ ಉತ್ತಮೋತ್ತಮ ಗುಣಗಳ ಕುರಿತಂತೆ ಸಪ್ತಾಂಗ ಸಹಿತವಾದ ರಾಜನೀತಿಯನ್ನು ಸವಿಸ್ತರವಾಗಿ ನಿರೂಪಿಸಲಾಗಿದೆ. ಹೀಗೆ ಪ್ರಕೃತ ಗ್ರಂಥ ಅರ್ವಾಚೀನ ಕಾಲದಲ್ಲೂ ರಾಜ್ಯಾಡಳಿತದಲ್ಲಿ ತಮ್ಮ ತಮ್ಮ ವೃತ್ತಿಯ ವ್ಯಾಪ್ತಿ, ಉತ್ತಮ ರಾಜ್ಯಾಡಳಿತಕ್ಕೆ ಪೂರಕವಾದ ನೈತಿಕ ವಿಚಾರಗಳನ್ನುಜ್ಞಾಪಿಸುತ್ತದೆ.

ಧರ್ಮಾಚರಣೆ ಯಾವಾಗ ಮಾಡಬೇಕೆಂಬ ಜಿಜ್ಞಾಸೆ ಸಾಮಾನ್ಯನಿಗೂ ಇರುತ್ತದೆ. ಇದಕ್ಕುತ್ತರವಾಗಿ –

**ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚೈವ ನ ಜೀರ್ಯತಾ।**

**ಶಕ್ಯಾಃ ಸಾಧಯಿತುಂ ತಸ್ಮಾದ್ಯುವಾ ಧರ್ಮಂ ಸಮಾಚರೇತ್॥**[೨೧]

ಎಂಬುದಾಗಿ ವಿವರಿಸಿದೆ. ಸಾಮಾನ್ಯವಾಗಿ ಮಾನವನ ಮೂರು ಅವಸ್ಥೆಗಳಲ್ಲಿ ಮೂರನೆಯದ್ದಾದ ವಾರ್ಧಕ್ಯದಲ್ಲಿ ಭಗವಂತ, ಆಧ್ಯಾತ್ಮಗಳ ಕುರಿತಾದ ಚಿಂತನೆಗಳು ಸಾಮಾನ್ಯವಾಗಿರುತ್ತವೆ. ಆದರೆ ಇಲ್ಲಿ ಯೌವನಾವಸ್ಥೆಯಲ್ಲಿಯೇ ಇಂತಹ ಯೋಚನೆ ಯೋಜನೆಗಳಿಗೆ ಸಕಾಲವೆಂದು ನಿರೂಪಿಸಿರುವರು.

ಎಂಟನೆಯ ಕಲ್ಲೋಲದ ಎಂಟನೆಯ ತರಂಗದಲ್ಲಿ ಬಸವ ಚೆನ್ನಾಂಬಿಕೆಯು ತನ್ನ ಸುತನ ಕುರಿತಾಗಿ ಮಾಡುವ ಧರ್ಮೋಪದೇಶ ಹೀಗಿದೆ–

ಉಕ್ತಂತ್ವಂ ನಾನ್ಯಥಾ ಬ್ರೂಯಾಃ ಕ್ವಾಪಿ ಕಾರ್ಯಂ ನ ಸಂತ್ಯಜ ।
ಮಾ ಮುಂಚ ಮಧುರಾಲಾಪಂ ನ ಬ್ರೂಯಾದ್ಧೃದಯಂ ಶಠೇ ॥
ಅಮಾರ್ಗೇ ನ ಪದಂ ಕುರ್ಯಾಃ ಸ್ವೇಷು ಭೇದಂ ನ ಕಾರಯ।
ಪಾಪಂ ವಿಮುಂಚಸುಕೃತಂ ಕುರು ಶಂಭೋಃ ಪದಂ ಭಜ ॥
ಭಜ ಭೂತೇಷು ಕರುಣಾಂ ಸ್ಂಶ್ರಿತಾನ್ ಪರಿಪಾಲಯ ।
ನ ನಿಂದಾಂರಚಯಾನ್ಯೇಷು ನ ಸ್ವೈರಮಿಹಸಂಚರ ॥
ಜಯ ಕಾಮಾದಿಕಾಣ್ ದೋಷಾನ್ ಜುಗುಪ್ಸಾಂ ಚ ಭವೇ ಕುರು।
ವ್ಯಸನೇ ಭಯಮುನ್ಮುಂಚ ಜಹೀಹಿ ವಿಭವೇ ಮದಮ್ ॥
ಸಂಪ್ರಧಾರಯ ತತ್ವಾನಿ ಭಾವಯಾದ್ವೈತಮಾಂತರಮ್।
ನಾತಿವರ್ತಸ್ವ ಸಮಯಂ ವೇದಜ್ಞಾಂಶ್ಚ ಸಮರ್ಚಯ ॥
ಸ್ವಪ್ನಂ ಭಾವಯ ಸಂಸಾರಂ ಕೋಽಹಮಿತ್ಯನುಚಿಂತಯ।
ಹಸೇರಹಸನೀಯಸ್ತ್ವಂ ಬ್ರೂಹಿವಾಕ್ಯಮನುತ್ತಮಮ್ ॥
ಜನಸ್ತುತಿಪದೇ ಜೀವೇರನಾವೃತ್ತಿಗತಿಂ ಭಜೇ ।
ಶಿವಂ ಪ್ರಸಾದ್ಯ ಬಹುಧಾ ಸಂತತಾನಂದಭಾಗ್ಭವ ॥[೨೨]

ಮೇಲಿನ ಏಳು ಶ್ಲೋಕಗಳಲ್ಲಿ ಒಬ್ಬ ರಾಜನಾದವನು ವರ್ತಿಸಬೇಕಾದ ರೀತಿಯನ್ನು ಸಂಗ್ರಹಿಸಿ ಸಮಗ್ರವಾಗಿ ತಿಳಿಸಲಾಗಿದೆ. ಇದು ಕೇವಲ ಒಬ್ಬ ರಾಜನಿಗೆ ಮಾತ್ರವಾಗಿರದೆ ಸಾರ್ವತ್ರಿಕವಾಗಿ ಪ್ರತಿಯೊಬ್ಬ ಪುರುಷನಿಗೂ ಸಾರ್ಥಕ ಜೀವನಕ್ಕೆ ತೋರುವ ದಾರಿಯಂತಿದೆ.

ಈ ರೀತಿಯಾಗಿ ಪ್ರಸ್ತುತ ಗ್ರಂಥದಲ್ಲಿ ಅತ್ಯಂತ ಮೌಲ್ಯಯುತವಾದ ನೈತಿಕ ವಿಚಾರಗಳನ್ನು ವಿಸ್ತಾರವಾಗಿಯೂ ಮನೋಜ್ಞವಾಗಿಯೂ ತಿಳಿಯಪಡಿಸಲಾಗಿದೆ. ಹಲವು ಅಂಶಗಳು ಸಾರ್ವಕಾಲಿಕವಾದ ನೀತಿಯನ್ನೂ ಬೋಧಿಸುವವುಗಳಾಗಿವೆ.

**ಉಪಸಂಹಾರ**

ಕರ್ನಾಟಕಲ್ಲಿ ಮೂಡಿಬಂದ ಸಂಸ್ಕೃತ ಸಾಹಿತ್ಯ ಕೃತಿಗ್ಳಲ್ಲಿ ಅತ್ಯಂತ ವಿರಳವಾದ ಬಹುವಿಷಯವಸ್ತುಕೋಶ ಈ ಶ್ರೀಶಿವತತ್ವರತ್ನಾಕರ. ಈ ಗ್ರಂಥದಲ್ಲಿ ನಾವು ಹಲವಾರು ವೈಶಿಷ್ಟ್ಯಗಳನ್ನು ಕಾಣಬಹುದು. ಪ್ರಸ್ತುತ ಪ್ರಬಂಧದಲ್ಲಿ ಆಯ್ದುಕೊಂಡಿರುವ ವಿಷಯಗಳಾದ ಯೋಗ ಮತ್ತು ನೈತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸವಿಸ್ತೃತವಾಗಿ ತಿಳಿಯಬಹುದು. ಏಳನೆಯ ಕಲ್ಲೋಲದ ಹದಿನೈದನೆಯ ತರಂಗದಲ್ಲಿ ಸಂಪೂರ್ಣವಾಗಿ ಯೋಗಸಂಬದ್ಧ ವಿಚಾರಗಳೇಕೂಡಿವೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಯೋಗಶಾಸ್ತ್ರದ ಉಲ್ಲೇಖಗಳನ್ನೂ ಕಾಣಬಹುದು. ಅಂತೆಯೇ ನೈತಿಕವಿಚಾರಗಳು; ಇದು ಸಂಪೂರ್ಣ ಗ್ರಂಥದಲ್ಲಿ ಹಲವು ಸಂದರ್ಭಗಳಲ್ಲಿ ಗ್ರಥಿತವಾಗಿದೆ. ರಾಜನೀತಿಯನ್ನೇ ಬಹುವಾಗಿ ನಿರೂಪಿಸಲಾಗಿದ್ದರೂ ಪ್ರತಿಯೊಂದು ವಿಚಾರದಲ್ಲೂ ಜನಸಾಮಾನ್ಯನಿಗೆ ಅನುಕೂಲಕರವೂ ಭೋಧ್ಯವೂ ಆಗಿರುವ ಬಿಂದುಗಳು ಅಡಗಿರುವುದು ಗ್ರಂಥದ ಹಿರಿಮೆಯಾಗಿದೆ.

ಈ ಅಧ್ಯಯನದಿಂದ ಕಂಡುಕೊಳ್ಳಬಹುದಾದ ಕೆಲವೊಂದು ಪ್ರಧಾನ ಅಂಶಗಳೆಂದರೆ–

- ಶ್ರೀ ಶಿವತತ್ವರತ್ನಾಕರವು ಸಂಸ್ಕೃತದ ವಿಶ್ವಕೋಶಗಳಲ್ಲೊಂದಾಗಿದ್ದು, ಪಾಶ್ಚಾತ್ಯ ಚಿಂತನೆಗಳಂತೆ ಭಾರತದ ಸಾಹಿತ್ಯಪರಂಪರೆಯಲ್ಲಿ ವಿಶ್ವಕೋಶಗಳ ವಿರಳತೆಗೆ ಸವಾಲಾಗಿ ಕಂಗೊಳಿಸುತ್ತದೆ.
- ಸಂಸ್ಕೃತಭಾಷೆಯಲ್ಲೂ ವಿಶ್ವಕೋಶದ ಉಪಲಬ್ಧತೆಗೆ ಸಾಕ್ಷೀಭೂತವಾಗಿದೆ.
- ವಿದ್ಯಾಪ್ರಕಾರಗಳು, ಶಾಸ್ತ್ರಪ್ರಕಾರಗಳೂ ಸೇರಿದಂತೆ ರಾಜವಂಶದ ಪರಿಚಯವನ್ನೂ ಈ ಕೃತಿ ಮಾಡಿಕೊಡುತ್ತಿದೆ.
- ಸಂಸ್ಕೃತದಲ್ಲಿ ನಿಹಿತವಾಗಿರುವ ವಿವಿಧ ವಸ್ತು ವಿಷಯಗಳ ವೈಶಾಲ್ಯ ಮತ್ತು ಅಗಾಧತೆಗೆ ಹಿಡಿದಕನ್ನಡಿಯಾಗಿದೆ.
- ಅನ್ಯಾನ್ಯ ಗ್ರಂಥಗಳಲ್ಲಿ ಪ್ರಾಪ್ತವಾಗುವ ಯೋಗ ನೈತಿಕವಿಚಾರಗಳೇ ಮೊದಲಾದುವುಗಳನ್ನು ಏಕತ್ರ ಪಡೆಯಬಹುದಾಗಿದೆ.
- ಅಧ್ಯಯನಾಕಾಂಕ್ಷಿಗಳಿಗೆ ಪಥದರ್ಶನಮಾಡುವ ಕೈದೀವಿಗೆಯಾಗಿ ಈ ಗ್ರಂಥ ಕಾಣುತ್ತಿದೆ.
- ಅತ್ಯಂತ ಸರಳವಾದ ಭಾಷಾಶೈಲಿಯಿಂದ ಕೂಡಿದ್ದು ಸಾಮಾನ್ಯರಿಗೂ ಅರ್ಥವಾಗುವಂತಹ ನಿರೂಪಣಾ ಕ್ರಮ ಇದರಲ್ಲಿದೆ. ಭಾಷಾಪ್ರೌಢಿಮೆಯಿಂದ ಹೊರತಾಗಿ ವಿಷಯಸಂಕೀರ್ಣತೆ ಇರದೆ. ಆಧ್ಯಯನಯೋಗ್ಯವಾಗಿದೆ.

ಈ ರೀತಿ ಶ್ರೀಶಿವತತ್ವರತ್ನಾಕರ ವೆಂಬ ವಿಶ್ವಕೋಶವು ತನ್ನ ಗರ್ಭದಲ್ಲಿ ಹೊಂದಿರುವ ಹಲವಾರು ರತ್ನ ಸದೃಶ ವಿಚಾರಗಳಲ್ಲಿ ನನ್ನ ಕಿಂಚಿತ್ ಪ್ರಯತ್ನದಲ್ಲಿ ಸರ್ವಮಾನ್ಯವಾದ ಯೋಗವಿಚಾರಗಳು ಹಾಗೂ ನೈತಿಕವಿಚಾರಗಳನ್ನು ಆಯ್ದು ನಿರೂಪಿಸಿರುವೆನು. ಈ ಗ್ರಂಥವು ಅನ್ವರ್ಥವಾಗಿ ರತ್ನಾಕರ(ಸಾಗರ)ವಾಗಿದ್ದು, ತನ್ನೊಳಗೆ ಇಂತಹ ಹಲವಾರು ವಿಚಾರ ರತ್ನಗಳನ್ನು ಹೊಂದಿದೆ. ಇವೆಲ್ಲ ಸಾರಸ್ವತ ಲೋಕದಲ್ಲಿ ಪ್ರಕಟಿತವಾಗಲಿ.

**ಜೀಯಾತ್ ಗೀರ್ವಾಣ ಭಾರತೀ**

**ಅಡಿಟಿಪ್ಪಣಿ**

೧. *ಶ್ರೀ ಶಿವತತ್ವರತ್ನಾಕರ, ಸಂ।ಪ್ರೋ.ಮಲ್ಲೇಪುರಂ ಜಿ. ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩, ದೈವಸಂಪುಟಂ ಸಮಾಪ್ತಿವಾಕ್ಯ ಶ್ಲೋಕ ೫.ಪು.ಸಂ.೧೬೩.*

೨. *ಶ್ರೀ ಶಿವತತ್ವರತ್ನಾಕರ, ಸಂ।ಪ್ರೋ.ಮಲ್ಲೇಪುರಂ ಜಿ. ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩, ಸೃಷ್ಟಿಸಂಪುಟಂ ಮೂರನೇ ಕಲ್ಲೋಲದಸಮಾಪ್ತಿವಾಕ್ಯ.ಪು.ಸಂ.೩೧೧.*

೩. *ಶ್ರೀ ಶಿವತತ್ವರತ್ನಾಕರ, ಸಂ।ಪ್ರೋ.ಮಲ್ಲೇಪುರಂ ಜಿ. ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩, ಶಾಸ್ತ್ರಸಂಪುಟಂ ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೨ ಪು.ಸಂ.೩೯೬.*

೪. *ಶ್ರೀ ಶಿವತತ್ವರತ್ನಾಕರ, ಸಂ।ಪ್ರೋ.ಮಲ್ಲೇಪುರಂ ಜಿ. ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩, ಸೃಷ್ಟಿಸಂಪುಟಂ ಒಂದ್‌ನೇ ಕಲ್ಲೋಲ ಎರಡನೇ ತರಂಗ,ಶ್ಲೋ.೩೮,೩೯ ಪು.ಸಂ೨೯.*

೫. *ಶ್ರೀ ಶಿವತತ್ವರತ್ನಾಕರ, ಸಂ।ಪ್ರೋ.ಮಲ್ಲೇಪುರಂ ಜಿ. ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩, ಸೃಷ್ಟಿಸಂಪುಟಂ ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೩ ಪು.ಸಂ.೩೯೬.*

೬. *ಶ್ರೀ ಶಿವತತ್ವರತ್ನಾಕರ, ಸಂ।ಪ್ರೋ.ಮಲ್ಲೇಪುರಂ ಜಿ. ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩, ಸೃಷ್ಟಿಸಂಪುಟಂ ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೩ ಪು.ಸಂ.೩೯೬.*

೭. *ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೭ ಪು.ಸಂ.೩೯೭.*

*೮. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೧೦ ಪು.ಸಂ.೩೯೬.*

*೯. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೮೩ ಪು.ಸಂ.೪೦೮.*

*೧೦. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೧೨೮ ಪು.ಸಂ.೪೧೫.*

*೧೧. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೧೬೧ಪು.ಸಂ.೪೨೦.*

*೧೨. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೫ ಪು.ಸಂ.೩೯೭.*

*೧೩. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೮ ಪು.ಸಂ.೩೯೮.*

*೧೪. ಏಳನೇ ಕಲ್ಲೋಲಹದಿನೈದನೇ ತರಂಗ,ಶ್ಲೋ.೪೭ಪು.ಸಂ.೪೦೨.*

*೧೫. ಐದನೇ ಕಲ್ಲೋಲ ಹನ್ನೊಂದನೇ ತರಂಗ,ಶ್ಲೋ.೨೬ರಿಂದ೨೮ ಪು.ಸಂ.೪೦೦.*

*೧೬. ಐದನೇ ಕಲ್ಲೋಲ ಹನ್ನೆರಡನೇ ತರಂಗ,ಶ್ಲೋ.೪೩ ಪು.ಸಂ.೪೧೯.*

*೧೭. ಏಳನೇ ಕಲ್ಲೋಲ ಹದಿನೈದನೇ ತರಂಗ,ಶ್ಲೋ.೧೨ .*

*೧೮. ನಾಲ್ಕನೇ ಕಲ್ಲೋಲ ನಾಲ್ಕನೇ ತರಂಗ,ಶ್ಲೋ.*

*೧೯. ನಾಲ್ಕನೇ ಕಲ್ಲೋಲ ಆರನೇ ತರಂಗ,ಶ್ಲೋ.೧ ಪು.ಸಂ.೮೫.*

*೨೦. ಐದನೇ ಕಲ್ಲೋಲ ಹದಿನೈದನೇ ತರಂಗ,ಶ್ಲೋ.೧೩ರಿಂದ೧೬.*

*೨೧. ಒಂಭತ್ತನೇ ಕಲ್ಲೋಲ ಎರಡನೇ ತರಂಗ,ಶ್ಲೋ.೨೩.*

*೨೨. ಎಂಟನೇ ಕಲ್ಲೋಲ ಎಂಟನೇ ತರಂಗ,ಶ್ಲೋ.೭೭ರಿಂದ೮೩. ಪು.ಸಂ.೫೮೬, ೫೮೭.*

**ಪರಾಮರ್ಶನ ಗ್ರಂಥಗಳು**

೧. ಶ್ರೀ ಶಿವತತ್ವ ರತ್ನಾಕರ, ಸೃಷ್ಟಿಸಂಪುಟ, ಸಂ. ಪ್ರೋ.ಮಲ್ಲೇಪುರಂ ಜಿ.ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩.

೨. ಶ್ರೀ ಶಿವತತ್ವ ರತ್ನಾಕರ, ಲೋಕಸಂಪುಟ, ಸಂ. ಪ್ರೋ.ಮಲ್ಲೇಪುರಂ ಜಿ.ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩.

೩. ಶ್ರೀ ಶಿವತತ್ವ ರತ್ನಾಕರ, ವಿದ್ಯಾಸಂಪುಟ, ಸಂ. ಪ್ರೋ.ಮಲ್ಲೇಪುರಂ ಜಿ.ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೩.

೪. ಶ್ರೀ ಶಿವತತ್ವ ರತ್ನಾಕರ, ಶಾಸ್ತ್ರಸಂಪುಟ, ಸಂ. ಪ್ರೋ.ಮಲ್ಲೇಪುರಂ ಜಿ.ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೪.

೫. ಶ್ರೀ ಶಿವತತ್ವ ರತ್ನಾಕರ, ದೈವ ಸಂಪುಟ, ಸಂ. ಪ್ರೋ.ಮಲ್ಲೇಪುರಂ ಜಿ.ವೆಂಕಟೇಶ, ದರೇಸಾ ಪ್ರಕಾಶನ, ಬೆಂಗಳೂರು೨೦೧೪.

೬. https://www.scribd.com

೭. www.daresa.in/publications.html

೮. www.saivism.net/articles/tattvas.asp

೯. www.docs-engine.com/.../shiva-tatva-ratnakara.

VOLUME - VIII, ISSUE - I - JANUARY - MARCH - 2019
**AJANTA - ISSN 2277 - 5730 -IMPACT FACTOR - 5.5 (www.sjifactor.com)**

# ೨. ಅನರ್ಥಗಳಿಗೆ ದ್ವಾರ ದ್ಯೂತ

**ಸಂಪಾದನೆ**
ಬಿ.ಗೋಪಾಲಾಚಾರ್.
ನಿರ್ದೇಶಕರು. ಶ್ರೀವಾದಿರಾಜ ಸಂಶೋಧನ ಪ್ರತಿಷ್ಠಾನ.
ಗೀತಾಮಂದಿರ. ಉಡುಪಿ.

---

ಈ ಜಗದಲ್ಲಿ ಮಾನವನು ಯುಗ ಬಾಧೆಗೆ ಒಳಗಾಗದೆ ಜೀವಿಸಬೇಕು. ದೃಢವಾದ ತತ್ವನಿಷ್ಠೆಯಿಂದ ಎಲ್ಲವನ್ನೂ ಎದುರಿಸಿ ಜಯಿಸಬೇಕು. ಯಾವ ಪ್ರಲೋಭನೆಗಳಿಗೂ ವಶನಾಗಬಾರದು. ಇವನನ್ನೇ ಧೀರ–ಪಂಡಿತ ಎಂದು ಶ್ರೀಕೃಷ್ಣನು ಪ್ರಶಂಸಿಸಿದ್ದಾನೆ. ಸಾಧನೆಯ ಈ ಮಾರ್ಗದಲ್ಲಿ ಅನರ್ಥಗಳಿಗೆ ಕಾರಣವಾದ ಅನೇಕ ವಿಷಯಪದಾರ್ಥಗಳು ನಮ್ಮನ್ನು ಸಮೀಪಿಸುತ್ತವೆ. ಪ್ರಲೋಭಿಸುತ್ತವೆ. ಎಂದಿಗೂ ಎಚ್ಚರ ತಪ್ಪಬಾರದು. ಮನಸ್ಸನ್ನು ಕೆಡಿಸುವ ವಿಷಯಗಳ ಸೇವನೆಯಿಂದ ಅನರ್ಥಗಳನ್ನು ಹೊಂದಿದವರ ಇತಿಹಾಸವನ್ನೇ ಸಂಸ್ಕೃತ ಸಾಹಿತ್ಯವು ತೆರೆದಿಡುತ್ತದೆ. ಈ ಮೂಲಕವಾಗಿ ನಮ್ಮಲ್ಲಿ ಜಾಗೃತಿ ಮೂಡಲಿ ಎಂಬುವುದು ಹಿರಿಯರ ಅಪೇಕ್ಷೆ.

ಪುರಾಣದಲ್ಲಿ "ಪ್ರಾತಃ ದ್ಯೂತಪ್ರಸಂಗೇನ ಮಧ್ಯಾಹ್ನೇ ಸ್ತ್ರೀಪ್ರಸಂಗತಃ । ರಾತ್ರೌ ಚೋರಪ್ರಸಂಗೇನ ಕಾಲೋಗಚ್ಛತಿ ಧೀಮತಾಮ್" ಎಂದು ಅರ್ಥಗರ್ಭಿತವಾದ ಪುರಾಣ ಪ್ರಸಿದ್ಧವಾದ ಶ್ಲೋಕವಿದೆ. ಈ ಶ್ಲೋಕವನ್ನು ಓದುವಾಗ ಸಾಮಾನ್ಯವಾದ ಸಂಸ್ಕೃತದ ಪರಿಚಯವಿರುವವರಿಗೆ ಸರಿಯಾದ ಅರ್ಥವಾಗುವುದಿಲ್ಲ. ಮಹಾತ್ಮರು ಬೆಳಗ್ಗೆ ದ್ಯೂತದ ಆಟದಿಂದ, ಮಧ್ಯಾಹ್ನದಲ್ಲಿ ಸ್ತ್ರೀವಿಹಾರದಿಂದ, ರಾತ್ರಿಯಲ್ಲಿ ಕಳ್ಳತನದಿಂದ ಸಮಯವನ್ನು ಕಳೆಯುತ್ತಾರೆ ಎಂದು ಮೇಲ್ನೋಟದಿಂದ ಅರ್ಥವಾಗುತ್ತದೆ. ಇದು ಸರಿಯಾದ ಅರ್ಥವಲ್ಲ, ಜ್ಞಾನಿಗಳು ಬೆಳಗಿನ ಪ್ರಶಾಂತ ಸಮಯದಲ್ಲಿ ದ್ಯೂತದ ಪ್ರಸಂಗವೇ ಯಾವುದರಲ್ಲಿ ಪ್ರಧಾನವಾಗಿದೆಯೋ ಅಂಥಹ ಮಹಾಭಾರತವನ್ನು , ಉತ್ತಮ ಸ್ತ್ರೀಯಾದ ಸೀತಾದೇವಿಯ ಚರಿತೆ ಯಾವುದರಲ್ಲಿ ಪ್ರಧಾನವಾಗಿ ವರ್ಣಿತವಾಗಿದೆಯೋ ಅಂಥಹ ರಾಮಾಯಣವನ್ನು ಮಧ್ಯಾಹ್ನದಲ್ಲಿ, ನಮ್ಮೆಲ್ಲರ ಪಾಪಗಳನ್ನು ಕದಿಯುವ ಶ್ರೀಕೃಷ್ಣನ ಚರಿತ್ರೆಯನ್ನು ಪ್ರಧಾನವಾಗಿ ವರ್ಣಿಸುವ ಭಾಗವತವನ್ನು ರಾತ್ರಿಯಲ್ಲಿ ಅಧ್ಯಯ ಮಾಡಿ ಸಮಯವನ್ನು ಕಳೆಯುತ್ತಾರೆ ಎಂಬುದು ಸರಿಯಾದ ಅರ್ಥ.

ಭಗವಾನ್ ವೇದವ್ಯಾಸರು ಪುರಾಣಗಳಲ್ಲಿ ಕಥೆಗಳೊಂದಿಗೆ ಮಾನವನ ಬದುಕನ್ನು ತಿದ್ದಲು ನೀತಿಗಳನ್ನು ವರ್ಣಿಸಿದ್ದಾರೆ. ಹದಿನೆಂಟು ಪುರಾಣಗಳು ಅನೇಕ ಕಥೆಗಳ ಮೂಲಕ ಮನಸ್ಸಿನಲ್ಲಿ ಉತ್ತಮವಾದ ಪ್ರಭಾವವನ್ನು ಬೀರುತ್ತವೆ. ಅನರ್ಥಗಳಿಗೆ ದ್ವಾರವಾದ ದ್ಯೂತದ ಬಗ್ಗೆ ಸರಿಯಾದ ಎಚ್ಚರಿಕೆಯನ್ನು ಮಹಾಭಾರತವು ನೀಡಿದೆ. ಒಂದು ಸುಂದರವಾದ ಕುಟುಂಬವು ಒಡೆದು ಛಿದ್ರವಾಗಿದ್ದು ದ್ಯೂತದ ಪ್ರಸಂಗದಿಂದ ಎಂಬುವುದನ್ನು ತಿಳಿಸುತ್ತದೆ ಮಹಾಭಾರತ. ಕಲಿಯ ನಿತ್ಯ ಸನ್ನಿಧಾನವಿರುವ ಜೂಜಿನ ಆಟವನ್ನು ಸಜ್ಜನರು ಎಂದಿಗೂ ಆಡಬಾರದು. ಹಿರಿಯರ ಮಾತನ್ನು ಧಿಕ್ಕರಿಸಿ ದುಷ್ಟರೊಂದಿಗೆ ಆಟವಾಡಿ ಸರ್ವಸ್ವವನ್ನೂ ಕಳೆದುಕೊಂಡ ಧರ್ಮರಾಜನೇ ಪ್ರತ್ಯಕ್ಷ ಸಾಕ್ಷಿ. ಈ ಘಟನೆಯನ್ನು ಮಹಾಭಾರತದ ಮಾತಿನಲ್ಲೇ ನೋಡೋಣ.

ಪಾಂಡವರು ಶ್ರೀಕೃಷ್ಣನ ಶ್ರೀವೇದವ್ಯಾಸರ ನಿರ್ದೇಶನದಲ್ಲಿ ವೈಭವದಿಂದ ರಾಜಸೂಯ ಯಾಗವನ್ನು ಮಾಡಿದರು. ಪಾಂಡವರ ಸಂಪತ್ತಿನ ವೈಭವ ಹಾಗೂ ಯಶಸ್ಸನ್ನು ಕಂಡು ದುರ್ಯೋಧನನು ಹತಾಶನಾದನು. ಮಾತ್ಸರ್ಯದಿಂದ

ಸೊರಗಿದನು. ತನ್ನ ನೋವನ್ನು ತಂದೆಯಾದ ಧೃತರಾಷ್ಟ್ರನ ಬಳಿಯಲ್ಲಿ ತೋಡಿಕೊಂಡನು. ಈ ಪ್ರಸಂಗದಲ್ಲಿ ದುಷ್ಟನಾದ ಶಕುನಿಯು ಜೂಜಿಗೆ ಪಾಂಡವರನ್ನು ಆಹ್ವಾನಿಸಲು ಸೂಚಿಸುತ್ತಾನೆ. ಜೂಜಿನ ಸರಿಯಾದ ಹಿಡಿತವಿಲ್ಲದಿದ್ದರೂ ಇಷ್ಟದಿಂದಾಗಿ ಧರ್ಮರಾಜನು ಬರುತ್ತಾನೆ. ಮೋಸದಿಂದ ಸೋಲಿಸಿ ರಾಜ್ಯದ ಸಂಪತ್ತನ್ನೆಲ್ಲ ಪಡೆದುಕೊಳ್ಳಬಹುದು ಎಂಬುದು ಶಕುನಿಯ ಸಲಹೆ. ಧೃತರಾಷ್ಟ್ರನಿಗೆ ಈ ಸಲಹೆ ಪ್ರಾರಂಭದಲ್ಲಿ ರುಚಿಸದಿದ್ದರೂ ಪುತ್ರವ್ಯಾಮೋಹದಿಂದ ಅಂಗೀಕರಿಸುತ್ತಾನೆ. ಆದರೂ ತಡವರಿಸುತ್ತ ನುಡಿದ " ಜೂಜು ಕಲಹಕ್ಕೆ ಕಾರಣವಾದದ್ದು. ವಿದುರನ ಸಲಹೆಯನ್ನು ಪಡೆಯುವುದು ಉತ್ತಮ" ಎಂದು.

"ವೈರಂ ವಿಕೋಶಂ ಸೃಜತಿ" ಜೂಜು ಯಾವತ್ತಿಗೂ ಒಳ್ಳೆಯದಲ್ಲ. ಅದು ನಮ್ಮಲ್ಲಿ ವೈರವನ್ನುಂಟು ಮಾಡಿ ನಮ್ಮ ಬೊಕ್ಕಸವನ್ನೆಲ್ಲ ಬರಿದಾಗಿಸುತ್ತದೆ. ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಆಲೋಚಿಸು ಎಂದು ಸ್ಪಷ್ಟವಾಗಿ ತಿಳಿಸುತ್ತಾನೆ.

ಈ ಎಲ್ಲ ಘಟನೆಗಳನ್ನೂ ತಿಳಿದ ಸಾತ್ವಿಕನಾದ ವಿದುರ ಓಡೋಡಿ ಬರುತ್ತಾನೆ. ಕುಲನಾಶದ ಭಯದಿಂದ ಧೃತರಾಷ್ಟ್ರನಲ್ಲಿ " ಕುಲನಾಶಾತ್ ಬಿಭೇಮಿ ಪುತ್ರೈಃ ಭಿನ್ನೈಃ ಕಲಹಸ್ತೇ ಧೃವಂ ಸ್ಯಾತ್ ಏವಂ ಶಂಕೇ ದ್ಯೂತಕೃತೇ ನರೇಂದ್ರ" ಜೂಜಿನ ಆಟದಿಂದ ನಮ್ಮ ಕುಲವೇ ನಾಶವಾಗುವ ಭಯವು ನನ್ನನ್ನು ಕಾಡುತ್ತಿದೆ ಎಂದು ನಿವೇಸಿಕೊಂಡ. ಆದರೂ ಧೃತರಾಷ್ಟ್ರನ ಆದೇಶದಂತೆ ಧರ್ಮರಾಜನನ್ನು ಆಟಕ್ಕೆ ಕರೆತರುತ್ತಾನೆ. ಈ ಪ್ರಸಂಗದಲ್ಲಿ ವಿದುರನ ಮಾತನ್ನು ಗಮನಿಸಬೇಕು. " ನಾಗಂತವ್ಯಮಿತಿ ಪ್ರಾಹ ದೋಷಾನುಕ್ತ್ವಾ ಅಕ್ಷಜಾನ್ ಬಹೂನ್" ಜೂಜಿನಲ್ಲಿರುವ ಅನೇಕ ದೋಷಗಳನ್ನು ಮೊದಲು ತಿಳಿಸಿ ಆಟಕ್ಕೆ ಹೋಗುವುದು ಉತ್ತಮವಲ್ಲ. "ವಿದ್ವನ್ ಶ್ರೇಯ ಇಹಾಚರಸ್ವ" ನಿನ್ನ ಬುದ್ಧಿಯಲ್ಲಿ ವಿಮರ್ಷಿಸು ಎಂದು ಹೇಳಿ ಧರ್ಮರಾಜನಿಗೆ ರಾಜಾಜ್ಞೆಯನ್ನು ತಿಳಿಸುತ್ತಾನೆ. ಜೂಜಿನಲ್ಲಿ ಪ್ರೀತಿವುಳ್ಳ ಧರ್ಮರಾಜನು ವಿಮರ್ಶಿಸದೆ ಹೊರಟನು. ಪುತ್ರವ್ಯಾಮೋಹದಿಂದ ಧೃತರಾಷ್ಟ್ರನು ಕುರುಡನಾದರೆ ಬಂಧುವ್ಯಾಮೋಹದಿಂದ ಧರ್ಮರಾಜನು ಕುರುಡನಾದನು. ವಾಸ್ತವಿಕವಾಗಿ ಧರ್ಮರಾಜನಿಗೆ ಜೂಜಿನಲ್ಲಿರುವ ಗುಣದೋಷಗಳು ತಿಳಿದಿವೆ. ವಿದುರನ ಮುಂದೆ ಅವನೇ ಹೇಳುವ ಮಾತು " ದ್ಯೂತೇ ಕ್ಷತ್ತಃ ಕಲಹೋ ವಿದ್ಯತೇ ನಃ ಕೋ ವೈ ದ್ಯೂತಂ ರೋಚತೇ ಬುಧ್ಯಮಾನಃ" ಜೂಜು ಎಂಬುವುದು ಕಲಹಕ್ಕೆ ಕಾರಣವಾದದ್ದು. ಯಾರು ಇದನ್ನು ಇಷ್ಟಪಡುತ್ತಾರೆ ? ಎಂದು.

ಜೂಜೆಂಬುವುದು ಪೂರ್ವಕಾಲದಿಂದಲೂ ವೈರಾಗ್ಯಕ್ಕಾಗಿಯೇ ಭಗವಂತನು ನಿರ್ಮಿಸಿದ ಕ್ರೀಡೆಯಾಗಿದೆ. ವಿವೇಕಿಯಾದವನು ವಿನೋದಕ್ಕಾಗಿಯೂ ಇದನ್ನು ಆಡಬಾರದು. ಆಡುವರನ್ನು ರಾಜನು ಕೊಲ್ಲಿಸಬೇಕೆಂದು ಮನುಸ್ಮೃತಿಯಲ್ಲಿ ಸ್ಪಷ್ಟವಾಗಿದೆ. ಸ್ತ್ರೀಸಂಗ-ಜೂಜು-ಬೇಟೆ-ಮದ್ಯ ಇವುಗಳು ಐಶ್ವರ್ಯನಾಶಕ್ಕೆ ಕಾರಣವಾಗಿವೆ ಎಂದು ಶ್ರೀಕೃಷ್ಣನೂ ತಿಳಿಸುತ್ತಾನೆ. ಜೂಜಿನಿಂದ ರಾಜ್ಯವನ್ನು ಸಂಪಾದಿಸಿದ ಉದಾಹರಣೆಗಳು ತೀರ ವಿರಳ. ರಾಜ್ಯವನ್ನು ಕಳೆದುಕೊಂಡ ಉದಾಹರಣೆಗಳೇ ಹೇರಳ. ರಾಜ್ಯವನ್ನು ಗೆದ್ದಾಗ ಸಂತಸಕ್ಕಾಗಿ ಜೂಜನ್ನು ಆಡುವ ಪದ್ಧತಿ ಇದೆ. ಇದೆಲ್ಲವೂ ತಿಳಿದಿದ್ದರೂ ಧರ್ಮರಾಜ ಕಲ್ಯಾವೇಶದಿಂದ ಜೂಜಿಗಾಗಿ ಸಿದ್ಧನಾದನು. ಸರ್ವಸ್ವವನ್ನೂ ಪಣವಾಗಿಟ್ಟು ಸೋತನು. ನಿಷಿದ್ಧವಾದ ಹವ್ಯಾಸಗಳಿಂದಾಗುವ ಪರಿಣಾಗಳನ್ನು ಊಹಿಸಲೂ ಸಾಧ್ಯವಿಲ್ಲ. ನಳಮಹಾರಾಜನೂ ಇದಕ್ಕೆ ಉದಾಹರಣೆಯಾಗಿದ್ದಾನೆ.

ಯಾಜ್ಞ್ಯವಲ್ಕ್ಯ ಸ್ಮೃತಿಯಲ್ಲಿ ಜೂಜಿನ ಆಟಕ್ಕೆ ನಿಯಮಗಳನ್ನು ತಿಳಿಸಿದ್ದಾರೆ. ಪ್ರಜೆಗಳಿಗೆ ಮನೋರಂಜನೆಯನ್ನುಂಟು ಮಾಡಲು ಪ್ರತ್ಯೇಕವಾಗಿ ಜೂಜಿಗೆ ವ್ಯವಸ್ಥೆಯನ್ನು ಪ್ರಜಾಹಿತದಲ್ಲಿರುವ ರಾಜನು ಮಾಡಬೇಕು. ಯಾವ ಕಾರಣಕ್ಕೂ ಪ್ರಜೆಗಳಿಗೆ ಹಿಂಸೆಯಾಗಬಾರದು. ಮನೋರಂಜನೆಗಾಗಿ ಆಡುವ ಆಟದಲ್ಲಿ ಕೆಟ್ಟದೇನಿಲ್ಲ. ಮೋಸದ ಜೂಜಿನಾಟಗಳನ್ನು ರಾಜನು ತಡೆಯಬೇಕು. ಇದರಿಂದ ಅವ್ಯವಹಾರಗಳು ನಡೆಯದಂತೆ ನೋಡಿಕೊಳ್ಳುವುದು ರಾಜನ ಪ್ರಧಾನ ಕಾರ್ಯವಾಗಿದೆ. ಶ್ರೀಕೃಷ್ಣನು ತನ್ನ ಮಡದಿಯರೊಂದಿಗೆ ಜೂಜಾಟವನ್ನು ಆಡುತ್ತಿರುವುದನ್ನು ನಾರದರು ನೋಡಿದ್ದಾರೆ. ಇದು ವಿನೋದದ ಆಟವಾಗಿದೆ. ದೀಪಾವಳಿಯ ಸಂಭ್ರಮದ ಬಲಿಪಾಡ್ಯದಂದು ಜೂಜಾಡುವುದನ್ನು ಪುರಾಣಗಳಲ್ಲಿ ವರ್ಣಿಸಿದ್ದಾರೆ.

ದ್ಯೂತಪ್ರತಿಪತ್ ಎಂದೇ ಈ ದಿನವನ್ನು ಹೆಸರಿಸಿದ್ದಾರೆ. "ತುಷ್ಟ್ಯರ್ಥಂ ಕಾರ್ತಿಕೇ ತಸ್ಯ ಶುಕ್ಲಾ ಯಾ ಪ್ರತಿಪತ್ತಿಥಿಃ। ವಿಷ್ಣೋರ್ದತ್ತಾ ಮಹೌ ತತ್ರ ಕೌಮುದೀ ಸಾ ಸ್ಮೃತಾ ಬುಧೈಃ" ಎಂದು ಪಾದ್ಮಪುರಾಣದಲ್ಲಿ ನಿರೂಪಿತವಾಗಿದೆ. ಈ ದಿನದಂದು ಶಿವನು ತನ್ನ ಮಡದಿಯಾದ ಪಾರ್ವತಿಯೊಂದಿಗೆ ವಿನೋದಕ್ಕಾಗಿ ಜೂಜಿನ ಆಟವಾಡಿದನೆಂದು " ಶಂಕರಶ್ಚ ಪುರಾ ದ್ಯೂತಂ ಸಸರ್ಜ ಸುಮನೋಹರಮ್। ಕಾರ್ತಿಕೇ ಶುಕ್ಲಪಕ್ಷೇ ತು ಪ್ರಥಮೇಹನಿ ಭೂಪತೆ । ಜಿತಶ್ಚ ಶಂಕರಸ್ತತ್ರ ಜಯಂ ಲೇಭೇ ಚ ಪಾರ್ವತೀ। ತಸ್ಮಾತ್ ದ್ಯೂತಂ ಪ್ರಕರ್ತವ್ಯಂ ಪ್ರಭಾತೇ ತತ್ರ ಮಾನವೈಃ । ತಸ್ಮಿನ್ ದ್ಯೂತೇ ಜಯೋ ಯಸ್ಯ ತಸ್ಯ ಸಂವತ್ಸರಃ ಶುಭಃ" ಎಂದು ಭವಿಷ್ಯೋತ್ತರ ಪುರಾಣವು ವರ್ಣಿಸಿದೆ. ಈ ದಿನದಲ್ಲಿ ವಿನೋದಕ್ಕಾಗಿ ಆಟವಾಡಿ ಗೆದ್ದರೆ ವರ್ಷವಿಡೀ ಗೆಲುವನ್ನು ಪಡೆಯುತ್ತಾನೆ ಎಂಬ ಭಾವನೆಯಿತ್ತು. ಇದು ಕೂಡ ಸಂಭ್ರಮದ ದ್ಯೋತಕವಾದ ದ್ಯೂತವಾಗಿದೆ. ಸುಖ–ಸಂಪದಗಳ ಸಂಪಾದನೆಗಾಗಿ ಆಡುವ ಜೂಜಿನಾಟವನ್ನು ಹಿರಿಯರು ನಿಷೇಧಿಸಿದ್ದಾರೆ.

ಹೀಗೆ ಸಂಸ್ಕೃತ ಸಾಹಿತ್ಯದಲ್ಲಿ ಅನೇಕ ಪ್ರಸಂಗಗಳಲ್ಲಿ ದ್ಯೂತದ ವಿಚಾರಗಳು ಬಂದಿವೆ. ವೇದದಲ್ಲೂ ವರ್ಣಿಸಲ್ಪಟ್ಟಿದೆ. ಕೋಜಾಗರ ವ್ರತ ಮೊದಲಾದ ಮಾಸಧರ್ಮಗಳಲ್ಲೂ ದ್ಯೂತದ ವರ್ಣನೆಯನ್ನು ಕಾಣಬಹುದು. ಈ ಪ್ರಸಂಗದ ಮೂಲಕ ಅನೇಕ ನೀತಿಗಳನ್ನೂ ಉಪದೇಶಿಸುತ್ತಾರೆ. ಇದು ಸಂಸ್ಕೃತ ಸಾಹಿತ್ಯದ ವಿಶೇಷತೆ.

**ಗ್ರಂಥ ಋಣ**

೧. ಮಹಾಭಾರತ ಕನ್ನಡ. [ಶ್ರೀಕಾಣಿಯೂರು ಮಠ]

೨. ಮಹಾಭಾರತ ತಾತ್ಪರ್ಯನಿರ್ಣಯ – ಪ್ರೋ. ವ್ಯಾಸನಕೆರೆ ಪ್ರಭಂಜನಾಚಾರ್

# ೩. ಉಡುಪಿಯ ಶ್ರೀಕೃಷ್ಣನ ಪೂಜಾ ವೈಭವ ಹದಿನಾಲ್ಕು ಲೋಕದೊಡೆಯನಿಗೆ ಹದಿನಾಲ್ಕು ಪೂಜೆ

**ಬಿ. ಜಿ. ಪರಿಮಳ**
ಬಿ.ಕಾಂ ೨ನೇ ವರ್ಷ.
ಉಪೇಂದ್ರಪೈ ಮೆಮೋರಿಯಲ್ ಕಾಲೇಜ್
ಉಡುಪಿ. ಕರ್ನಾಟಕ

"ಗೋಪಾಲಮಂತ್ರಂ ಭಜತಾಂ ಫಲಪ್ರದಃ ಏಕೇನ ರೂಪೇಣ ಭುವಿ" ಎಂಬ ವಚನದಂತೆ ಕಲಿಯುಗದಲ್ಲಿ ಶ್ರೀಕೃಷ್ಣಮಂತ್ರೋಪಾಸಕರನ್ನು ಅನುಗ್ರಹಿಸಲು ಜಗದೊಡೆಯನಾದ ಶ್ರೀಕೃಷ್ಣನು ಒಂದು ರೂಪದಿಂದ ಉಡುಪಿಯಲ್ಲಿ ನೆಲೆಸಿದ್ದಾನೆ. ಶ್ರೀಕೃಷ್ಣನು ತಾಯಿಯ ಇಚ್ಛೆಯಂತೆ ವಿಶ್ವಕರ್ಮನಿಂದ ತನ್ನ ಸುಂದರಮೂರ್ತಿಯನ್ನು ನಿರ್ಮಿಸಿದನು. ಆ ಮೂರ್ತಿಯಲ್ಲಿ ಸನ್ನಿಹಿತನಾಗಿ ದೇವಕಿ ಮತ್ತು ರುಕ್ಮಿಣೀದೇವಿಯರಿಂದ ಅನೇಕ ವರ್ಷಗಳ ಕಾಲ ಪೂಜೆಯನ್ನು ಸ್ವೀಕರಿಸಿ ದ್ವಾರಕೆಯಲ್ಲೇ ನೆಲೆಸಿದನು. ವಿಶ್ವಗು'ರುಗಳಾದ ಶ್ರೀಮಧ್ವಾಚಾರ್ಯರ ಭಕ್ತಿಗೆ ಒಲಿದು ಸಕಲ ಭಾಗ್ಯಗಳ ತವರಾದ ದ್ವಾರಕೆಯನ್ನು ಬಿಟ್ಟು ಇಲ್ಲಿಗೆ ಬಂದಿದ್ದಾನೆ. ಧನ್ಯವಾಯಿತು ಉಡುಪಿ. ಕಲಿಮಲದಿಂದ ಬಳಲಿದ ಸಜ್ಜನರ ಸಂರಕ್ಷಣೆಗಾಗಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದರು. ಶ್ರೀಕೃಷ್ಣನ ನಿರಂತರ ಪೂಜಾದಿ ಧಾರ್ಮಿಕ ವ್ಯವಸ್ಥೆಗಾಗಿ ಎಂಟು ಜನ ಶಿಷ್ಯರಿಗೆ ಸನ್ಯಾಸದೀಕ್ಷೆಯನ್ನು ನೀಡಿದರು. ಹದಿನಾಲ್ಕು ಲೋಕದರಸನಿಗೆ ಇಲ್ಲಿ ಪ್ರತಿದಿನವೂ ಅಷ್ಟಯತಿಗಳಿಂದ ಹದಿನಾಲ್ಕು ಬಗೆಯ ಪೂಜೆಗಳು.

ಬೆಳಗಿನ ಉಷಃಕಾಲದಿಂದ ರಾತ್ರಿಯ ಶಯನೋತ್ಸವ ಪೂಜೆಯವರೆಗೆ ಬಗೆಬಗೆಯ ಪೂಜೆಗಳು ನಡೆಯುತ್ತವೆ. ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯುವ ಅತ್ಯಂತ ಅಪೂರ್ವವಾದ ಪೂಜೆಗಳ ವಿವರಗಳನ್ನು ನಿಮಗಾಗಿ ನೀಡುತ್ತಿದ್ದೇವೆ.

**೧. ನಿರ್ಮಾಲ್ಯ ವಿಸರ್ಜನೆ ಪೂಜೆ**

ಬೆಳಗ್ಗೆ ೪.೩೦ಕ್ಕೆ ಶ್ರೀಕೃಷ್ಣ ಮಠದ ಬಾಗಿಲನ್ನು ತೆರೆಯುವರು. ಆ ಸಮಯದಲ್ಲಿ ಶ್ರೀಪಾದರು ಮಧ್ವಸರೋವರದಲ್ಲಿ ಸ್ನಾನ ಮಾಡಿ ಜಪತರ್ಪಣಾದಿಗಳನ್ನು ಮುಗಿಸಿ ಗರ್ಭಗುಡಿಯನ್ನು ಪ್ರವೇಶಿಸುವರು. ಆಗ ವಿವಿಧ ಮಂಗಳಘೋಷಗಳು ಮೊಳಗುವುದು. ವೇದ ಪಾಠಕರು ವೇದ ಘೋಷವನ್ನು ಮಾಡುತ್ತಾರೆ. ಆ ವಾತಾವರಣವೇ ಭಕ್ತಿಯನ್ನು ವೃದ್ಧಿಗೊಳಿಸುತ್ತದೆ. ಶ್ರೀಕೃಷ್ಣನಿಗೆ ಹಿಂದಿನ ದಿನದ ಅಲಂಕಾರದ ಹೂ–ತುಳಸಿ–ಗಂದಾದಿಗಳನ್ನು ವಿಸರ್ಜಿಸುತ್ತಾರೆ. ಈಗ ಶ್ರೀಕೃಷ್ಣನ ವಿಗ್ರಹದ ಮೇಲೆ ಯಾವ ವಸ್ತ್ರ–ಆಭರಣ–ಹೂವು ಗಂಧಾಧಿಗಳೂ ಇರುವುದಿಲ್ಲ. ಮೂಲ ವಿಗ್ರಹದ ಭವ್ಯದರ್ಶನ. ಇದೇ "ವಿಶ್ವರೂಪ ದರ್ಶನ" ಇದಾದ ಮೇಲೆ ಪಂಚೋಪಚಾರ ಪೂಜೆ, ತುಳಸಿ–ಗಂಧಾಧಿಗಳಿಂದ ಅರ್ಚನೆ, ನೈವೇದ್ಯ ಸಮರ್ಪಣೆ, ಹರಿವಾಣದ ಆರತಿ, ಶ್ರೀಕೃಷ್ಣನಿಗೆ ಅವಲಕ್ಕಿ ಮೊಸರು, ನೆಲಗಡಲೆ, ಶುಂಠಿ, ಬೆಲ್ಲ, ತೆಂಗಿನಕಾಯಿ, ತಾಂಬೂಲವನ್ನು ಸಮರ್ಪಿಸುತ್ತಾರೆ.

**೨. ಉಷಃಕಾಲ ಪೂಜೆ**

ಪೂಜ್ಯ ಶ್ರೀಪಾದರು ನಿರ್ಮಾಲ್ಯ ವಿಸರ್ಜನೆ ಮಾಡಿದ ನಂತರ ಶ್ರೀಕೃಷ್ಣನಿಗೆ ಬೆಳ್ಳಿಯ ಕೊಡಗಳಿಂದ ಅಭಿಷೇಕ ಮಾಡುತ್ತಾರೆ. ಹಿಂದಿನ ದಿನದ ಅವಶೇಷವನ್ನೆಲ್ಲ ತೆಗೆದು ಅಭಿಷೇಕ ಮಾಡಿ ಪಂಚೋಪಾಚಾರ ಪೂಜೆಯನ್ನು ಮಾಡುತ್ತಾರೆ.

ಈ ಉಷಃಕಾಲದ ಪೂಜೆಯಲ್ಲಿ ಶ್ರೀಕೃಷ್ಣನಿಗೆ ತುಳಸಿ ಗಂಧಗಳ ಸಮರ್ಪಣೆಯನ್ನು ಮಾಡಿ ಅನ್ನ, ಹಾಲು, ಮೊಸರು, ಸೀಯಾಳ, ಬಾಳೆಹಣ್ಣು, ತೆಂಗಿನಕಾಯಿ, ತಾಂಬೂಲವನ್ನು ಅರ್ಪಿಸುತ್ತಾರೆ. ಎಂಟರ ನಂಟನಿಗೆ ೮ ಆರತಿಗಳನ್ನು ಎತ್ತುತ್ತಾರೆ.

**೩. ಅಕ್ಷಯಪಾತ್ರೆ ಪೂಜೆ/ಗೋಪೂಜೆ**

"ಅನ್ನಬ್ರಹ್ಮ" ಈ ಸನ್ನಿಧಿಯಲ್ಲಿ ನಿರಂತರ ಅನ್ನದಾನ ನಡೆಯಲಿಕ್ಕೆ "ಅಕ್ಷಯ ಪಾತ್ರೆ – ಸಟ್ಟುಗ"ವನ್ನು ಶ್ರೀಮಧ್ವಾಚಾರ್ಯರು ನೀಡಿದ್ದಾರೆ. ಪರ್ಯಾಯದ ಹಸ್ತಾಂತರ ಸಮಯದಲ್ಲಿ ಇದರ ಪಾತ್ರವೇ ಪ್ರಮುಖವಾದದ್ದು. ಪೂಜ್ಯ ಶ್ರೀಪಾದರು ಶ್ರೀಕೃಷ್ಣ ದಿವ್ಯ ಸನ್ನಿಧಿಯಲ್ಲಿ ಈ ಅಕ್ಷಯ ಪಾತ್ರೆಯನ್ನು ಪೂಜಿಸುತ್ತಾರೆ. ಈ ಸಮಯಕ್ಕೆ ಗರ್ಭಗುಡಿಯ ಬಳಿ ಬಂದು ನಿಂತ ಶ್ರೀಕೃಷ್ಣನ ಸನ್ನಿಧಾನವಿರುವ ಗೋವಿನ ಪೂಜೆಯನ್ನು ನೆರವೇರಿಸುತ್ತಾರೆ. ದೇವರಿಗೆ ಸಮರ್ಪಿಸಿದ ಅರಳು ಬೆಲ್ಲ, ಬಾಳೆಹಣ್ಣುಗಳನ್ನು ನೀಡುತ್ತಾರೆ.

**೪. ಪಂಚಾಮೃತ ಅಭಿಷೇಕ ಪೂಜೆ**

ಪೂಜ್ಯ ಶ್ರೀಪಾದರು ಶ್ರೀಕೃಷ್ಣನ ಮೇಲಿರುವ ಗಂಧಾದಿಗಳನ್ನು ತೆಗೆದು ಚಿನ್ನದ ನಾಣ್ಯಗಳಿಂದ ಅಭಿಷೇಕವನ್ನು ಮಾಡುತ್ತಾರೆ. ಶ್ರೀಕೃಷ್ಣನಿಗೆ ಪಂಚಾಮೃತದ ಅಭಿಷೇಕ. ಮೊದಲು ತುಪ್ಪದಿಂದ, ನಂತರ ಹಾಲು ಮೊಸರು ಜೇನು ಸಕ್ಕರೆ ಬಾಳೆಹಣ್ಣುಗಳಿಂದ ಅಭಿಷೇಕ. ದ್ವಾತ್ರಿಂಶತ್ ಲಕ್ಷಣೋಪೇತನಿಗೆ ಪ್ರತಿದಿನ ೩೨ ಎಳನೀರಿನನಿಂದ ಅಭಿಷೇಕ, ಅಭಿಷೇಕವಾದ ಮೇಲೆ ಪಂಚೋಪಚಾರ ಪೂಜೆ, ಗಂಧ–ತುಳಸಿ–ಹೂಗಳನ್ನು ಸಮರ್ಪಿಸುತ್ತಾರೆ. ಅನ್ನ–ಹಣ್ಣು–ತಾಂಬೂಲವನ್ನು ಅರ್ಪಿಸಿ ಎಂಡು ಆರತಿಗಳನ್ನು ಎತ್ತುವರು.

**೫. ಉದ್ವರ್ತನ ಪೂಜೆ**

ಶ್ರೀಕೃಷ್ಣನ ವಿಗ್ರಹವನ್ನು ಪಂಚಾಮೃತ ಅಭಿಷೇಕದ ನಂತರ ಸ್ವಚ್ಛಗೊಳಿಸುತ್ತಾರೆ. ಹೆಸರು ಕಾಳಿನಹಿಟ್ಟಿನಿಂದ ವಿಗ್ರಹವನ್ನು ತಿಕ್ಕಿ ಬಿಸಿನೀರಿನಿಂದ ಅಭ್ಯಂಜನ ಮಾಡಿಸುತ್ತಾರೆ. ನಂತರ ಪಂಚೋಪಚಾರಪೂಜೆ–ಗಂಧ–ತುಳಸಿ–ಹೂವನ್ನು ಅರ್ಪಿಸಿ ಅನ್ನ ಹಾಲು, ಬೆಣ್ಣೆ–ಎಳನೀರುಗಳನ್ನು ನಿವೇದಿ, ಒಂದು ಹರಿವಾಣದ ಆರತಿಯನ್ನು ಎತ್ತುವರು.

**೬. ಕಲಶ ಪೂಜೆ**

ಶ್ರೀ ಕೃಷ್ಣನಿಗೆ ಪೂಜ್ಯ ಶ್ರೀಪಾದರು ಶುದ್ಧೋದಕ ಸ್ನಾನ ಮಾಡಿಸಲು ಜಲಪೂರ್ಣವಾದ ಎರಡು ಬಂಗಾರದ ಕಲಶಗಳನ್ನು ಪೂಜಿಸುವರು. ಭಗವಂತನ ನೂರಾರು ರೂಪಗಳನ್ನು ಆ ಕಲಶದಲ್ಲಿ ಆವಾಹಿಸುವರು. ಗಂಗಾದಿ ಮಹಾನದಿಗಳನ್ನು ಚಿಂತಿಸಿ ಕಲಶವನ್ನು ಪೂಜಿಸುವರು.

**೭. ತೀರ್ಥಪೂಜೆ**

ಶ್ರೀಕೃಷ್ಣನಿಗೆ ಕಲಶಪೂಜೆಯನ್ನು ನೆರವೇರಿಸಿ, ಆ ಕಲಶೋದಕದಿಂದ ಮಹಾಭಿಷೇಕವನ್ನು ಮಾಡುವರು. ಭಗವಂತನ ದಿವ್ಯ ಸನ್ನಿಧಾನದ ವಿಗ್ರಹದ ಮೇಲಿನಿಂದ ಬಂದ ಆ ನೀರೆ "ತೀರ್ಥ" ಅದು ಅನೇಕ ಕಾಯಿಲೆಗಳನ್ನು ಪಾಪಗಳನ್ನು ತೊಳೆದು ನಮ್ಮನ್ನು ಉದ್ಧರಿಸುತ್ತದೆ. "ವಿಷ್ಣುಪಾದೋದಕಂ ಪಾವನಂ ಶುಭಮ್"

**೮. ಅಲಂಕಾರ ಪೂಜೆ**

ಮಹಾಭಿಷೇಕದ ನಂತರ ವಸ್ತ್ರದಿಂದ ವಿಗ್ರಹವನ್ನು ಒರೆಸಿ ಗಂಧ–ತುಳಸಿ–ಪುಷ್ಪಾದಿಗಳನ್ನು ಅರ್ಪಿಸುತ್ತಾರೆ. ವಿವಿಧ ಆಭರಣಗಳು, ಕವಚ– ಕಿರೀಟ–ಪ್ರಭಾವಳಿಗಳಿಂದ ಅಲಂಕರಿಸುತ್ತಾರೆ. ಈ ಸುಂದರ ವಿಗ್ರಹಕ್ಕೆ ದಿನಕ್ಕೊಂದು ಅಲಂಕಾರ. ನವರಾತ್ರಿಯ ಸಮಯ ಮತ್ತು ಪ್ರತಿ ಶುಕ್ರವಾರಗಳಂದು ಸ್ತ್ರೀ ಅಲಂಕಾರ. ಶ್ರಾವಣ ಶನಿವಾರಂದು ಶ್ರೀನಿವಾಸನ ಅಲಂಕಾರ. ಈ ಸೊಬಗು, ಈ ವೈಭವ ಇನ್ನೆಲ್ಲೂ ನೋಡಲಾಗದು.

**೯. ಅವಸರ ಸನಕಾದಿ ಪೂಜೆ**

ಶ್ರೀಕೃಷ್ಣ ಇಲ್ಲಿಯವರೆಗೆ ೮ ಪೂಜೆಗಳನ್ನು ಬೇರೆ ಬೇರೆ ಪೂಜ್ಯ ಶ್ರೀಪಾದರು ನೆರವೇರಿಸುತ್ತಾರೆ. ಆದರೆ ಈ ಪೂಜೆ ಮತ್ತು ಮುಂದಿನ ಮಹಾಪೂಜೆಯನ್ನು ಪರ್ಯಾಯ ಶ್ರೀಪಾದರೇ ನೆರವೇರಿಸಬೇಕು. ಸನಕಾದಿ ಮಹಾಮುನಿಗಳಿಗೂ ಶ್ರೀ ಕೃಷ್ಣನನ್ನು ಪೂಜಿಸಲು ಅವಕಾಶ. ಆ ಮಹಾಮುನಿಗಳು ಬಂದು ಪೂಜೆಯನ್ನು ನೇರವೇರಿಸುವರೆಂಬ ನಂಬಿಕೆ.

**೧೦. ಮಹಾಪೂಜೆ**

ಭಕ್ತರ ಕಲ್ಯಾಣಕ್ಕಾಗಿ ಶ್ರೀಕೃಷ್ಣನನ್ನು ಪ್ರತಿಷ್ಠಾಪಿಸಿದ ಶ್ರೀಮಧ್ವಾಚಾರ್ಯರು ಪರ್ಯಾಯ ಶ್ರೀಪಾದರಲ್ಲಿ ಸನ್ನಿತರಾಗಿ ತಾವೇ ಮಹಾಪೂಜೆಯನ್ನು ನೆರವೇರಿಸುತ್ತಾರೆ. ವಿಷ್ಣು ಸಹಸ್ರನಾಮಗಳಿಂದ ಅರ್ಚನೆಯನ್ನು ಮಾಡಿ ಬಗೆಬಗೆಯ ನೈವೇದ್ಯಗಳನ್ನು ಸಮರ್ಪಿಸಿ ಮಹಾ-ಮಂಗಳಾರತಿಯನ್ನು ಎತ್ತುವರು.ಇದು ಹಗಲಿನ ಅಂತಿಮಪೂಜೆ.

**೧೧. ಚಾಮರ ಸೇವಾ ಪೂಜೆ**

ಸಂಜೆಯ ಪೂಜೆಗಳು ಪ್ರಾರಂಭಗೊಳ್ಳುತ್ತದೆ. ಸಂಜೆ ಸೂರ್ಯನು ಅಗಸದಲ್ಲಿ ಮುಳುತ್ತಿದ್ದಂತೆ ಪರ್ಯಾಯ ಶ್ರೀಪಾದರು ಮದ್ವಸರೋವರದಲ್ಲಿ ಸ್ಥಾನವನ್ನು ಮಾಡಿ ಸಾಯಂಕಾಲೀನ ಅನುಷ್ಠಾನವನ್ನು ಪೂರೈಸುವರು. ಪರಿಚಾರಕರು ತೀರ್ಥಮಂಟಪವನ್ನು ಅಲಂಕರಿಸಿ ರಾತ್ರಿ ಪೂಜೆಗೆ ಸಿದ್ಧಗೊಳಿಸಿರುವರು. ದೇವರಿಗೆ ಸಮರ್ಪಿಸಲು ಎರಡು ದೊಡ್ಡ ಹೆಡಿಗೆ ತೊಂಬ ಅರಳು, ಅದರ ಮೇಲೆ ಬೆಲ್ಲ, ಬೆಳ್ಳಿಯ ಹರಿವಾಣದಲ್ಲಿ ಅರಳಿನ ಲಡ್ಡುಗಳು, ಹಾಲು, ಹಣ್ಣು ಕಾಯಿ ತಾಂಬೂಲಗಳನ್ನು ಇಟ್ಟಿರುತ್ತಾರೆ. ಸುತ್ತಲೂ ಎಣ್ಣೆಯ ದೀಪಗಳಿಂದ ಒಳಪ್ರದೇಶ ಭವ್ಯವಾಗಿ ಕಂಗೊಳಿಸುತ್ತದೆ. ವೇದಘೋಷ-ಮಂಗಳವಾದ್ಯದಲ್ಲಿ ಪೂಜ್ಯಶ್ರೀಪಾದರು ಗರ್ಭಗುಡಿಯಿಂದ ತೀರ್ಥಮಂಟಪಕ್ಕೆ ಶ್ರೀಕೃಷ್ಣನ ಉತ್ಸವಮೂರ್ತಿಯನ್ನು ತರುವರು. ಶ್ರೀಕೃಷ್ಣನಿಗೆ ಚಾಮರಸೇವೆಯನ್ನು ವಿಷ್ಣುಸಹಸ್ರನಾಮ ಸ್ತೋತ್ರವನ್ನು ಪಠಿಸುತ್ತಾ ಸಮರ್ಪಿಸುತ್ತಾರೆ. ಚಾಮರಸೇವೆಯ ಸಂದರ್ಭದಲ್ಲಿ ಪಾಲ್ಗೊಂಡು ಭಕ್ತರು ಭಕ್ತಿಯ ಸಾಗರದಲ್ಲಿ ಮುಳುಗುತ್ತಾರೆ. ಶ್ರೀಕೃಷ್ಣನಿಗೆ ತೀರ್ಥ ಮಂಟಪದಲ್ಲಿ ನೈವೇದ್ಯವನ್ನು ಸಮರ್ಪಿಸಿ ಆರತಿಯನ್ನು ಬೆಳಗುವರು.

**೧೨. ರಾತ್ರಿಪೂಜೆ**

ತೀರ್ಥಮಂಟಪದಲ್ಲಿ ಚಾಮರಸೇವೆಯನ್ನು ಪೂರೈಸಿ ರಾತ್ರಿಯ ಪೂಜೆಗಾಗಿ ಪೂಜ್ಯ ಶ್ರೀಪಾದರು ಗ್ರ್ಭಗುಡಿಯಲ್ಲಿ ಪ್ರವೇಶಿಸುವರು. ನಾಮಾವಾಳಿಗಳಿಂದ ಪುಷ್ಪಾರ್ಚನೆ ಮಾಡಿ ಶ್ರೀಕೃಷ್ಣನಿಗೆ ಅನ್ನ-ದೋಸೆ-ಹಾಲು-ಹಣ್ಣು-ಪಂಚಕಜ್ಜಾಯ-ಸೀಯಾಳ-ತಾಂಬೂಲಗಳನ್ನು ಸಮರ್ಪಿಸುವರು. ದೇವರಿಗೆ ಮಂಗಳಾರತಿಯನ್ನು ಬೆಳಗುವರು.

**೧೩. ಮಂಟಪ ಪೂಜೆ**

ರಾತ್ರಿಯ ಪೂಜೆಯನ್ನು ಶ್ರೀಕೃಷ್ಣನಿಗೆ ಸಮರ್ಪಿಸಿ ಮುಖ್ಯಪ್ರಾಣ, ಶ್ರೀಮಧ್ವಾಚಾರ್ಯರ ಪೂಜೆಯನ್ನೂ ನೆರವೇರಿಸಿ ಗರುಡನನ್ನೂ ಪೂಜಿಸಿ, ಶ್ರೀಕೃಷ್ಣನ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ತಂದು ತೀರ್ಥಮಂಟಪದಲ್ಲಿ ಸಿದ್ಧವಾದ ಚಿನ್ನದ ತೊಟ್ಟಿಲಲ್ಲಿ ಇಟ್ಟು ಪೂಜಿಸುತ್ತಾರೆ. ಇದನ್ನು ವಾಲಗ ಮಂಟಪ ಪೂಜೆ ಎಂದೂ ಕರೆಯುತ್ತಾರೆ. ಈ ಸಮಯಲ್ಲಿ ಅಷ್ಟಾವಧಾನ ಸೇವೆ ನಡೆಯುತ್ತದೆ. ಸೇವಾಕರ್ತರಿಗೆ ಮತ್ತು ಎಲ್ಲರಿಗೂ ಈ ಸನ್ನಿಧಿಯಲ್ಲಿ ಮಂತ್ರಾಕ್ಷತೆಯನ್ನು ನೀಡಿ ಆಶೀರ್ವದಿಸುತ್ತಾರೆ.

**೧೪. ಏಕಾಂತಸೇವೆ/ಶಯನೋತ್ಸವ**

ಶ್ರೀಕೃಷ್ಣನ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿಟ್ಟು ವಾದ್ಯಗಳ ಜೊತೆಗೆ ಒಳಭಾಗದಲ್ಲಿ ಪ್ರದಕ್ಷಿಣೆ ಬರುತ್ತಾರೆ. ಗರ್ಭಗೃಹದ ಮೊದಲು ಸಿಗುವ ಕೋಣೆಯಲ್ಲಿ ಅಲಂಕೃತವಾದ ಚಿನ್ನದ ತೊಟ್ಟಿಲಲ್ಲಿ ಉತ್ಸವ ಮೂರ್ತಿಯನ್ನು ಮಲಗಿಸುತ್ತಾರೆ. ಪೂಜ್ಯ ಶ್ರೀಪಾದರು ತೊಟ್ಟಿಲ್ಲನ್ನು ತೂಗುತ್ತಿದ್ದರೆ, ಪರಿವಾರದವರು ತಾಳಬದ್ಧವಾಗಿ ಜೋಗುಳ ಹಾಡುತ್ತಾರೆ. ಶ್ರೀಕೃಷ್ಣನಿಗೆ ಪಂಚೋಪಚಾರ ಪೂಜೆಯನ್ನು ಸಮರ್ಪಿಸಿ ಕಷಾಯದ ಹಾಲು, ಗಂಧ, ಪರಿಮಳದ ಎಣ್ಣೆ, ಪತ್ರೆ, ಜಾಕಾಯಿ, ಲವಂಗ ಮೊದಲಾದ ಪರಿಮಳ ದ್ರವ್ಯಗಳನ್ನು ಅರ್ಪಿಸಿ ಆರತಿಯನ್ನು ಬೆಳಗುತ್ತಾರೆ. ಇಲ್ಲಿ ಶ್ರೀಗಳು ಮತ್ತು ಪರಿವಾರದವರು ಮಾತ್ರ ಭಾಗವಹಿಸಿ ಪೂಜೆ ಮುಗಿಸಿ ಹೊರಬರುತ್ತಾರೆ. ಇದು 'ಏಕಾಂತಸೇವೆ", ಮರುದಿನ ಉಷಃಕಾಲದವರೆಗೆ ಯೋಗೇಶ್ವರನು ಯೋಗಾನಿದ್ರೆಯಲ್ಲಿ ಪವಡಿಸುತ್ತಾನೆ. ಇಲ್ಲಿಗೆ ಹದಿನಾಲ್ಕುಲೋಕದೊಡೆಯನಾದ ಶ್ರೀಕೃಷ್ಣನ ಸನ್ನಿಧಿಯಲ್ಲಿ ನಡೆಯುವ ಹದಿನಾಲ್ಕು ಪೂಜೆಗಳು ಮುಕ್ತಾಯಗೊಳ್ಳುತ್ತದೆ.

# ೪. ಅಧ್ಯಾತ್ಮವೀಥಿಯ ಆತ್ಮಾನುಭವದ ಸಂತೃಪ್ತಿಯ ಪರಾಕಾಷ್ಠೆ – 'ಭಕ್ತಿ'

**ಚೇತನಾ ಆಚಾರ್, ಎನ್.**
ಉಡುಪಿ

ದಾಸಸಂಗೀತದಲ್ಲಿ ಅನಂತಾರ್ಥದ ಬಾಹುಳ್ಯವಿರುವ ಭಕ್ತಿ ಎಂಬ ಶಬ್ದದ ಅಗತ್ಯತೆ, ಅನಿವಾರ್ಯತೆ, ಅನವರತವಾಗಿರುವುದರಿಂದ ಭಕ್ತಿಯ ಅವಲೋಕನ, ವಿಶ್ಲೇಷಣೆ ಪ್ರಬಂಧದಲ್ಲಿ ಅಡಕವಾಗಿರುವ ಪ್ರಾಮುಖ್ಯವನ್ನು ಗಮನಿಸುತ್ತಾ ಭಕ್ತಿಯ ಬಗ್ಗೆ ಕಿರು ವಿಮರ್ಶೆ.

ಭಗವಂತನ ಸಾಮೀಪ್ಯ ಬಯಸಿದ ಭಗವದ್ಭಕ್ತ ಮಹಾನ್ ಜ್ಞಾನಿಗಳು ಆತನನ್ನು ತಿಳಿಯುವ ನಿಟ್ಟಿನಲ್ಲಿ ಪ್ರತ್ಯಕ್ಷಾನುಮಾನಾಗಮಗಳಿಂದ ಪ್ರಮಾಣಗಳ ಪರಿಧಿಯಲ್ಲಿ ಸಾಗುತ್ತಾ ಆಚಾರ್ಯ ಮಧ್ವರು ತಿಳಿಹೇಳಿದ ತತ್ತ್ವಜ್ಞಾನದ ಸುಧೆಯಲ್ಲಿ ಮಿಂದು ಪಾವಿತ್ರ್ಯವನ್ನು ಹೊಂದಿದರು.

**ಅಜ್ಞತಾ ಚಾಲ್ಪಶಕ್ತಿತ್ವಂ ದುಃಖಿತ್ವಂ ಸ್ವಲ್ಪ ಕರ್ತೃತಾ ।**
**ಸರ್ವಜ್ಞತ್ವಾಧೀಶಗುಣವಿರುದ್ಧಾ ಹ್ಯನುಭೂತಿಗಾಃ ॥**

ಪ್ರತ್ಯಕ್ಷಾನುಮಾನಗಳಿಂದ ಜೀವೇಶ್ವರ ಭೇದದ ಸಮರ್ಥನೆಯು ಸಾಧ್ಯ.. ಅಜ್ಞಾನ, ಅಲ್ಪಶಕ್ತಿ, ದುಃಖ, ಅತ್ಯಲ್ಪ ವಸ್ತು ಕರ್ತೃತ್ವ ಧರ್ಮವಿರುವ ಜೀವನು ಸರ್ವಜ್ಞತ್ವ, ಪೂರ್ಣಶಕ್ತಿ, ದುಃಖರಾಹಿತ್ಯ, ಸರ್ವಕರ್ತೃತ್ವಗಳೆಂಬ ಗುಣಗಳಿಂದ ಕೂಡಿದ ಪರಮಾತ್ಮನನ್ನು ತನ್ನಿಂದ ಬೇರೆಯಾಗಿ ತಿಳಿಯುವ ಸಾಮರ್ಥ್ಯವನ್ನು ಹೇಗೆ ಸಾಧಿಸಿಯಾನು? ಎಂಬುದಕ್ಕೆ 'ಸದಾಗಮೈಕವಿಜ್ಞೇಯಂ....' ಎನ್ನುವ ಉಕ್ತಿಯಂತೆ ಶ್ರುತಿ ಆಧಾರಿತವಾಗಿ–

**ಸಾರ್ವಜ್ಞಾದಿಗುಣಾ ವಿಷ್ಣೋಃ ಶ್ರುತಿಷು ಪ್ರತಿಪಾದಿತಾಃ ।**

–ಎಂದು ಅಪ್ರತ್ಯಕ್ಷ ಭಗವಂತನ ಸಾರ್ವಜ್ಞತ್ವವನ್ನು– 'ಯಃ ಸರ್ವಜ್ಞಃ ಸ ಸರ್ವವಿತ್' ಎನ್ನುವುದರಿಂದ, 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ' ಎಂಬ ಶ್ರುತಿಯಂತೆ, ಪೂರ್ಣಶಕ್ತಿಯೂ 'ಯ ಆತ್ಮಾ ಅಪಹತಪಾಪ್ಮಾ' ಎಂಬ ಶ್ರುತಿಯು ಆತ್ಮಶಬ್ದವಾಚ್ಯ ಪರಮಾತ್ಮ ಪಾಪರಹಿತ ಹಾಗೂ ದುಃಖ ಇಲ್ಲದವನಾಗಿದ್ದಾನೆ. 'ಸ ಹಿ ಸರ್ವಸ್ಯ ಕರ್ತಾ' ಎಂಬ ಶ್ರುತಿಯು 'ಸರ್ವಕರ್ತೃತ್ವ'ವನ್ನು ಹೇಳಿದ್ದರೂ ವ್ಯಾಸಕೂಟ–ದಾಸಕೂಟದ ಮಹಾಪುರುಷರು ಸರ್ವ ಮನುಕುಲದ ಮುಗ್ಧ ಪಾಮರರ ಆತ್ಮೋದ್ಧಾರಕ್ಕಾಗಿ ಅವರದೇ ಭಾಷೆಯಲ್ಲಿ ಆ ಪರಮಾತ್ಮನ ಮಹಿಮೆಯನ್ನು ತಿಳಿಹೇಳುವ ಉದ್ದೇಶದಿಂದ ದಾಸಸಾಹಿತ್ಯ ರಚಿಸಿ ಸಂಗೀತ ಮೇಳೈಸಿ 'ಸಂಪೂರ್ಣ ಶರಣಾಗತಿ'ಯ ಭಾವದ 'ಭಕ್ತಿ' ಮುಖ್ಯವನ್ನಾಗಿಸಿ ತಿಳಿಭಾಷೆಯ ದಾಸಸಾಹಿತ್ಯದಿಂದ ಭಕ್ತಿಸಂಗೀತವನ್ನು ನೀಡಿದರು.

ಪರಮಾತ್ಮನಲ್ಲಿ ಏಕಪ್ರಕಾರವಾಗಿ ಸಮ್ಯಗ್‌ಜ್ಞಾನಪೂರ್ವಕ ಸುದೃಢ ಸ್ನೇಹದಿಂದ ಅಂದರೆ ಭಕ್ತಿಯಿಂದ ಬಿಂಬಪ್ರತಿಬಿಂಬರೂಪವಾಗಿ ತಾರತಮ್ಯಪೂರ್ವಕ ಭಗವಂತನನ್ನು ತಿಳಿದಾಗ ದ್ವೈತದರ್ಶನವಾಗಿ ಆಚಾರ್ಯಮಧ್ವರ ಜೀವಾತ್ಮ–ಪರಮಾತ್ಮರ ವ್ಯತ್ಯಾಸದ ತತ್ತ್ವ ಜಾಗೃತಿಯಾಗಿ ಸನ್ಮಾರ್ಗದ ಅಧ್ಯಾತ್ಮವೀಥಿಯ ಲಕ್ಷ್ಯ ಪ್ರಕಾಶವಾಗುತ್ತದೆ. ಈ ಭಕ್ತಿಯನ್ನು ಅರಸುವ ಜಾಡಿನಲ್ಲಿ ಸಾಗಿದಾಗ ಬಹಳ ಅಗಾಧವಾದ ಭಕ್ತಿಸಂಪತ್ತಿನ ಗಣಿಯ ಉತ್ಖನನ ಮತ್ತು ವಿಮರ್ಶೆ ಸಾಗರದ ನೀರನ್ನು ಬೊಗಸೆಯಲ್ಲಿ ತುಂಬಿಸುವ ಪ್ರಯತ್ನವಾದೀತು.

ಭಕ್ತಿಯ ಪುನರುತ್ಥಾನದಲ್ಲಿ ವ್ಯಾಸ–ದಾಸಕೂಟದ ಕೊಡುಗೆ ಅನನ್ಯ. ಅಪರೋಕ್ಷಜ್ಞಾನಿ ಹರಿದಾಸರುಗಳ ರಚನೆಗಳಲ್ಲಿ ಏಕರೂಪತೆ, ಸಾಮ್ಯ ಎಂದರೆ ನವವಿಧ ಭಕ್ತಿಯಲ್ಲಿ ದೃಢಭಕ್ತಿಯಲ್ಲಿ ದೃಢ ನಂಬಿಕೆ, ನವವಿಧ ಭಕ್ತಿ ಮೇಳೈಸಿದ ರಚನೆ ಮತ್ತು ಅದಕ್ಕೊಪ್ಪುವ ಭಾವಸಂಗೀತದ ಸಂಯೋಜನೆ ಬಹಳ ವಿಶಿಷ್ಟವಾದುದು.

ಭಾಗವತದ ಸಪ್ತಮ ಸ್ಕಂಧದ ಐದನೆಯ ಅಧ್ಯಾಯದಲ್ಲಿ ನವವಿಧ ಭಕ್ತಿ ಈ ರೀತಿಯಲ್ಲಿ ವರ್ಣಿಸಿರುವರು.

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಮ್ ।**
**ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಮ್ ॥**

ಈ ರೀತಿಯ ನಂಬಿದ ಭಕ್ತಿಯಿಂದ ಭಗವಂತನನ್ನು ಆರಾಧಿಸುತ್ತಿದ್ದ ಭಕ್ತಪ್ರಹ್ಲಾದ ಮತ್ತು ಹಿರಣ್ಯಕಶಿಪುವಿನ ಸಂವಾದರೂಪದಲ್ಲಿ ಪ್ರಹ್ಲಾದನಿಂದ ಹೇಳಲ್ಪಟ್ಟ ಈ ಮಾತು ವ್ಯಾಸ–ದಾಸಕೂಟದ ಉಸಿರೇ ಆಗಿರುತ್ತದೆ.

ಈ ನವವಿಧ ಭಕ್ತಿಮಾರ್ಗವನ್ನು ಅನುಸರಿಸಿ ಕೃತಕೃತ್ಯರಾದ ಮಹಾಭಕ್ತಶ್ರೇಷ್ಠರುಗಳೆಂದರೆ– ಶ್ರವಣದಿಂದ ಪರೀಕ್ಷಿತರಾಜ, ಕೀರ್ತನೆಯಿಂದ ನಾರದರು, ಸ್ಮರಣೆಯಿಂದ ಪ್ರಹ್ಲಾದರಾಯರು, ಪಾದಸೇವನೆಯಿಂದ ಮಹಾಲಕ್ಷ್ಮೀದೇವಿ, ಅರ್ಚನೆಯಿಂದ ಪೃಥುಮಹಾರಾಜ, ವಂದನೆಯಿಂದ ಅಕ್ರೂರ, ದಾಸ್ಯದಿಂದ ಹನುಮಂತ, ಸಖ್ಯದಿಂದ ಅರ್ಜುನ, ಆತ್ಮನಿವೇದನೆಯಿಂದ ಬಲಿಚಕ್ರವರ್ತಿ – ಹೀಗೆ ನವವಿಧ ಭಕ್ತಿಯಿಂದ ಪರಮಾತ್ಮನ ಪ್ರೀತಿಯನ್ನು ಶರಣಾಗತಿ ಸರ್ವಸಮರ್ಪಣೆಯಿಂದ ಸಂಪಾದಿಸಬಹುದು ಎಂದು ಇವರೆಲ್ಲ ತೋರ್ಪಡಿಸಿರುವರು.

**ಶ್ರವಣಭಕ್ತಿ**

ಹರಿಕಥಾ ಶ್ರವಣ ಮಾಡೋ ಪಾಡೋ
ಪಥ ವೈಕುಂಠಕಿದು ನೋಡೋ
ಧ್ಯಾನ ಭಕುತಿ ವೈರಾಗ್ಯವೀವ ನಮ್ಮ ಆನಂದತೀರ್ಥರ ಪಾಡೋ
ಶ್ರೀಪುರಂದರವಿಠಲನ ಚರಣಕಮಲದಲಿ ಕೂಡೋ ॥

'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' –ಎಂಬ ದಾಸೋಕ್ತಿಯಂತೆ ಗುರುಮುಖೇನ ಧ್ಯಾನ ಭಕುತಿ ವೈರಾಗ್ಯವನೀಯುವ ಗುರ್ವಂತರ್ಗತ ಭಗವಂತನನ್ನು ಪಾಡು; ಆತನ ಮಹಿಮೆಗಳನ್ನು ಶ್ರವಣ ಮಾಡು ಎಂದು ಬಹಳಷ್ಟು ಅರ್ಥಗರ್ಭಿತವಾಗಿ ಭಗವಂತನನ್ನು, ಗುರು ಮಧ್ವರನ್ನು ಜೊತೆಜೊತೆಯಾಗಿ ಪಾಡಿ–ಪೊಗಳಿ ಹರಿಕಥಾಶ್ರವಣದಿಂದ ವೈಕುಂಠಪಥ ಸುಲಭವೆಂದು ಸಾರಿದ ಪುರಂದರೋಪನಿಷತ್ತಿನ ಒಂದು ಮಾತು.

ಹರಿಕಥಾಶ್ರವಣಕ್ಕೆ ಮನವಿಟ್ಟ ಪ್ರೌಢ
ಅರವತ್ತು ಘಳಿಗೆಯ ವ್ಯರ್ಥ ಹೋಗಾಡ ।
ಪರಮಪದವಿಗೆ ಯೋಗ್ಯನವನೆ ಗಾಢ ।
ನರಕದ ಬಟ್ಟೆಯ ದೂರದಲೊಮ್ಮೆ ನೋಡ ।
ಪರಸನ್ನ ವೇಂಕಟಪತಿಯಂಘ್ರಿ ಗಾಢ ।
ತರದಲಪ್ಪುತ ಮೈಯ ಮರೆದು ಮಾತಾಡ ॥

ಪ್ರಸನ್ನವೆಂಕಟದಾಸರ ಕೃತಿಯಲ್ಲಿ ಶ್ರವಣಭಕ್ತಿಯ ಮಹಾತ್ಮೆಯನ್ನು ಹೇಳುತ್ತಾ ನಿರಂತರ ಹರಿಕಥಾಶ್ರವಣದಿಂದ ಭಗವಂತನ ಪಾದಯುಗ್ಮಗಳಿಗೆ ಶರಣಾಗತನಾಗುವುದರಿಂದ ನರಕವಾಸ ತಪ್ಪಿ ಮುಕ್ತಿಯೋಗ್ಯತೆಯನ್ನು ತಂದುಕೊಡುವ ಸಾಮರ್ಥ್ಯ ಈ ಶ್ರವಣಭಕ್ತಿಗೆ ಇದೆ ಎಂದಿರುವರು.

**ಕೀರ್ತನ ಭಕ್ತಿ**

ಧ್ಯಾನವು ಕೃತಯುಗದಿ
ಯಜನ ಯಜ್ಞವು ತ್ರೇತಾಯುಗದಿ
ದಾನವಾಂತಕನ ದೇವತಾರ್ಚನೆ ದ್ವಾಪರಯುಗದಿ
ಆ ಮಾನವರಿಗಿಷ್ಟು ಫಲವೊ ಅಷ್ಟು ಫಲವು
ಕಲಿಯುಗದಿ ಗಾನದಲಿ ಕೇಶವಯೆನಲು
ಕೈಗೂಡುವನು ರಂಗವಿಠಲ ॥

ಯುಗಯುಗಗಳಲ್ಲಿ ಭಗವದರ್ಚನೆಯ ವಿವಿಧ ಮಜಲುಗಳನ್ನು ವಿವರಿಸುತ್ತ ಪ್ರಸಕ್ತದ ಕಲಿಯುಗದಲ್ಲಿ ಭಕ್ತಿಯಿಂದ ಕೇಶವನ ಸಂಕೀರ್ತನೆ ಮಾಡಿದಾಗ ಭಗವತ್ಪ್ರಸಾದ ನಿಶ್ಚಿತ ಎಂದು ಶ್ರೀಪಾದರಾಜರು ಬಹು ಮಾರ್ಮಿಕವಾಗಿ ಕೀರ್ತನದ ಮಹಾತ್ಮೆಯನ್ನು ತಿಳಿಹೇಳಿದ್ದಾರೆ. ಗಾನದಲಿ ಕೇಶವ, ಭಕ್ತಿಯುಕ್ತಗಾನ ಇದನ್ನೆಲ್ಲ ಪುರಂದರದಾಸರು 'ಕೇಳನೋ ಹರಿ ತಾಳನೋ । ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ ॥' ಎಂದು ನಿಷ್ಕಲ್ಮಶಪ್ರೇಮ ಅಂದರೆ ಮಹಾತ್ಮ್ಯಜ್ಞಾನಪೂರ್ವಕ ಪ್ರೇಮವನ್ನು ಬಹು ಸ್ವಾರಸ್ಯವಾಗಿ ಹೇಳಿರುತ್ತಾರೆ.

ಹರಿನಾಮ ಕೀರ್ತನೆಯ ಭಕುತಿಯಿಂ ಪೇಳ್ವೆ
ಚಿರಸ್ವಭಾವದಲಿ, ಕಣ್ಣೊರತಿಯ ತಾಳ್ವೆ
ಹರಿಯಂತೆ ಕೂಗಿ ಸುಜನರೊಳು ಬಾಳ್ವೆ
ದುರಿತಗಜಗಳ ಮಂಡೆಯನೇರಿ ಸೀಳ್ವೆ
ಹರುಷಾಮೃತಾಬ್ಧಿಯೊಳಿಳಿಮುಳುಗೇಳ್ವೆ
ಪುರಂದರವಿಠಲೇಶನ ಹೊಂದಿ ತಾ ಬಾಳ್ವೆ.

ಹರಿನಾಮಕೀರ್ತನೆಯನ್ನು ಭಕ್ತಿಯಿಂದ ನಿರಂತರವಾಗಿ ಪೇಳುತ್ತಾ ಸಹಜಾನಂದದಿ ಸಿಂಹದಂತೆ ಹರಿನಾಮವನ್ನು ಗರ್ಜಿಸುತ್ತಾ ಸುಜನರ ಮಧ್ಯೆ ಬಾಳುತ್ತಾ ಅರಿಷಡ್ವರ್ಗ ಜಯಿಸಿ ಸಂತೋಷಸಾಗರದಲ್ಲಿ ಮಿಂದು ಹರಿಪಾದವನ್ನು ಸೇರು ಎಂದು ಪುರಂದರದಾಸರು ವೈಶಿಷ್ಟ್ಯಪೂರ್ಣವಾಗಿ ಹೇಳಿರುತ್ತಾರೆ.

**ಸ್ಮರಣ ಭಕ್ತಿ**

ಹರಿ ನಿನ್ನ ನಾಮವ ಸ್ಮರಿಸಲು । ದುರಿತ ಪೀಡಿಪುದುಂಟೆ ।
ಅರಿತು ಭಜಿಪರಿಗೆಲ್ಲ ಕೈವಲ್ಯ ನಿನ್ನಯ । ಕರುಣವರಿತು ನಿನ್ನ ಮಗನ ಕೂಗಿದವಗೆ ।
ಮರಣಕಾಲದಿ ಒದಗಿದ ಶ್ರೀಪುರಂದರವಿಠಲ ॥
ಸ್ಮರಣೆ ಒಂದೇ ಸಾಲದೇ ಗೋವಿಂದನ ನಾಮವೊಂದೇ ಸಾಲದೇ ॥
ಪರಿಪರಿ ವಿಧವೆಲ್ಲ ಭ್ರಾಂತಿಯೆಂದು ತಿಳಿದು ಪರಮಪುರುಷಹರಿಯ ನೆರೆನಂಬಿದವರಿಗೆ ॥

ಹರಿಸ್ಮರಣೆಯ ಮಹತ್ವವು ಸೊಗಸಾದ ರೀತಿಯಲ್ಲಿ ದಾಸಶ್ರೇಷ್ಠ ಪುರಂದರರ ಚಿತ್ತದಿಂದ ಸ್ಫುರಣೆಯಾಗಿದೆ. ಪಾಪಿಯು ಪಾತಕಿಯು ನಿತ್ಯ ಹರಿಸ್ಮರಣೆಯಿಂದ ಆತನ ಸರ್ವಪಾಪ ನಾಶವಾಗಿ, ನಿಖಿಳಪುಣ್ಯ ಲಭ್ಯ ಎಂದಿದ್ದು, 'ಭಕುತಿಪೂರ್ವಕ ಸ್ಮರಣೆ ಅನುದಿನವಿದ್ದರೆ ಮಾತ್ರ' ಎಂಬ ಎಚ್ಚರಿಕೆಯ ಅಂಶವನ್ನೂ ಇಲ್ಲಿ ಸ್ಪಷ್ಟಗೊಳಿಸಿದ್ದಾರೆ.

**ಪಾದಸೇವನ ಭಕ್ತಿ**

ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು ॥

ಕೋಟಿಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ
ಸಾಟಿಯಿಲ್ಲದೆ ಪೂಜೆಗಳನು ಶ್ರೇಷ್ಠವಾಗಿ ಮಾಡುತಿಹಳು ॥
ಏನು ಧನ್ಯನೋ ಹನುಮ ಎಂಥ ಮಾನ್ಯನೋ
ಸಾನುರಾಗದಿಂದ ಹರಿಯ ವಾನರೋತ್ತಮ ತಾನೇ ರಾಮಸೇವೆ ಮಾಡುತಿಹನು ॥
ರಾಮಪಾದ ನಿರತ ಜಪಿಸಿ ಕಾಮಕ್ರೋಧ ಎಲ್ಲ ತ್ಯಜಿಸಿ
ಆ ಮಹಾಮಂತ್ರನಿಲಯ ಗುರು ಶ್ಯಾಮಸುಂದರರನ ಒಲಿಸಿ ॥

ತಾಯಿ ಮಹಾಲಕ್ಷ್ಮಿ ಸಾನುರಾಗದಿಂದ ಶ್ರೀಹರಿಯ ನಿತ್ಯವಾದ ಸೇವೆ ಮಾಡುತ್ತ ಧನ್ಯಳು ಎಂದು ದಾಸರು ವಿಧವಿಧವಾಗಿ ಬಣ್ಣಿಸಿದ್ದಾರೆ. ಜೀವೋತ್ತಮರಾದ ಹನುಮಂತನಿಗೆ ಶ್ರೀರಾಮನ ಈಕ್ಷಣೆಯಲ್ಲಿ ಪರಮಸುಖ. ಭಗವದಿಚ್ಛೆಗೆ ನಿಶ್ಶಂಕೆಯಿಂದ ಪೊಡಮಡುತ್ತ ಅವಿರತದಿಂದ ಏಕಾಂತಭಕ್ತನಾದ ಹನುಮಂತನ ಶ್ರೀರಾಮನ ಪಾದಸೇವನೆ ಬಹುವಾಗಿ ವಿಶ್ಲೇಷಿಸಿದ್ದಾರೆ. ಇವರಲ್ಲದೆ ಪಾದಸೇವನಾ ಭಾಗ್ಯಕ್ಕೆ ಉತ್ತಮ ದೃಷ್ಟಾಂತ ಬೇರೆ ಎಲ್ಲಿಯೂ ಕಾಣಸಿಗುವುದಿಲ್ಲ.

**ಅರ್ಚನ ಭಕ್ತಿ**

ಹೇಗೆ ಮೆಚ್ಚಿಸಲಿ ಅರ್ಚಿಸಲಿ ನಿನ್ನ
ನಾಗಶಯನನೆ ನಾರದವಂದ್ಯನೆ ದೇವ ॥
ಮಂಗಳಾಭಿಷೇಕಕೆ ಉದಕ ತರುವೆನೆನೆ ।
ಗಂಗೆಯುಂಗುಷ್ಠದಿ ಪಡೆದಿರುವೆ
ಸಂಗೀತ ಕೀರ್ತನೆ ಪಾಡುವೆನೆಂದರೆ ।
ತುಂಬುರು ನಾರದರು ಪಾಡುತಿಹರೋ ದೇವ ॥
ಹರಿಯರ್ಚನೆಯ ಭಕ್ತಿಯ ಪ್ರವೀಣ
ಥರಥರದಿ ಬರುವೆಯದರನು ಒಮ್ಮೆ ಕಾಣ
ಹರಿಗೆ, ದೇಹೇಂದ್ರಿಯವನೇ ಅರ್ಪಿಸೆ ಪ್ರಾಣ ।
ಹರಿಪುರದೊಳಗೆ ಮಾಡಿದ ತನ್ನ ಠಾಣ ।
ಪುರಂದರವಿಠಲ ರೇಯನ ಪೂಜೆ ತ್ರಾಣವರಿತು
ಕಾಯದೊಳಿರ್ದು ನಿರ್ವಾಣ ॥

ಸಚ್ಚಿದಾನಂದ ಸ್ವರೂಪನಿಗೆ, ಅಖಿಲಾಂಡ ಬ್ರಹ್ಮಾಂಡ ನಾಯಕನಿಗೆ, ನಿತ್ಯತೃಪ್ತನಿಗೆ ಸರ್ವವನ್ನೂ ತನ್ನಲ್ಲಿ ಹುದುಗಿಸಿಕೊಂಡು ನಿಯಾಮಿಸುವವನಿಗೆ ಯಾವುದರಿಂದ ಅರ್ಚಿಸಲಿ? ಅರ್ಚಿಸಲು ವಸ್ತುಗಳೇ ಸಿಗದಲ್ಲ! ಎಂದು ಭಾವೋನ್ಮಿಲನದಿಂದ ದಾಸರು ಹೇಳಿದ ಈ ಮಾತುಗಳು ಆತನ ಮಹಿಮೆಗಳ ಜೊತೆ ದಾಸರು ಭಗವಂತನನ್ನು ತಿಳಿಯುವ ಪರಿ ಊಹೆಗೂ ಸಿಲುಕದ್ದು. ಭಗವಂತನ ಪೂಜೆಯನ್ನು ಯಾವ ರೀತಿ ಮಾಡಬೇಕು ಎನ್ನುವುದನ್ನು ಬುಧರು ಈ ರೀತಿ ಹೇಳುತ್ತಾರೆ:

**ಅಹಿಂಸಾ ಪ್ರಥಮಂ ಪುಷ್ಪಂ ಪುಷ್ಪಮಿಂದ್ರಿಯನಿಗ್ರಹಃ ।**
**ಸರ್ವಭೂತ ದಯಾಪುಷ್ಪಂ ಸತ್ಯಂ ಪುಷ್ಪಂ ವಿಶೇಷತಃ ॥**
**ಜ್ಞಾನಪುಷ್ಪಂ ತಪಃ ಪುಷ್ಪಂ ಕ್ರಿಯಾಪುಷ್ಪಂ ತಥೈವ ಚ ।**
**ಧ್ಯಾನಂ ಚೈವಾಷ್ಟಮಂ ಪುಷ್ಪಮ್ ಏಭಿಃ ತುಷ್ಯತಿ ಕೇಶವಃ ॥**

ಎನ್ನುವ ಉಕ್ತಿಯಂತೆ ಈ ಪುಷ್ಪಾಷ್ಟಕಗಳಿಂದ ಅರ್ಚಿಸಿದರೆ ಮಾತ್ರ ಪರಮಾತ್ಮನ ಪ್ರೀತಿ ಗಳಿಸಬಹುದು ಎಂಬುದಾಗಿ ತಿಳಿಹೇಳಿದ್ದಾರೆ. ಪೃಥುಮಹಾರಾಜ, ಅಂಬರೀಷ, ಅಕ್ರೂರ ಮೊದಲಾದವರು ಈ ರೀತಿ ನಿರಂತರ ಅರ್ಚಿಸಿಯೇ ಭಗವಂತನ ದಿವ್ಯ ಸಾನ್ನಿಧ್ಯವನ್ನು ಸೇರಿದರು ಎಂಬುವುದನ್ನು ಮನಗಾಣಬಹುದು.

ನಿನ್ನ ನೀ ಅರಿತು ದಾಸಪಂಥದಲಿ ಬೆರೆತು ಮುರಾರಿಯ ಪಾದಸೇವನೆ ನಿರತನಾಗಿ ಪುಷ್ಪಾಷ್ಟಕಗಳಿಂದ ಅರ್ಚಿಸು ಎಂದು ಇದುವೇ ಭಗವಂತನ ತುಷ್ಟಿಗೆ, ಕೇಶವನ ಪದಗತಿಗೆ ಪಥವೆಂದು ಸಕಲವೇದಗಳ ಸಾರವಾದ ದಾಸಸಾಹಿತ್ಯದ ಅಪರೋಕ್ಷಜ್ಞಾನಿಗಳು ಸಾರಿಸಾರಿ ಹೇಳಿದರು.

**ವಂದನ ಭಕ್ತಿ**

ತ್ರಿಕರಣಪೂರ್ವಕ ಸಾಷ್ಟಾಂಗಪ್ರಣಾಮ. ಕಾಯಾ ವಾಚಾ ಮನಸಾ ಭಕ್ತಿಯುಕ್ತ ಮನಸ್ಸು, ನಿರಂತರ ಹರಿಸ್ಮರಣೆ ಕಾಯದಿಂದ ಭಗವಂತನ ಪಾದಗಳಿಗೆ ಸಂಪೂರ್ಣ ಶರಣಾಗತಿಯಿಂದ ನಮಸ್ಕರಿಸುವುದೇ ವಂದನಾಭಕ್ತಿಗೆ ವಿಶ್ಲೇಷಣೆ ಎನ್ನಬಹುದು. ದಾಸವರೇಣ್ಯರು ತಮ್ಮ ಕೃತಿಗಳಲ್ಲಿ ವಂದನಾಭಕ್ತಿಯ ಮಹಾತ್ಮೆಯನ್ನು ತಮ್ಮ ಭವಬಂಧನ ವಿಮೋಚನೆಗೆ ಭಗವಂತನ ವಿವಿಧ ರೂಪಗಳಿಗೆ ನಮಸ್ಕಾರವನ್ನು ಕನಕದಾಸರು–

ನಾರಾಯಣ ತೇ ನಮೋ ನಮೋ ।
ಭವ ನಾರದಸನ್ನುತ ನಮೋ ನಮೋ ॥
ಪರಮಪುರುಷ ಭವಬಂಧವಿಮೋಚನ ।
ನಾದಪ್ರಿಯ ತೇ ನಮೋ ನಮೋ ॥

ನಾದಪ್ರಿಯ ಕೃಷ್ಣನಿಗೆ ನಮಸ್ಕಾರರೂಪ ಭಕ್ತಿಸಂಗೀತದ ಮುಖೇನ ಅರ್ಪಿಸಲು ಶಾಶ್ವತಮುಕ್ತಿ ನಿಶ್ಚಿತ ಎಂದು ಇಲ್ಲಿ ಸ್ಪಷ್ಟೀಕರಿಸಿದ್ದಾರೆ.

**ದಾಸ್ಯ ಭಕ್ತಿ**

ನೈಜ ದಾಸಭಾವವನ್ನು ಪಡೆಯಲು ಅದೆಷ್ಟೋ ಜನ್ಮಗಳ ನಿರಂತರ ಪ್ರಯತ್ನವಿದ್ದರೆ ಮಾತ್ರ ಭಗವಂತನ ಒಲುಮೆಯಿಂದ ದಾಸನಾಗಬಹುದು. ನಾರದಾಂಶರಾದ ಪುರಂದರದಾಸರು–

ದಾಸನ ಮಾಡಿಕೋ ಎನ್ನ ಸ್ವಾಮಿ
ಸಾಸಿರ ನಾಮದ ವೇಂಕಟರಮಣ ॥

ಎಂದು ದೃಢಭಕ್ತಿಗಾಗಿ ಅನುದಿನ ಪಾಡುತ್ತ, ಆತನ ಪಾದಗಳಿಗೆರಗುತ್ತ ಸಂಪೂರ್ಣ ಶರಣಾಗತನೆಂಬ ಭಾವವನ್ನು ಪ್ರಕಟಿಸುತ್ತಾರೆ. ಮಹಾಲಕ್ಷ್ಮೀ ಮತ್ತು ಬ್ರಹ್ಮವಾಯುಗಳು ನಿರಂತರ ಭಗವಂತನ ಸೇವೆ ಮಾಡುತ್ತ ದಾಸೋತ್ತಮರೆಂದು ಮೊದಲಿಗೆ ತಿಳಿಯಲ್ಪಡುವರು.

ಹರಿದಾಸದಾಸರ ದಾಸತ್ವ ಪಿಡಿದ ।
ನರಜೀವನ್ಮುಕ್ತನೆನಿಸಿ ಕೀರ್ತಿ ಪಡೆದ ।
ಹರಿಯೇ ನಾನೆಂಬುವನೆದೆ ಮೆಟ್ಟುತ ನಡೆದ ।
ಹರಿಯ ಭಟರ ಬಾಕುಳಿಗವೃತ ಹಿಡಿದ ।
ಪುರಂದರವಿಠಲ ರೇಯನ್ನ ಯಡದ ।
ಚರಣ ನಿರ್ಜರತರುಛಾಯವ ಹಿಡಿದ ॥

ಹರಿದಾಸದಾಸರ ದಾಸತ್ವದಿಂದ ಸನ್ಮಾರ್ಗವ ಪಿಡಿದು ಸನ್ನಡತೆಯಿಂದ ಸದಾ ಹರಿಯ ಪಾದವ ನಂಬಿ ಮುಕ್ತಿಯ ಪಥವನ್ನು ಸಾಧಿಸಬಹುದು.

**ಸಖ್ಯ ಭಕ್ತಿ**

ಆಡ ಪೋಗೋಣ ಬಾರೋ ರಂಗ ।
ಓಡಿ ಹೋಗಲು ಬೇಡೋ ಕೃಷ್ಣ ॥
ಸೋಲು ಗೆಲುವಿಗೆಲ್ಲ ನೀನು ।
ಬಾಲಕರೊಳು ಕೂಡಿಕೊಂಡು ಮೇಲೆ ಮಮತೆಯಿಂದ ನಾನು
ಕೂಲವಾಗಿ ನಡೆಸುವಂತೆ ॥

ಭಗವಂತನ ಸಖನಾಗಿ, ಬಾಲಕೃಷ್ಣನ ಜೊತೆಯಾಗಿ ಆಟವಾಡುತ್ತ ನಲಿದ ರಂಗನ ಮಿತ್ರನಾಗಿ ಸಖ್ಯಭಾವವನ್ನು ಪ್ರದರ್ಶಿಸುವ ಪುರಂದರದಾಸರ ಈ ಕೃತಿ ಬಹಳ ಸುಂದರವಾಗಿದೆ.

ಎನಗೂ ಆಣೆ ರಂಗ ನಿನಗೂ ಆಣೆ
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ ॥

–ಎಂದು ಸಖ್ಯಭಾವಾತಿರೇಕದಿಂದಲೂ ಪರಸ್ಪರರಿಗೆ ಆಣೆಯ ಭಾರ ಹೇರುತ್ತ, 'ನಿನ್ನ ಬಿಟ್ಟು ನಾನಿಲ್ಲ ನನ್ನ ಬಿಡಲು ನಿನಗೆ ಸಾಧ್ಯವಿಲ್ಲ' ಎಂದು ಮಾರ್ಮಿಕವಾಗಿ ಸಖ್ಯಭಕ್ತಿಯ ಸಾಹಿತ್ಯ ಅದ್ಭುತವಾಗಿದೆ. ದಾಸರ ನಿಂದಾಸ್ತುತಿಗಳು ಕೂಡಾ ಭಗವಂತನ ಮತ್ತು ದಾಸರುಗಳ ವಿಶೇಷ ಸಖ್ಯಸಂಬಂಧವನ್ನು ಪ್ರದರ್ಶಿಸುವ ಕೃತಿಗಳಾಗಿವೆ.

ಹೀಗೆ ಭಗವಂತನನ್ನು ಸಮಾಜದ ವಿವಿಧ ಸಂಬಂಧಗಳ ಆಯಾಮದಿಂದ ಪರಾಮರ್ಶಿಸುತ್ತಾ ಸತಿಪತಿಗಳಾಗಿ, ಪ್ರೇಮಿಯಾಗಿ, ಮಗುವಾಗಿ ಮುಂತಾದ ಬೇರೆಬೇರೆ ಸಂಬಂಧಗಳ ಕೋನಗಳಿಂದ ನೋಡುತ್ತಾ ಬರೆದಂತಹ ಸಹಸ್ರಾರು ಕೃತಿಗಳು ನಮಗೆ ನೋಡಸಿಗುತ್ತವೆ.

**ಆತ್ಮನಿವೇದನ ಭಕ್ತಿ**

ಭಕ್ತಿಯ ಪರಾಕಾಷ್ಠೆಯ ಹಂತ ಆತ್ಮನಿವೇದನೆ. ವೈರಾಗ್ಯದ ಪರಾಕಾಷ್ಠೆ, ಆತ್ಮೋನ್ನತಿಗಾಗಿ ದಾಸರು ಭಗವಂತನನ್ನು ಪರಿಪರಿಯಾಗಿ ಬೇಡುವ ರೀತಿ ವಿಶಿಷ್ಟವಾಗಿ ಇಲ್ಲಿ ಗೋಚರವಾಗುತ್ತದೆ. ಭಾವಿಸಮೀರ ವಾದಿರಾಜರ ಕೃತಿಯಲ್ಲಿ–

ಸಾರಿದೆನೋ ನಿನ್ನ ವೆಂಕಟರನ್ನ ॥
ಅನಾಥನು ನಾನು ಎನಗೆ ಬಂಧು ನೀನು
ನಿನ್ನವನೆಂದು ನೋಡೋ ನೀನಾಗಿ ದಯಮಾಡೋ ॥
ಪನ್ನಗಾದ್ರಿವಾಸ ನೀನೇ ನಿರ್ದೋಷ ॥

ಸ್ವಯಂ ವಾಯುವಿನ ಅವತಾರವಾದರೂ ಭಗವಂತನಲ್ಲಿ ಎನ್ನ ಕುಂದುಗಳನ್ನು ಮನ್ನಿಸಿ ದಯಮಾಡೊ ಎಂದು ನಿವೇದಿಸಿದ ರೀತಿ ವಿಶಿಷ್ಟವಾಗಿದೆ.

ಬಿನ್ನಹಕ್ಕೆ ಬಾಯಿಯಿಲ್ಲವಯ್ಯ
ಅನಂತ ಅಪರಾಧ ಎನ್ನಲ್ಲಿ ಇರಲಾಗಿ ॥

ಅತಿ ಆಸೆ ಮೋಹ ಮದಗಳಿಂದ ಆವೃತನಾದ ನಾನು ನಷ್ಟಜೀವನದಾಸೆಯಿಂದ ಕ್ಷಣಕಾಲ ನಿನ್ನ ಮರೆತ ಅನಂತ ಅಪರಾಧವನ್ನು ಮನ್ನಿಸಿ ಕಾಯೋ ಅಯ್ಯ! ಶ್ರೀಹರಿಯೆ ಎಂದು ಶ್ರೀಪುರಂದರದಾಸರು ಈ ರಚನೆಯಲ್ಲಿ ಬಿನ್ನವಿಸಿದ ಶೈಲಿ ಅನೇಕ ಯೋಗ್ಯಜೀವರ ಜೀವನ್ಮುಕ್ತಿಗೆ ವೀಥಿಯಾಗಿ ವೈರಾಗ್ಯದ ಜೀವನಕ್ಕೆ ನಾಂದಿಯಾಗುವುದರಲ್ಲಿ ಸಂಶಯವಿಲ್ಲ.

ಹರಿಗೆ ತನ್ನಾತ್ಮನಿವೇದನದಿಂದ ।
ಉರಿ, ಜಲ, ಮಣ್ಣು, ಬಯಲು ಘಾಳಿ ಹೊಂದ ।
ಸ್ವರೂಪವ, ಹರಿಯಂಘ್ರಿಗರ್ಪಿಸಿ ನಿಂದ ।

ಹರುಷವನುಂಬವ ಉನ್ನಾಹಗಳಿಂದ ।
ಪುರಂದರವಿಠಲ ರೇಯನ ದಯದಿಂದ
ಸುರಋಷಿನರರಿಗೆಲ್ಲವೂ ನಿಜಾನಂದ ॥

ನಿತ್ಯ ಹರುಷವನ್ನು ಹೊಂದುವ ಉತ್ಸಾಹದಿಂದ ತನ್ನ ಪ್ರಾಕೃತ ಕಾಯವನ್ನು ಪರಮಾತ್ಮನ ಪಾದಗಳಿಗೆ ಅರ್ಪಿಸಿದಾಗ ದೇವತೆಗಳಿಗೂ ಋಷಿಗಳಿಗೂ ಮಾನವರಿಗೂ ನಿಜಾನಂದ ದೊರಕುವುದೆಂದು ಪುರಂದರದಾಸರು ಆತ್ಮನಿವೇದನದ ಶಕ್ತಿಯನ್ನು ವಿಶದಪಡಿಸಿದ್ದಾರೆ.

ಹೀಗೆ ಅಧ್ಯಾತ್ಮ ವೀಥಿಯ ಆತ್ಮಾನುಭವ ಸಂತೃಪ್ತಿಯ ಪರಾಕಾಷ್ಠೆಯ ಭಕ್ತಿಗೆ ನಿರಂತರ ಪ್ರಯತ್ನಿಸುತ್ತ ಭಗವಂತನೆಡೆಗೆ ಸಾಗುವ ನಿಟ್ಟಿನಲ್ಲಿ ಪಯಣಿಸುತ್ತ ಪೂರ್ವಾರ್ಜಿತ ಕರ್ಮ ಫಲಾನುಸಾರವಾಗಿ ವಿವಿಧ ಯೋನಿಗಳಲ್ಲಿ ಸಾಗಿ, ಅಲೌಕಿಕದೆಡೆಗೆ ಸಮೀಪವಾಗುತ್ತ ಕೊನೆಗೆ ಪರಮಾತ್ಮನ ದಿವ್ಯದರ್ಶನ ಪ್ರೀತಿ ಗಳಿಸಬಹುದು. ಈ ಸತ್ವಯಣದಲ್ಲಿ ಅನುಭವ, ಸಂಸ್ಕಾರ, ಸ್ಮರಣೆ, ಕರ್ಮ, ಪುಣ್ಯ–ಪಾಪಗಳ ಸಂಚಿತಾಂಶದ ಚಕ್ರಗಳು ಜೀವಾತ್ಮನೊಂದಿಗೆ ಸದಾ ಸಹಕಾರಿಯಾಗಿ ಇರುತ್ತವೆ. 'ಈ ಭಕ್ತಿರಥದ ಚಲನೆ ಮುಕ್ತಿಪಥದೆಡೆಗೆ' ಎಂಬಂತೆ ಭಗವಂತನನ್ನು ತನ್ನ ಯೋಗ್ಯತಾನುಸಾರವಾಗಿ ಅರಿತು ದಿವ್ಯಾನುಭವದ ಸ್ಪರ್ಶದಿಂದ ಅಪರೋಕ್ಷಜ್ಞಾನಿಯಾಗಿ ಅವಧೂತನಾಗಿ ಮೋಕ್ಷದೆಡೆಗೆ ಸಾಗಿ ಸಾರ್ಥಕನಾಗುವುದರೊಂದಿಗೆ ಭಕ್ತಿಯುಕ್ತ ಜೀವಾತ್ಮ ವಿಶಿಷ್ಟನೆನಿಸುತ್ತಾನೆ.

ಜೀವಾತ್ಮನು, ಭಗವಂತನನ್ನು, ಭಕ್ತಿಯಿಂದ, ಮುಕ್ತಿಗೋಸ್ಕರ, ಭಗವಂತನ ಇಚ್ಛೆಯ ದೆಸೆಯಿಂದಲೇ, ಭಗವಂತನ ಪಾದಗಳಲ್ಲಿ, ಸಂಪೂರ್ಣ ಶರಣಾಗತನಾಗುವುದೇ ಪರಮಭಕ್ತಿಯ ವ್ಯಾಕರಣದ ಸಪ್ತವಿಭಕ್ತಿಗಳು. ಈ ರೀತಿಯ ಭಕ್ತಿಯ ಭಾಷಾವ್ಯಾಕರಣದ ಸಪ್ತವಿಭಕ್ತಿಯಲ್ಲಡಗಿದ ವಾಕ್ಯವನ್ನು ಅಂತರಾರ್ಥದಲ್ಲಿ ತಿಳಿದು ಜೀವನಾವಶ್ಯಕವಾದ ಭಾಷೆಯನ್ನು ಉಸಿರಾಗಿ ಅಳವಡಿಸಿಕೊಂಡು, ಅನಂತನ ದರ್ಶನಾಕಾಂಕ್ಷಿಯಾಗಿ ಅನವರತವಿದ್ದಾಗ ಭಕ್ತಿ ಮಿಳಿತ ಸಾಹಿತ್ಯ, ಸಂಗೀತಸಂಭ್ರಮದೊಂದಿಗೆ ಓತಪ್ರೋತವಾಗಿ ಹರಿದು ಆತ್ಮೋದ್ಧಾರದ ಪ್ರಬುದ್ಧ ಭಕ್ತಿಸಂಗೀತದ ಮಹಾಸಾಹಿತ್ಯವಾಗಿ ಸದಾ ಗುರುತಿಸಲ್ಪಡುತ್ತದೆ. ಜನಮನದಲ್ಲಿ ನಿರಂತರವಾಗುತ್ತದೆ. ಅವಿನಾಭಾವಸಂಬಂಧದ ಚಹರೆಯಂತೆ.

ಭಕ್ತಿಯಿಲ್ಲದ ಸಾಹಿತ್ಯ ದಾಸಸಾಹಿತ್ಯದಲ್ಲಿಲ್ಲ.

ಜೀವಾತ್ಮ–ಪರಮಾತ್ಮನೆಂಬ ದ್ವೈತ ತತ್ವ ತಿಳಿಯದ ದಾಸವರೇಣ್ಯರಿಲ್ಲ.

ಪರಮಾತ್ಮನಧೀನವಿಲ್ಲದ ಜೀವಾತ್ಮನಿಲ್ಲ.

ಈ ತತ್ವವೇತ್ತ ಶ್ರೀಹರಿಯಲ್ಲಿ ನಿಜಭಕ್ತಿ ಸಿದ್ಧಿಸಿದರೆ ನಿಜಮುಕ್ತಿ ಸದಾ ನಿಶ್ಚಿತವೆಂದು ಪ್ರಬುದ್ಧ ದಾಸವರೇಣ್ಯರ ಅಂಬೋಣ. ಇದೇ 'ಭಕ್ತಿ'ಯ ಅನಂತಾರ್ಥದ ವಿಶಿಷ್ಟ ಆವಿರ್ಭಾವ. ಇದೇ ದಾಸವರೇಣ್ಯರ ಬಹ್ವರ್ಥದ ಭಕ್ತಿ ಸಂಗೀತ ಸಾಹಿತ್ಯದ ಲಕ್ಷ್ಯಪ್ರಕಾಶ.

# ೫. ಭಾಸನ ಊರುಭಂಗ ರೂಪಕದಲ್ಲಿ ತಾತ್ತ್ವಿಕದೃಷ್ಟಿ

**ವಿದ್ವಾನ್ ವನರಾಜ ಬಿ.ಕೆ.**
ಸಹಾಯಕ ಪ್ರಾಧ್ಯಾಪಕರು
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.

**ಪೀಠಿಕೆ**

ವಿಪುಲವೂ, ಸಂಪದ್ಭರಿತವೂ ಆದ ಸಂಸ್ಕೃತಭಾಷೆಯು ಪರಮರಮಣೀಯವಾಗಿ ಭಾಷಾಕ್ಷೇತ್ರದಲ್ಲಿ ಉತ್ತಮವಾದ ಸ್ಥಾನವನ್ನು ಪಡೆದಿದೆ. **'ದೇವಭಾಷೆ'** ಎಂದು ಖ್ಯಾತಿಯನ್ನು ಪಡೆದಿರುವ ಈ ಭಾಷೆಯು ಸಾವಿರಾರು ವರ್ಷಗಳ ಹಿಂದೆ ಭಾರತೀಯ ಜನರ ಆಡುಭಾಷೆಯಾಗಿದ್ದು ಕಾಲಾಂತರದಲ್ಲಿ ಪರಿವರ್ತನೆಯನ್ನು ಪಡೆದರೂ ಇಂದಿಗೂ ಸಂಸ್ಕೃತಜ್ಞರ, ಸಂಸ್ಕೃತಾಭಿಮಾನಿಗಳ, ಸಂಸ್ಕೃತಿಪ್ರಿಯರ ಹಾಗೂ ಭಾಷಾಪ್ರೇಮಿಗಳ ಮುಖದಲ್ಲಿ, ಮನಸ್ಸಿನಲ್ಲಿ ರಾರಾಜಿಸುತ್ತಿರುವುದಕ್ಕೆ ಇದರಲ್ಲಿರುವ ವಿಪುಲವಾದ ಅಂತಸ್ಸತ್ತ್ವವೇ ಸಾಕ್ಷಿ ಹಾಗೂ ಕಾರಣ. ಶ್ಲಿಷ್ಟವಾದ ಹಾಗೂ ಶಿಷ್ಟಪ್ರಿಯವಾದ ಸಂಸ್ಕೃತಭಾಷೆ ಭಾಷಾದೃಷ್ಟಿಯಿಂದ ಮಾತ್ರವಲ್ಲದೇ ತನ್ನ ಒಡಲಲ್ಲಿರುವ ಅನಂತ ಸಾಹಿತ್ಯರಾಶಿಯಿಂದಲೂ ಆದರಣೀಯವಾಗಿದೆ. ಸಂಸ್ಕೃತಭಾಷೆಯಲ್ಲಿರುವ ವೇದಗಳು, ಉಪನಿಷತ್ತುಗಳು, ಪುರಾಣಗಳು, ದರ್ಶನಶಾಸ್ತ್ರಾದಿಗಳು, ರಾಮಾಯಣ ಮಹಾಭಾರತಾದಿ ಮಹಾಕಾವ್ಯಗಳು ಇಂದಿಗೂ ಸಮಸ್ತಪ್ರಪಂಚಕ್ಕೆ ಆದರ್ಶಭೂತವಾಗಿವೆ.

**ಸಂಸ್ಕೃತಕಾವ್ಯಸಾಹಿತ್ಯ**

ಸಂಸ್ಕೃತಸಾಹಿತ್ಯವೆಂಬ ಮಹಾಸಾಗರದಲ್ಲಿರುವ ಅನರ್ಘವಾದ ರತ್ನಗಳಲ್ಲಿ ಕಾವ್ಯಸಾಹಿತ್ಯವೂ ಒಂದು. ಆಧ್ಯಾತ್ಮಿಕ, ದಾರ್ಶನಿಕ, ನೈತಿಕ, ಹಾಗೂ ಸಾಮಾಜಿಕ ವಿಷಯಗಳನ್ನು ಹೃದ್ಯವಾಗಿ ಮನೋಜ್ಞವಾಗಿ ಹೇಳುವ ಕಾವ್ಯಗಳು ಸರ್ವಾಕರ್ಷಣೀಯವಾಗಿವೆ. ಕಾವ್ಯ ಎಂಬ ಪದಕ್ಕೆ **ಛಣ್ಯೌ ಛಡೆ್** ಎಂಬ ಅರ್ಥವನ್ನು ವಿಪಶ್ಚಿತರು ನೀಡುತ್ತಾರೆ. ನಿಪುಣವಾದ, ಸಹೃದಯಹೃದಯಾಹ್ಲಾದಕವಾದ ಕವಿಗಳ ಕೆಲಸವೇ ಕಾವ್ಯ ಎಂಬುದು ಈ ವಾಕ್ಯದ ಅರ್ಥ. ಈ ಕಾವ್ಯಗಳು ರಚಿಸುವವರಿಗೂ, ಓದುವವರಿಗೂ ಹಾಗೂ ಕೇಳುಗರಿಗೂ ಯಶಸ್ಸನ್ನು ನಾನಾವಿಧವಾದ ಪ್ರಯೋಜನಗಳನ್ನೂ, ಪಾಪನಾಶನಪೂರ್ವಕಮಂಗಲವನ್ನೂ ಹಾಗೂ ಮನದನ್ನೆಯಾದ ಕಾಂತೆಯ ಮಾತಿನಂತೆ ಶ್ರೋತ್ರಪೇಯವಾದ ವಿಷಯಗಳನ್ನೂ ನೀಡುತ್ತವೆ ಎಂದು ಕಾವ್ಯವಿದರು ಅಭಿಪ್ರಾಯಪಡುತ್ತಾರೆ.

ರಮಣೀಯವಾದ ಅರ್ಥವನ್ನು ಪ್ರತಿಪಾದಿಸುವ ಶಬ್ದಗಳಿಂದ ಕೂಡಿದ ಕಾವ್ಯಗಳನ್ನು **ದೃಶ್ಯಕಾವ್ಯ** ಮತ್ತು **ಶ್ರವ್ಯಕಾವ್ಯ** ಎಂಬುದಾಗಿ ಎರಡು ವಿಧವಾಗಿ ವಿಂಗಡಿಸಲಾಗಿದೆ.

**ಅ) ಶ್ರವ್ಯಕಾವ್ಯಗಳು:–** ಓದುವುದರಿಂದ ಹಾಗೂ ಕೇಳುವುದರಿಂದ ಅರ್ಥದ ಆಸ್ವಾದನೆಯನ್ನು ಮಾಡುವಂತಹ ಕಾವ್ಯಗಳಿಗೆ ಶ್ರವ್ಯಕಾವ್ಯಗಳು ಎಂದು ಕರೆಯುವರು. ಮಹಾಕಾವ್ಯಗಳು, ಖಂಡಕಾವ್ಯಗಳಾದಿಯಾದ ಸಮಸ್ತ ಪದ್ಯಕಾವ್ಯಗಳು, ಗದ್ಯಕಾವ್ಯಗಳು ಹಾಗೂ ಚಂಪೂಕಾವ್ಯಗಳು ಶ್ರವ್ಯಕಾವ್ಯಗಳಲ್ಲಿ ಅಂತರ್ಭಾವವನ್ನು ಹೊಂದುತ್ತವೆ. ಇವುಗಳಲ್ಲಿ ಕೇಳುವುದೇ ಪ್ರಧಾನವಾದ್ದರಿಂದ ಶ್ರವ್ಯಕಾವ್ಯಗಳು ಎನಿಸಿಕೊಂಡಿವೆ.

**ಆ) ದೃಶ್ಯಕಾವ್ಯಗಳು:–** ನಯನಗಳಿಂದ ನೋಡಿ ಆನಂದಿಸಬಹುದಾದ ಕಾವ್ಯಪ್ರಕಾರಗಳಿಗೆ ದೃಶ್ಯಕಾವ್ಯಗಳೆಂದು ಹೆಸರು. ಇಲ್ಲಿ ಕೇಳುವಿಕೆಯಿದ್ದರೂ, ನೋಡುವಿಕೆಯೇ ಪ್ರಧಾನ. ಆದ್ದರಿಂದ ರೂಪಕಗಳು ಮತ್ತು ಉಪರೂಪಕಗಳು ದೃಶ್ಯಕಾವ್ಯಗಳಲ್ಲಿ ಸೇರುತ್ತವೆ.

**ದೃಶ್ಯಕಾವ್ಯಗಳು – ರೂಪಕಗಳು**

ಅಭಿನಯದ ಮೂಲಕ ವಸ್ತುವಿಶೇಷವನ್ನು ನಾಟಕಾದಿರೂಪಕೋಪರೂಪಕಗಳಿಂದ ಕೂಡಿದ ದೃಶ್ಯಕಾವ್ಯಗಳ ಉದ್ದೇಶ. ರೂಪಕಗಳ ಬಗ್ಗೆ ರೂಪಕಜ್ಞಾನಿಗಳ ಅಭಿಪ್ರಾಯ ಈ ರೀತಿಯಾಗಿದೆ.

**ಂಣೆಥು಼ಟ್ಚ್ಬ್ಚೆಟ಼ೖಕ್ರೂ ೞಟ್ರೊ ಖ್ಡಊ಻ೆಡಿ಼ೖಥಿಡಿ಻್ಯೆ ।**

**ೞಟೆಬ್ರೂ ೖಥೆಡೆ಼ಗ್ಯೆಟೆ಻್ರೆ ಋದೆಇ್ರಿಣೆ ಗಥೆ಼ ಡಿ಼ಡೆ್ರ ॥**

ಒಂದು ಅವಸ್ಥೆಯನ್ನು (ರಾಮಕೃಷ್ಣಾದಿಪಾತ್ರವಿಶೇಷಗಳನ್ನು) ಪಾತ್ರಧಾರಿಗಳು ಅಭಿನಯಿಸುತ್ತಾರೆ. ಇದನ್ನೇ ನಾಟ್ಯವೆಂದು ಕರೆಯುವರು. ಅಭಿನಯವನ್ನು ನೋಡಿ ಆನಂದಿಸುವುದರಿಂದ ರೂಪವೆಂಬ ಪದದಿಂದ ಕರೆಯುವರು. ಒಟ್ಟಿನಲ್ಲಿ ಒಂದುಪಾತ್ರವನ್ನು ಯಥಾವತ್ತಾಗಿ ಅನುಕರಿಸಿ ಸಹೃದಯರ ಮುಂದೆ ರೂಪಿಸುವುದರಿಂದ **ರೂಪಕಗಳು** ಎಂದು ಕರೆಯುವರು.

ಹಿಂದಿನ ಕಾಲದಲ್ಲಿ ಜನರಿಗೆ ಮನೋರಂಜನೆಯ ಏಕೈಕಮಾರ್ಗವು ರೂಪಕಗಳು ಅಥವಾ ನಾಟ್ಯಗಳೇ ಆಗಿದ್ದವು. ಭಿನ್ನ ಭಿನ್ನ ಅಭಿರುಚಿಯುಳ್ಳ ಜನರಿಗೆ ಸಮಾನವಾಗಿ ಸಂತೋಷವನ್ನು ಮತ್ತು ರಂಜನೆಯನ್ನು ನಾಟ್ಯಗಳು ನೀಡುತ್ತಿದ್ದವು.

**ಟ಼ಕ್ರೂ್ಬರಿ಼ ಥ್ಯಿಜೆ಼ಟಿಥಊಿ ಠೆಫ್ಟಞ಼ಟಊ್ಯಬ್ರೂ ಥೆಡೆ಼ಗೆಇ಼ಟೆಡೆ್ರ ॥**

ಇಂತಹ ನಾಟ್ಯಶಾಸ್ತ್ರದ ಆದ್ಯಪ್ರವರ್ತಕ ಭರತಮುನಿಯಾಗಿದ್ದಾನೆ. ಇವನಿಂದ ಪ್ರಣೀತವಾದ **ಟ಼ಕದೆ಼ಥಋ಼ಡೆ್ರ** ಎಂಬ ಗ್ರಂಥವು ನಾಟ್ಯಕ್ಕೆ ಸಂಬಂಧಪಟ್ಟಂತೆ ಸಂಪನ್ಮೂಲಗ್ರಂಥವಾಗಿದ್ದು ಸರ್ವಮಾನ್ಯವಾಗಿದೆ. ನಾಟ್ಯಶಾಸ್ತ್ರದ ಮೊದಲನೇ ಅಧ್ಯಾಯದಲ್ಲಿ ನಾಟ್ಯೋತ್ಪತ್ತಿವಿಚಾರವನ್ನು ಕಾಣಬಹುದು. ಮಹೇಂದ್ರಾದಿದೇವತೆಗಳು ಅಧರ್ಮವನ್ನು ನಾಶಪಡಿಸುವ ಸಾಧನವೊಂದನ್ನು ಸೃಷ್ಟಿಸುವಂತೆ ಬ್ರಹ್ಮನನ್ನು ಪ್ರಾರ್ಥಿಸಲಾಗಿ ಬ್ರಹ್ಮನು ಸರ್ವಜನಸೇವ್ಯವಾದ, ದೃಶ್ಯಶ್ರವ್ಯಯೋಗ್ಯವಾದ ಪಂಚಮವೇದವೆಂದು ಖ್ಯಾತವಾದ ನಾಟ್ಯಶಾಸ್ತ್ರವನ್ನು ಸೃಜಿಸಿದನು.

**ಜೆಚ್ಷ಼ಫ ಟೆ಼ೞಡ್ತೆಚಿಣ್ಯೆಖ್ರೆ ಥೆ಼ಡೆಠಿಡಿ಼್ಯ ಚ್ಫೆಡ್ಯೆಣೆ ಛಿ಼ ।**

**ಡಿ಼ಜ್ಞೆಣ್ಯೆ಼ಖ್ಞಊ಼ಟೆಡಿ಼ಟ್ರಿ ಗಥೆ಼ಟ಼ರಿ಼ಣೆ಼ಕ್ಷಟೆ ॥**

ಇಂದರಿಂದ ಬಹಳಪೂರ್ವಕಾಲದಲ್ಲೇ ನಾಟ್ಯವು ಉತ್ಪತ್ತಿಯಾಗಿ ಜನರಿಗೆ ಆಹ್ಲಾದವನ್ನುಂಟುಮಾಡುತ್ತಿತ್ತು ಎಂಬ ಅಂಶವು ತಿಳಿಯುತ್ತದೆ. ಪುರಾಣಗಳಲ್ಲೂ, ಮಹಾಭಾಷ್ಯದಲ್ಲೂ, ಮಹಾಕಾವ್ಯಗಳಲ್ಲೂ ರೂಪಕಗಳ ಬಗ್ಗೆ ಉಲ್ಲೇಖಗಳು ದೊರಕುತ್ತವೆ.

ಅನೇಕ ಮಹಾಕವಿಗಳು ರೂಪಕಗಳನ್ನು ರಚಿಸಿ ಮಹದುಪಕಾರವನ್ನು ಮಾಡಿದ್ದಾರೆ. ಸಮಸ್ತ ಕಾವ್ಯಪ್ರಪಂಚದಲ್ಲಿ ಸಹೃದಯಜನರಿಗೆ ಅತಿಶಯವಾಗಿ ಮನಮುಟ್ಟುವುದು ರೂಪಕಗಳೇ. **ಛಿ಼ಣಊ್ಯತ್ಜಿ ಟ಼ಝೆಬ್ರೂ ಗಊ಼ಡೆ್ರ** ಎಂಬ ವಾಕ್ಯವು ಇದನ್ನು ಪುಷ್ಟೀಕರಿಸುತ್ತದೆ.

ಈ ರೀತಿಯಾದಂತಹ ರೂಪಕಗಳು ಹತ್ತುವಿಧ.

**ಟೆೊಭಡೆರಿ ಟ್ಷಗ್ಗೊ ರಿೇಣಡಿ್ಯಚಿಥೆಡೆಣೆಭ್ಗಕ್ಡಿ್ರ ।**

**ಆಫೆಡ್ಜೆಚಿ f¡ಣ್ಥೆರಿಡಿ್ರ ಟ್ಷಥೆಟ್ಖಡ್ಕೆ ಲಟೆಭ್ಖಿ ಖದೆ ॥**

೧.ನಾಟಕ ೨.ಪ್ರಕರಣ ೩.ಬಾಣ ೪.ಪ್ರಹಸನ ೫.ಡಿಮ ೬.ವ್ಯಾಯೋಗ ೭.ಸಮವಕಾರ ೮.ವೀಥೀ ೯.ಅಂಕ ೧೦.ಈಹಾಮೃಗ.

ವಿವಿಧವಾದ ಲಕ್ಷಣಗಳ ಭೇದವನ್ನನುಸರಿಸಿ ಈ ಹತ್ತು ವಿಧಗಳನ್ನು ವಿಂಗಡಿಸಲಾಗಿದೆ. ಮೂಲಸ್ವರೂಪವು ಒಂದೇ ಆಗಿದ್ದರೂ ಕೆಲವೊಂದು ಒಳಾಂತರಭೇದಗಳನ್ನು ಹೊಂದಿವೆ. ಇವುಗಳಲ್ಲದೇ **ನಾಟಿಕಾತ್ರೋಟಕಾದಿಯಾದ ಹದಿನೆಂಟು ಉಪರೂಪಕಗಳೂ** ದೃಶ್ಯಕಾವ್ಯಗಳಲ್ಲಿ ಸೇರಿವೆ.

**ರೂಪಕಗಳಲ್ಲಿ ನಾಯಕರು**

ರೂಪಕಸಾಹಿತ್ಯದಲ್ಲಿ ವಿಷಯವಸ್ತುನಿರೂಪಣೆ, ಪರಸ್ಪರಸಂಬಂಧ, ಶಬ್ದಗಳ ಬಳಕೆ, ಅಭಿನಯಕಲೆ, ಪ್ರದರ್ಶನ ಮುಂತಾದ ಅಂಶಗಳನ್ನು ಆಧರಿಸಿ ವಿಭಿನ್ನವಾದ ರೂಪಕಲಕ್ಷಣಗಳನ್ನು ಪ್ರಾಜ್ಞರು ತಿಳಿಸಿದ್ದಾರೆ. ಇವುಗಳಲ್ಲೆಲ್ಲಾ ಅತ್ಯಂತಪ್ರಧಾನವಾದ ಅಂಶವೆಂದರೆ ನಾಟ್ಯಕಥಾವಸ್ತುವಿನ ನಾಯಕರು. ನಾಯಕನೇ ಕಥಾವಸ್ತುವನ್ನು ನಡೆಸಿಕೊಂಡು ಹೋಗುವವನು. ಆದ್ದರಿಂದ ನಾಯಕನನ್ನು ಕುರಿತು ನಾಟ್ಯಲಕ್ಷಣಕಾರರು ಉತ್ತಮವಾದ ಲಕ್ಷಣಗಳನ್ನು ಹೇಳಿದ್ದಾರೆ. ಹತ್ತುವಿಧವಾದ ರೂಪಕಗಳಲ್ಲಿ ನಾಲ್ಕುವಿಧವಾದ ನಾಯಕರನ್ನು ಕಾಣಬಹುದು.

೧. **ನಾಯಕಸಾಮಾನ್ಯಲಕ್ಷಣ:–** ಎಲ್ಲಾ ವಿಧವಾದ ರೂಪಕಗಳಲ್ಲೂ ಕಥಾವಸ್ತುವನ್ನು ಇತರಪಾತ್ರಗಳೊಂದಿಗೆ ಮುನ್ನಡೆಸುವ ನಾಯಕರಿಗೆ ಕೆಲವೊಂದು ಸಾಮಾನ್ಯ ಲಕ್ಷಣಗಳನ್ನು ಕಾವ್ಯಶಾಸ್ತ್ರಜ್ಞರು ನಿರೂಪಿಸಿದ್ದಾರೆ.

**ಟ್ಯೆ್ಕಣೆಟ್ಫ್ರ್ಯ ಡೆಇ್ಜಗ್ರ ಊಚ್ಫಿ ಖಿನ್ಕ ಟ್ಷಡಿೋಣೆಖ್ರ ।**

**ಗ್ಯೈಭ್ರ ಧ್ಜೆಛಿಣೆಚಿಡ್ಥೆ ಲಖೀಣೊದ್ಮ್ಗಥಿಗ್ಯ ಡ್ಜಿಣೆ ॥**

**ಠ್ಜೆಇಾಡ್ಜಿಥೆಷಥ್ಕೆಟ್ಷಪೆಭ್ಡೆಟಥೆಡ್ಗಟಣ್ರೈ ।**

**ದ್ಘ್ಗ್ಯ ಢ್ಖಿಷಿ ತ್ಯೆಜೆಥ್ಫೆ ದೆಥಿಬಛಿನ್ಜಿಷಿ ಇಖ್ಡೆಭ್ರ ॥**

ರೂಪಕಗಳಲ್ಲಿ ನಾಯಕನಾಗಿರುವವನು ವಿನಯಶೀಲನೂ, ವ್ಯವಹಾರಗಳಲ್ಲಿ, ಮಾತಿನಲ್ಲಿ ಮಾಧುರ್ಯದಿಂದ ಕೂಡಿದವನೂ, ದಕ್ಷನೂ, ತ್ಯಾಗಶೀಲನೂ, ಉತ್ತಮವಾದ ಎಲ್ಲರಿಗೂ ಪ್ರಿಯವಾದ ಮಾತುಗಳನ್ನು ಆಡುವವನೂ, ಶುಚಿಯಾಗಿರುವವನೂ, ಮಾತುಗಾರನೂ, ಉತ್ತಮವಂಶಜನೂ, ಯುವಕನೂ, ದೃಢಕಾಯನೂ ಆಗಿರಬೇಕು. ಇದಲ್ಲದೆ ಬುದ್ಧಿವಂತಿಕೆ, ಉತ್ಸಾಹ, ಸ್ಮರಣಶಕ್ತಿ, ಪ್ರಜ್ಞೆ, ಅಭಿಮಾನ, ಕಲಾನಿಪುಣತೆ ಮುಂತಾದ ಸದ್ಗುಣಗಳಿಂದ ಕೂಡಿದವನಾಗಿ ಶೂರನೂ, ತೇಜಸ್ವಿಯೂ, ದೃಢಚಿತ್ತನೂ, ಶಾಸ್ತ್ರಜ್ಞನೂ, ಧರ್ಮಶೀಲನೂ ಆಗಿರಬೇಕು. ರೂಪಕರಚನಾಕಾರರು ಪ್ರಸಿದ್ಧವಾದ ಕಥೆಗಳನ್ನೂ ಆಯ್ದುಕೊಂಡು ಅಥವಾ ರಚಿಸಿ ಈ ಎಲ್ಲಾ ಗುಣಗಳನ್ನೂ, ಲಕ್ಷಣಗಳನ್ನು ಹೊಂದಿರುವ ಯೋಗ್ಯನಾದ ನಾಯಕನನ್ನು ಆರಿಸಿ ರೂಪಕಗಳನ್ನು ರಚಿಸುತ್ತಾರೆ.

**ಮಹಾಕವಿ ಭಾಸ**

ಭಾಸನು ಸಂಸ್ಕೃತರೂಪಕಕಾರರಲ್ಲಿ ಅತ್ಯಂತ ಪ್ರಾಚೀನನೂ, ಪ್ರಸಿದ್ಧನೂ ಆಗಿದ್ದಾನೆ. ಇವನು ಅತ್ಯಂತ ಲಲಿತವಾದ, ಮನೋಜ್ಞವಾದ ಸರ್ವಜನಪ್ರಿಯವಾದ ರೂಪಕಗಳನ್ನು ರಚಿಸಿ ಸಂಸ್ಕೃತ ಸಾರಸ್ವತಲೋಕವನ್ನು ಶ್ರೀಮಂತಗೊಳಿಸಿದ್ದಾನೆ. ಇವನ ಅನಂತರ ಕಾಲದಲ್ಲಿದ್ದ ಕಾಳಿದಾಸ ಬಾಣ ಮುಂತಾದ ಕವಿರತ್ನರು ಇವನನ್ನು ಮುಕ್ತಕಂಠದಿಂದ ಹೊಗಳಿದ್ದಾರೆ.

**ಟ್ಷಿರಿಿತಿಡಿದೆಥೊ ಠಿೀಥೆಥ್ಷೆಡೆಿಙ್ಕಣೆಟ್ಜೆಬೀಙ್ಖಟೀಿೊ ಟ್ಷೆರೆಟಇೀಟ್ರ್ ಗ್ಯೆಧಿಡೞಿ ಣಿೋಡೆೀಟೆಿಘಣ್ಯೊ ಙ್ಷೀಖೆಥೆಥೞಿ್ಕಧಿಡಿೀಡಿೀೊ ಛರಿೊ ಟೌಿಗತಿೀಖ್ಯೆ ಠೆಷ್ಟಡೆೀಟ್ರೈ ।**

**ಥ್ಷಿಬೀಇೀಗ್ಙೀಗೞ್ರೈ ಟೀಝಿಟ್ಶೃ ಠೆಷ್ಟೞಿಡೆಟ್ಶೃ ।**

**ಥೆಟೌಿಟ್ರಡಿೀದ್ಯೆ.ೈರಿ್ಯೆ ಠಿೀಥ್ಯೆ ಙ್ಷಣೆಙ್ಜೀಿಗಣೆ ॥**

ಈ ರೀತಿಯಾಗಿ ಕವಿಗಳಿಂದ, ವಿದ್ವಜ್ಜನರಿಂದ ಪ್ರಶಂಸೆಗೆ ಪಾತ್ರನಾದ ನಾಟಕರಚನಾ ಕೋವಿದನನ್ನು ಕವಿತಾಕಾಮಿನಿಯ ಹಾಸವೆಂದು ಕೊಂಡಾಡುತ್ತಾರೆ.

**ಠಿೀಥ್ಯೆ.ಥೆಥ್ಯೆ ॥**

ಆದರೆ ಸಂಸ್ಕೃತಸಾಹಿತ್ಯಪ್ರಪಂಚದಲ್ಲಿ ಇವನ ದೇಶಕಾಲಗಳ ವಿಚಾರದಲ್ಲಿ ಸರಿಯಾದ ಮಾಹಿತಿಯು ತಿಳಿಯದೇ ಇರುವುದು ದೌರ್ಭಾಗ್ಯವೇ ಸರಿ. ಆದರೂ ಮಹಾಮಹೋಪಾಧ್ಯಾಯರಾದ ಗಣಪತಿಶಾಸ್ತ್ರಿಯವರು ಗ್ರಂಥಾನ್ವೇಷಣೆಗಾಗಿ ಕೇರಳದೇಶಕ್ಕೆ ಬಂದವರು ಪ್ರಾಚೀನ ತಾಳೇಗರಿಗಳನ್ನು ಪರೀಕ್ಷಿಸಿ, ಸಂಶೋಧಿಸಿ ಮತ್ತು ಸಂಕಲಿಸಿ ಸ್ವಪ್ನವಾಸವದತ್ತವೆಂಬ ರೂಪಕವನ್ನು ಪ್ರಕಟಿಸಿದರು. ಸ್ವಪ್ನವಾಸವದತ್ತದ ಕರ್ತೃವು **ಭಾಸ**ನೇ ಎಂದು ಇತರ ಪ್ರಮಾಣಗಳಿಂದ ತಿಳಿದುಬಂತು. ಈ ರೂಪಕದಲ್ಲಿರುವ ಅಂಶಗಳ ಸಹಾಯದಿಂದ ರಚನಾಶೈಲಿಯ, ತಂತ್ರಗಳ, ಪಾತ್ರಚಿತ್ರಣಗಳ ಸಾಮ್ಯತೆಯ ಆಧಾರದ ಮೇಲೆ ಇನ್ನಿತರ ೧೨ ರೂಪಕಗಳನ್ನು ಸಂಶೋಧಿಸಿ ಭಾಸಕರ್ತೃಕಗಳೆಂದು ನಿಶ್ಚಯಿಸಿದರು. ಇದಾದ ಮೇಲೆ ಯಜ್ಞಫಲವೆಂಬ ರೂಪಕವೂ ಸಾಮ್ಯತೆಯ ಆಧಾರದ ಮೇಲೆ ಭಾಸನದೆಂದು ನಿರ್ಣಯಿಸಲ್ಪಟ್ಟಿತು.

**ಭಾಸನ ಕಾಲ**

ಭಾಸನ ಕಾಲದ ಬಗ್ಗೆ ನಿಶ್ಚಿತವಾದ ಯಾವುದೇ ನಿಖರಮಾಹಿತಿಯು ಲಭ್ಯವಿಲ್ಲ. ಆದರೂ ಕಾಳಿದಾಸನೂ, ಬಾಣನೂ ಇವನನ್ನು ಪ್ರಶಂಸಿಸಿರುವುದರಿಂದ ಇವನು ಅವರಿಗಿಂತ ಪೂರ್ವಕಾಲದವನೆಂದು ನಿರ್ಣಯಿಸಬಹುದು. ಕಾಳಿದಾಸನ ಕಾಲದ ವಿಷಯದಲ್ಲಿ ಕ್ರಿ.ಶ. ನಾಲ್ಕನೆ ಹಾಗೂ ಕ್ರಿ.ಪೂ. ಪ್ರಥಮ ಶತಕವೆಂಬ ಎರಡು ವಿಕಲ್ಪಗಳಿವೆ. ಆದ್ದರಿಂದ ಭಾಸನು ಕ್ರಿ.ಪೂ. ಪ್ರಥಮ ಶತಕಕ್ಕಿಂತ ಪೂರ್ವದವನೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಭಾಸಪ್ರಣೀತರೂಪಕದ ಕೆಲವು ವಾಕ್ಯಗಳಿವೆ. ಚಾಣಕ್ಯನ ಕಾಲ ಕ್ರಿ.ಪೂ.ನಾಲ್ಕನೇ ಶತಮಾನ. ಆದಕಾರಣ ಭಾಸನು ಕ್ರಿ.ಪೂ.ನಾಲ್ಕನೇ ಶತಮಾನಕ್ಕಿಂತ ಮೊದಲಿನವನೆಂದು ಊಹಿಸಬಹುದು. ಭಾಸನ ರೂಪಕಗಳಲ್ಲಿ ಕೆಲವೊಂದು ಅಪಾಣಿನೀಯ ಪ್ರಯೋಗಗಳಿವೆ. ಆದ್ದರಿಂದ ಗಣಪತಿಶಾಸ್ತ್ರಿಯಾದಿಯಾಗಿ ಬಹಳಷ್ಟು ವಿದ್ವಾಂಸರು ಭಾಸನು ಕ್ರಿ.ಪೂ. ಐದನೇ ಅಥವಾ ಕ್ರಿ.ಪೂ. ಆರನೇ ಶತಮಾನದಲ್ಲಿ ಜೀವಿಸಿದ್ದನು ಎಂದು ನಿರ್ಣಯಿಸಿದ್ದಾರೆ.

೧. **ಭಾಸನ ದೇಶ:–** ಭಾಸನ ದೇಶದ ವಿಷಯದಲ್ಲೂ **ಅಙ್ಘಟಿಖಿೊ** ಎಂಬ ನಿರ್ಣಯವಿಲ್ಲ. ಅವನ ರೂಪಕಗಳಲ್ಲಿ ಬಳಸಿದ ಪದಗಳ, ಸನ್ನಿವೇಶಗಳ ಆಧಾರದ ಮೇಲೆ ಅವನ ದೇಶವನ್ನು ನಿರ್ಣಯಿಸುವ ಪ್ರಯತ್ನಗಳು ನಡೆದಿವೆ. ಅವನು ತನ್ನ ರೂಪಕಗಳಲ್ಲಿ ಬಳಸಿರುವ ಪದವಿಶೇಷಗಳಾಗಲಿ, ಸನ್ನಿವೇಶವಿಶೇಷಗಳಾಗಿ ಏಕದೇಶಕ್ಕೆ ಸಂಬಂಧಪಟ್ಟಂತೆ ಇಲ್ಲದೇ ಇರುವುದರಿಂದ ಇವನ ದೇಶದ ವಿಚಾರದಲ್ಲಿ ಐಕಮತ್ಯ ಅಸಾಧ್ಯ. ಕೆಲವೊಂದು ಪ್ರಮಾಣಗಳನ್ನು ಆಧರಿಸಿ ಭಾಸನು ತಮಿಳುದೇಶದವನೋ, ಕೇರಳ ಪ್ರಾಂತದವನೋ ಅಥವಾ ಉತ್ತರಭಾರತದವನೋ ಆಗಿರಬೇಕೆಂದು ಸಂಶೋಧಕರು ಅಭಿಪ್ರಾಯಪಡುತ್ತಾರೆ. **ಟ್ಶೈ.ಟ್ರೈ** ಎಂಬ ತಮಿಳುಕಾವ್ಯ ಉದಯನನ ಕಥೆಯಿಂದ ಕೂಡಿದ್ದು ತಮಿಳುನಾಡಿನಲ್ಲಿ ಅತ್ಯಂತಜನಜನಿತವಾಗಿತ್ತು. ಅದನ್ನೇ ಆಧರಿಸಿ ಗುಣಾಢ್ಯಣನ ಬೃಹತ್ಕಥೆಯಿಂದ ಉದಯನ ಮತ್ತು ವಾಸವದತ್ತೆಯರ ಕಥೆಯಿಂದ ಕೂಡಿದ ಅಂಶವನ್ನು ಸ್ವೀಕರಿಸಿ, **'ಪ್ರತಿಜ್ಞಾಯೌಗಂಧರಾಯಣ'** ಎಂಬ

ರೂಪಕವನ್ನು ಭಾಸ ಕವಿಯು ರಚಿಸಿದನು. ಆದ ಕಾರಣ ಇವನು ತಮಿಳನವನೆಂದು ಬಹುಜನರ ಅಭಿಪ್ರಾಯ. ಇವನ ರೂಪಕಗಳಲ್ಲಿ **'ಆಮ', 'ಭೃಂಗಾರ', 'ಸಂಬಂಧ'** ಮುಂತಾದ ಮಲಯಾಳಭಾಷೆಯ ಪದಗಳಿರುವುದರಿಂದಲೂ ಹಾಗೂ ಇವನ ರೂಪಕಗಳು ಕೇರಳದಲ್ಲೇ ಸಿಕ್ಕಿರುವುದರಿಂದ ಇವನು ಕೇರಳದೇಶೀಯನೆಂದು ಅಭಿಪ್ರಾಯವಿದೆ. ಅಲ್ಲದೇ ಇವನು ಉತ್ತರಭಾರತದ ನದಿಪರ್ವತಾದಿ ಪ್ರಕೃತಿವಿಶೇಷಗಳನ್ನು ವರ್ಣಿಸಿರುವುದರಿಂದ ಉತ್ತರಭಾರತೀಯನೆಂದೂ ಕೆಲವರು ಅಭಿಪ್ರಾಯಪಡುತ್ತಾರೆ.

೨. **ಭಾಸನ ಶೈಲೀ :–** ಭಾಸನ ಭಾಷಾಶೈಲೀ ಅತ್ಯಂತ ಹೃದ್ಯವಾಗಿದೆ. ವಿದ್ವಾಂಸರಿಂದ ಹಿಡಿದು ಸಾಮಾನ್ಯ ಸಂಸ್ಕೃತಜ್ಞನಿಗೂ ಅರ್ಥವಾಗುವಂತಹ ಸರಳಸುಂದರಭಾಷೆ ಭಾಸನದು. ಕಥಾನಿರೂಪಣೆ ಹಾಗೂ ಅಗತ್ಯಕ್ಕೆ ತಕ್ಕಂತೆ ಕಥೆಯಲ್ಲಿನ ಕೆಲವೊಂದು ವ್ಯತ್ಯಾಸವೂ ಕೂಡ ಅತ್ಯಂತ ಯುಕ್ತವಾಗಿರುತ್ತದೆ. ಇವನ ರೂಪಕಗಳಲ್ಲಿನ ಕಥಾವಸ್ತು, ಪಾತ್ರಗಳಲ್ಲಿನ, ತಂತ್ರಗಳಲ್ಲಿನ ವೈವಿಧ್ಯವು ಅತ್ಯಂತ ಚಮತ್ಕಾರದಿಂದ ಕೂಡಿದೆ. ಪದರಚನೆಯಲ್ಲಿ ಅತಿಸರಳತೆ ಭಾಸನ ವಿಶೇಷತೆ ಎಲ್ಲಿಯೂ ಕಠಿಣಪದಗಳನ್ನಾಗಲಿ, ಸಮಾಸಭೂಯಿಷ್ಠ ಶಬ್ದಗಳನ್ನಾಗಲಿ ಭಾಸನು ಪ್ರಯೋಗಿಸಿಲ್ಲ. ಇವನ ಭಾಷೆ ಸುಲಭ, ಮನೋಜ್ಞ ಹಾಗೂ ಸರ್ವಜನಾಕರ್ಷಕ ಕುತೂಹಲಕಾರಿ ಸನ್ನಿವೇಶಗಳ ನಿರ್ಮಾಣ, ಕಥಾವಸ್ತುವಿಗನುಗುಣವಾದ ಪಾತ್ರಚಿತ್ರಣ, ಔಚಿತ್ಯಪೂರ್ಣವಾದ ರಸಾಭಿವ್ಯಕ್ತಿ ಇವುಗಳೇ ಭಾಸರೂಪಕಗಳ ಉತ್ಕೃಷ್ಟತೆಗೆ ಪ್ರಧಾನಹೇತುಗಳು.

೩. **ಭಾಸನ ರೂಪಕಗಳು:–** ನಾಟಕಕರ್ತೃಗಳಲ್ಲಿ ಅತ್ಯಂತ ಶ್ರೇಷ್ಠನಾದ ಭಾಸನು ಎಲ್ಲಾ ವಿಧವಾದ ರೂಪಕರಚನಾಕೌಶಲಗಳನ್ನು ಹೊಂದಿದ್ದು ಹತ್ತುವಿಧವಾದ ರೂಪಕಗಳಲ್ಲಿ ಪ್ರಧಾನವಾದ ರೂಪಕಭೇದಗಳನ್ನು ರಚಿಸಿದ್ದಾನೆ. ಕಥಾವಸ್ತುವಿನ ಆಯ್ಕೆಯಲ್ಲೂ ವೈವಿಧ್ಯವನ್ನು ತೋರಿಸಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿದ್ದಾನೆ. ಇವನು ಮಹಾಭಾರತ, ರಾಮಾಯಣ, ಭಾಗವತ ಮತ್ತು ಬೃಹತ್ಕಥೆಗಳಿಂದ ಆಧರಿಸಿ, ರೂಪಕಲಕ್ಷಣಕ್ಕನುಗುಣವಾಗಿ ಕಥೆಯನ್ನು ಪರಿವರ್ತಿಸಿ ರೂಪಕಗಳನ್ನು ರಚಿಸಿದ್ದಾನೆ. ಅಲ್ಲದೇ ತನ್ನ ಸ್ವಪ್ರತಿಭೆಯಿಂದ ಸ್ವಯಂಕೃತ ರೂಪಕಗಳನ್ನು ಜನರಿಗೆ ನೀಡಿದ್ದಾನೆ. ಇವನು **ಚತುರ್ದಶರೂಪಕಗಳ ಕರ್ತೃ**.

೧. **ರಾಮಾಯಣಾಧಾರಿತರೂಪಕಗಳು:–**
   ೧. ಅಭಿಷೇಕನಾಟಕ
   ೨. ಪ್ರತಿಮಾನಾಟಕ
   ೩. ಯಜ್ಞಫಲಮ್

೨. **ಮಹಾಭಾರತಾಧಾರಿತರೂಪಕಗಳು:–**
   ೧. ಮಧ್ಯಮವ್ಯಾಯೋಗ
   ೨. ದೂತವಾಕ್ಯ
   ೩. ದೂತಘಟೋತ್ಕಚ
   ೪. ಕರ್ಣಭಾರ
   ೫. ಊರುಭಂಗ
   ೬. ಪಂಚರಾತ್ರ

**೩. ಭಾಗವತಾಧಾರಿತರೂಪಕ**

೧. ಬಾಲಚರಿತ

**೪. ಬೃಹತ್ಕಥಾಧಾರಿತರೂಪಕಗಳು**

೨. ಪ್ರತಿಜ್ಞಾಯೌಗಂಧರಾಯಣ

೩. ಸ್ವಪ್ನವಾಸವದತ್ತ

**೫. ಭಾಸಸ್ವಯಂಕೃತರೂಪಕಗಳು**

೧. ಚಾರುದತ್ತ

೨. ಅವಿಮಾರಕ

ಇವುಗಳಲ್ಲೆಲ್ಲಾ ಅನೇಕ ಸಾಮ್ಯಾಂಶಗಳಿರುವುದರಿಂದ ಇವುಗಳು ಭಾಸಕರ್ತೃಕವೆಂದು ವಿದ್ವಜ್ಜನರ ಅಭಿಪ್ರಾಯ.

**ಊರುಭಂಗ ರೂಪಕದಲ್ಲಿ ಕೆಲವು ತಾತ್ತ್ವಿಕ ದೃಷ್ಟಾಂತ ಸನ್ನಿವೇಶಗಳು**

ಹನ್ನೊಂದು ಅಕ್ಷೌಹಿಣೀ ಸೇನೆಗೆ ಒಡೆಯನಾದ ಚಕ್ರವರ್ತಿಯಾಗಿದ್ದರೂ ದುರ್ಯೋಧನನು ಕೊನೆಗಾಲಕ್ಕೆ ಹಸ್ತ್ಯಶ್ವರಥಪದಾತಿಗಳೊಂದೂ ಇಲ್ಲದೆ, ತೊಡೆ ಮುರಿದು ಬಿದ್ದು ಏಕಾಕಿಯಾಗಿ ಕೊರಗಿ ಸಾಯುವ ದುಃಖದೃಶ್ಯವನ್ನು ಹಲವರು ಚಿತ್ರಿಸಿದ್ದಾರೆ. ನೂರು ಜನ ವೀರಪುತ್ರರನ್ನು ಕಳೆದುಕೊಂಡರೂ ದುರ್ಯೋಧನನನ್ನು ನೋಡಿ ಹೊಟ್ಟೆ ಹಿಡಿದುಕೊಂಡು ಬಂದಿರುವ ಮುಪ್ಪಿನ ಮುದುಕರಾದ ಅಂಧ ತಾಯಿ ತಂದೆಗಳನ್ನು ಅಲ್ಲಿಗೆ ಕರೆತಂದು ಅವನೊಡನೆ ಮಾತನಾಡಿಸಿ ಆ ದುಃಖ ದೃಶ್ಯವನ್ನು ದಾರುಣವಾಗಿ ಮಾಡಿದ್ದಾರೆ.

ಭಾಸನು ಇಲ್ಲಿಯೂ ತನ್ನ ಕಲ್ಪನಾಶಕ್ತಿಯನ್ನು ಪ್ರಯೋಗಿಸಿ ಆ ದಾರುಣ ವೃತ್ತಾಂತವನ್ನು ದಾರುಣತರವಾಗಿ ಮಾಡುತ್ತಾನೆ – ಧೃತರಾಷ್ಟ್ರ ಗಾಂಧಾರಿಯರೊಡನೆ ದುರ್ಯೋಧನನನ್ನು ಹುಡುಕಿಕೊಂಡು ಅವನ ಹೆಂಡತಿಯರಾದ ಮಾಲವಿ ಪೌರವಿಯರೂ ಹಾಗೂ ಅವನ ಮಗನಾದ ದುರ್ಜಯನೂ ಬರುತ್ತಾರೆ. ಇದರಿಂದ ಅದರಲ್ಲಿಯೂ ಆ ಮಗುವಿನಿಂದ, ಕರುಣರಸವು ಶತಾಧಿಕವಾಗುತ್ತದೆ. ಕರುಣರಸವನ್ನು ಇಷ್ಟು ತೀವ್ರಗೊಳಿಸುವುದಕ್ಕೆ ಮಗುವನ್ನು ಉಪಯೋಗಿಸಿಕೊಂಡಿರುವುದು ಸಂಸ್ಕೃತ ನಾಟಕಗಳಲ್ಲಿ ಇದೊಂದೇ ಎಂದು ತೋರುತ್ತದೆ.

ಧೃತರಾಷ್ಟ್ರ, ಗಾಂಧಾರಿ, ಪೌರವಿ, ಮಾಳವಿ ಮತ್ತು ದುರ್ಜಯ ಇವರು ರಣರಂಗದಲ್ಲಿ ದುರ್ಯೋಧನನನ್ನು ಹುಡುಕುತ್ತಾ ದುಯೋರ್ಧನನ ಬಳಿಗೆ ಬರುವರು. ತಾಯಿತಂದೆಗಳನ್ನು ಕಾಣುತ್ತಿದ್ದ ಹಾಗೇ ದುರ್ಯೋಧನನು ಏಳುವುದಕ್ಕೆ ಹೋಗುವನು. ತೊಡೆ ಮುರಿದಿದ್ದದ್ದರಿಂದ ಕಾಲು ಮಡಿಚಿಕೊಂಡು ಬಿದ್ದು ಹಾಗೇ ಕುಳಿತಿರುವನು.

ಧೃತರಾಷ್ಟ್ರನು ದುರ್ಜಯನಿಗೆ ನಿಮ್ಮ ತಂದೆಯ ತೊಡೆಯ ಮೇಲೆ ಕುಳಿತುಕೋ ಎಂದು ತಿಳಿಸುತ್ತಾನೆ. ಆಗ ದುರ್ಯೋಧನನು ತನ್ನ ಮಗನನ್ನು ಕಂಡು ಅಯ್ಯೋ ಇವನೂ ಬಂದನೇ? ಇವನು ದುಃಖವೆಂಬುದನ್ನೇ ಕಾಣದಿರುವನು, ತೊಡೆಯ ಮೇಲೆ ಮಲಗುವ ಕೂಸು ಇವನು. ನಾನು ಸೋತು ಬಿದ್ದಿರುವುದನ್ನು ನೋಡಿ ಏನೆಂದುಕೊಳ್ಳುತ್ತಾನೆಯೋ ಎಂದು ಚಿಂತಿಸುತ್ತಾ ತನ್ನ ಮಗನಾದ ದುರ್ಜಯನಿಗೆ ನೀನು ಏತಕ್ಕಾಗಿ ಇಲ್ಲಿಗೆ ಬಂದೇ ಎಂದು ಕೇಳಲು, ಅಪ್ಪಾ ನೀನು ತಡಮಾಡಿದೆ; ಅದಕ್ಕೆ ಬಂದೆ ಎಂದು ತಿಳಿಸುತ್ತಾನೆ. ಆಗ ದುರ್ಯೋಧನನು ಅಯ್ಯೋ! ಇಂಥ ಅವಸ್ಥೆಯಲ್ಲಿರುವುದರಿಂದ, ಪುತ್ರಸ್ನೇಹವು ಹೊಟ್ಟೆಯಲ್ಲಿ ಉರಿ ಎಬ್ಬಿಸುತ್ತಿದೆ! ಎನ್ನುತ್ತಾನೆ. ಆಗ ದುರ್ಜಯನು ಅಪ್ಪಾ ನಾನು ನಿನ್ನ ತೊಡೆಯ ಮೇಲೆ ಕುಳಿತುಕೊಳ್ಳಬೇಕು ಎಂದು ತೊಡೆಯ ಮೇಲೆ ಕುಳಿತುಕೊಳ್ಳುತ್ತಾನೆ.

ಆಗ ದುರ್ಯೋಧನನು ತೊಡೆಯ ನೋವಿನಿಂದ ಅಯ್ಯೋ ದುರ್ಜಯ, ಬೇಡ– ಆಹಾ, ಕಾಲ ವಿಪರ್ಯಾಸದಿಂದ ಚಂದ್ರನು ಅಗ್ನಿಯಾದನಲ್ಲ! ಎನ್ನುತ್ತಾನೆ. ಅಂದರೆ ತಣ್ಣನೆ ಚಂದ್ರನೂ ಸಹ ನನಗೆ ಇಂದು ಸುಡುತ್ತಿರುವನಲ್ಲ ಎಂದು.

**ಊಿಜಾಶಿ ಟೌಿಗ್ಘಿಶಿಂಿ ಟ್ಜಬಿ! ಡಿಬಿ ತೆಬಿ ಱೆಡಿಿಥಊಿಶಿಡ್ರೆ ।**

**ಂಶ್ಷುಶಿಕ್ಷಿತೆ ಟಿಿಥ್ಥೆಬ್ರಾ ಟ್ಝಣಿಿಕ್ಷಿನ್ರಾ ತೆಣಿಿಥೆಟಿಡ್ರೆ ॥**

ಮಗನನ್ನು ಕಂಡು ಖುಷಿಪಡುವ ಸಮಯದಲ್ಲಿ ಮಗ ಹತ್ತಿರ ಬಂದರೆ ಇಂದು ನೋವಾಗುತ್ತಿದೆ. ಈ ಅವಧಿಯಲ್ಲಿ ಮಗನನ್ನು ನೋಡಿದಾಗ ಕೂಡ ಚಂದ್ರನಿಂದ ಬೆಂಕಿ ಉಗುಳಿದ ಹಾಗೆ ಅನಿಸುತ್ತಿದೆ.

ಅಂದರೆ ಮೊದಲು ನೀನು ನನ್ನ ತೊಡೆಯಮೇಲೆ ಕುಳಿತುಕೊಳ್ಳುತ್ತಿದ್ದೆ, ಆದರೆ ಈ ದಿನ ಬೇರೆ ಕಡೆ ಕುಳಿತುಕೋ, ಈ ಹಿಂದೆ ಕುಳಿತುಕೊಂಡು ಅನುಭವಿಸಿದ ಆಸನ ಇವತ್ತು ಇಲ್ಲ. ತನ್ನ ಶರೀರದ ಮೇಲಿನ ಮೋಹವನ್ನು ತಾನು ಕಳೆದುಕೊಂಡಿದ್ದ.

ದುರ್ಯೋಧನನ ಅವಸ್ಥೆಯನ್ನು ನೋಡಿ ದುಃಖಿಸುತ್ತಿರುವ ತಂದೆ–ತಾಯಿಯರನ್ನು, ಹೆಂಡತಿಯರನ್ನು ಸಮಾಧಾನಗೊಳಿಸುವುದು ಹೇಗೆ? ಧೀರನಂತೆ! – ನಾನು ಯುದ್ಧದಲ್ಲಿ ಬೆನ್ನು ತೋರಿಸದೆ ವೀರನಂತೆ ಸತ್ತೆ, ಮಾನದಿಂದ ಸತ್ತೆ! **ಡ್ಯಿಟ್ರೀಣೆ ಡೌಿಟ್ಯಿಟಿ ಥೆಡ್ರೊ ಟ್ಷಿಥ್ಥ್ಯೆ ವ್ಯಿಟ್ರೀಣೆ ಡೌಿಟ್ಯಿಟ್ಕಿ ಖಾಶೊ ಟ್ಷಿಡಿಿಡೆ!** ಎಂದು.

ದುರ್ಯೋಧನನು ದುರ್ಜಯನನ್ನು ಕುರಿತು ಹೇಳುತ್ತಾನೆ. ಮಗು, ಇನ್ನು ಮುಂದೆ ಪಾಂಡವರನ್ನು ನನ್ನಂತೆ ಶುಶ್ರೂಷೆ ಮಾಡು; ಅಜ್ಜಿ ಕುಂತಿಯರು ಹೇಳಿದಹಾಗೆ ನೀನು ಕೇಳಬೇಕು; ಅಭಿಮನ್ಯುವಿನ ತಾಯಿ, ದ್ರೌಪದಿ, ಇಬ್ಬರನ್ನೂ ತಾಯಿಯರ ಹಾಗೆ ಪೂಜಿಸಬೇಕು. ಅಭಿಮಾನದೀಪ್ತ ಹೃದಯನಾದ ನಿನ್ನ ತಂದೆ ದುರ್ಯೋಧನನು ಸರಿಸಮಾನನೊಡನೆ ಎದುರೆದುರಿಗೆ ನಿಂತು ಹತನಾದನೆಂದು ಅರಿತು, ದುಃಖವನ್ನು ಬಿಡು; ನನ್ನ ಕಾಲಾನಂತರದಲ್ಲಿ ಪಾಂಡವರೊಡನೆ ಬೆರೆತು ಅವರ ಜೊತೆಯಲ್ಲಿ ತರ್ಪಣವನ್ನು ಕೊಡು!

ಇದನ್ನು ಭಾಸನು–

**ಧೌಿಥಊಿ®ಿಘ್ಘಿಔಿಡೌಿಟಿಖುತೆ™ಖಊಿ್ಯ ಕ್ಷಊಿ್ಯಿಇಾಿಟ್ಯ ಡ್ಯೈಟಿೌ**

**ಕ್ಷೆಡ್ಯಿಟ್ಖಿಕಿಿಡ್ಜಚೊ ಗ್ಯ ಫೆ ಆ್ಕೆ ಱೊ ದ್ಯೆಘಡ್ಯೆಣೊ ಊಿಜೆ ।**

**ಥ್ಥೈತಿಜ್ಞೌಣಿ ಛ್ರಿಣೆ ಡ್ಜಿಇ್ಕಿಸಾಥಊಿ್ಕಣೆಟ್ಜೊ ನಿ್ರಿಡೌಿಟೆಥೆಣಊೊ ಕ್ಷಿಜೊ**

**ಖ್ಯಡಿೊ ಟೌ್ಕಿಥ್ಥೆಥಣೌಡಿಿ ಡೆಡೆ ಥೆಡ್ರೊ ಟಿಿಡೌಿಣೆಥೌಟ್ಯ ಜೌಡ್ರೆ ॥** ಎಂದು ಹೇಳಿದ್ದಾನೆ.

ತದನಂತರ ಅಶ್ವತ್ಥಾಮನು ಬಂದು ಕುರುರಾಜ, ಇದೇನು? ಎಂದು ಕೇಳುವನು. ದುರ್ಯೋಧನನು ಇದು ಅಪರಿತೋಷದ ಫಲ ಎಂದು ಉತ್ತರ ಕೊಡುವನು. ಅವನಿಗೆ ವೈರವು ಹರಿದುಹೋಯಿತು. ಆದ್ದರಿಂದ ಶತ್ರುನಾಶ ಮಾಡುತ್ತೇನೆಂಬ ಅಶ್ವತ್ಥಾಮನನ್ನು ಕುರಿತು, ಬೇಡ ಬೇಡ! ಪಟ್ಟಾಭಿಷಿಕ್ತರೆನಿಸಿಕೊಂಡಿದ್ದ ರಾಜರೆಲ್ಲ ಹೋದರು; ನೂರುಜನ ತಮ್ಮಂದಿರು ಹೋದರು; ನಾವೂ ಹೀಗಾಗಿದ್ದೇವೆ; ಆದ್ದರಿಂದ ಬಿಲ್ಲನ್ನು ಬಿಸಾಕು ಎಂದು ಬುದ್ಧಿ ಹೇಳುವನು.

**ಡಿತ್ಯ್ಕಸಿ ಛ್ಗಟಿಚ್ಷಿಥ್ಗೆಥಿಶಿಛಥಿಿ ಕ್ಷ್ಯ ತೆಖೆ ಕ್ಷೆಟೆಖ**

**ಡಿಲೈ್ಯಟೆ ಫೆಥೆಖೆ ಗಿಡ್ಜಚ್ಯ ಟ್ಜಬ್ಯಕಿಿಡೆಟಡ್ಜ್ಪ ಟ್ಜೆಟ್ಪ ।**

**ಂನಿಿಣಊಿಿಜ್ಗೆಜೌ ಣೆಟೊ ಣೆಟಿಡ್ಥೆಚ್ರಿಡಿಿಿಟೌ್ಕಿಣ್ಪ ಥ್ಥೊ®ಿಶಿ**

**ಟಿಟಣೆಟೊ ಢ್ಕಡಿ ತ್ರೈ ಛ್ಯೊ್ಕಣೆಡ್ಥದೆ ಕ್ಷ್ಯ! ಖುೌಿ™ೊ ಕ್ಷನಿತ್ರೈ ॥**

ದುರ್ಯೋಧನನು ಅಶ್ವತ್ಥಾಮನನ್ನು ಕುರಿತು ಹಾಗಲ್ಲ! ರಾಜರು ಮಾನಶರೀರರು. ಮಾನಾರ್ಥವಾಗಿ ನಾನು ಯುದ್ಧವನ್ನು ಕೈಗೊಂಡದ್ದು. ದ್ರೌಪದಿಯನ್ನು ಮುಂದಲೆ ಹಿಡಿದು ಎಳೆಸಿ ತಂದದ್ದು, ಅಭಿಮನ್ಯುವನ್ನು ಕೊಂದದ್ದು, ಜೂಜಿನಲ್ಲಿ ಸೋಲಿಸಿ ಓಡಿಸಿದ್ದು; ಇವುಗಳಿಗೆ ಬದಲಾಗಿ ನನ್ನ ದರ್ಪವನ್ನು ಅವರು ಕಿತ್ತುಕೊಂಡದ್ದು ಅತ್ಯಲ್ಪವಲ್ಲವೇ? ಯೋಚಿಸಿನೋಡು ಎಂದು ಹೇಳುತ್ತಾನೆ.

**ಭಾಸನ ತಾತ್ತ್ವಿಕತೆಗೆ ಉದಾಹರಣೆ**

ದುರ್ಯೋಧನನಲ್ಲಿ ಬದಲಾವಣೆಯಾಗಿದೆ, ಮನೋಭಾವ ಬದಲಾಗಿದೆ, ಕಪಟತನ, ಛಲ ಎಲ್ಲವೂ ಕೂಡ ಬದಲಾಗಿದ್ದದ್ದು ತೋರುತ್ತದೆ. ದುರ್ಯೋಧನನ ಮನಃಪರಿವರ್ತನೆಯನ್ನು ಭಾಸ ಈ ರೀತಿಯಾಗಿ ನಿರೂಪಿಸಿದ್ದಾನೆ. **ಒಷ್ಟಡೆಣೆ ಟ್ಸೆಕ್ಷಿಣ್ಸ್ರೆ ಧ್ಜೆಷ್ಟಿಕ್ಡಿಚೆಣಾ್ರೆ, ತಿಬ್‌ಠಿ‌ಣೊಷಿರಾೆಡ್ರ್ರೆ ಜ್ಟಟಾ್ರ್ಕಟ್ಖ್ಯದ್ರ್ಯ ಣಿಟ್ಕ್ಡಿಚೆಣಾ್ರೆ । ಠ್ಠಿಡೆಟಡ್ರ್ಯೆಜ್ಟೆಟ್ಟ್ರೆ ಫ್ರೆಟೆಪ್ರ ಛ್ರ್ಯಠ್ರ್ಯ ಡೆಸ್ಥಿಣ್ಪ್ಯಜ್ಜಡಿಚೆಣಾ್ರ್ಯ । ಟೆಡೂ ಟ್ಜಬ್ !**

ಇದರ ಒಟ್ಟು ತಾತ್ಪರ್ಯವೇನೆಂದರೆ ಶತ್ರುತ್ವವನ್ನು ಬಿಟ್ಟು ತಾನು ಹೇಗೆ ದುರ್ಯೋಧನ ಬದಲಾದ ಎಂಬುದನ್ನು ಭಾಸ ನಿರೂಪಿಸಿದ್ದಾನೆ. ಯಾರನ್ನು ತನ್ನ ಆಜನ್ಮ ಶತ್ರು ಎಂದು ಭಾವಿಸಿದ್ದಾನೆ. ಅವರನ್ನು ತಾನು ಸೇವೆ ಮಾಡು ಎಂದು ಮಗನಾದ ದುರ್ಜಯನಿಗೆ ಆದೇಶಿಸುತ್ತಾನೆ. ಪಾಂಡವರನ್ನು, ಕುಂತಿ, ದ್ರೌಪದಿ ಮತ್ತು ಸುಭದ್ರೆಯರನ್ನು ತಾಯಿಯಂತೆ ಗೌರವಿಸಬೇಕು. ಇದು ಅವನ ಬದಲಾವಣೆಯನ್ನು ಸೂಚಿಸುತ್ತದೆ. ಅವನು ಎಷ್ಟು ಉದಾರಿಯಾಗಿದ್ದಾನೆ ಎಂದು ಸೂಚಿಸುತ್ತದೆ.

ಬಲದೇವನಿಗೆ ಅನಿಸುತ್ತದೆ. ದುಯೋರ್ಧನನಿಗೆ ವೈರ ಎಂಬುದು ಪಶ್ಚಾತ್ತಾಪವಾಯಿತಲ್ಲ ಎಂದು. ಇದನ್ನು **ಒಫ್ಯೆ ಣ್ರೆಗ್ರಾ ಟೆಷಿ್ಬೆಟ್ಯೆ ಥೊಣ್ಗೆಬ್ಯೆ** ಎಂದು ಹೇಳಿದೆ. ತತ್ತ್ವದರ್ಶನದ ಪರಿಣಾಮವೇ ಇಲ್ಲಿ ಪಶ್ಚಾತ್ತಾಪ. ಇವನ ವೈರ, ದ್ವೇಷ, ಕ್ರೋಧ ಇವೆಲ್ಲವೂ ಪಶ್ಚಾತ್ತಾಪವಾಗಿ ಬದಲಾಯಿತು. ವೈರ ಎಂಬುದು ಯಾರಿಗೆ ತತ್ತ್ವದರ್ಶನವಾಗಿರುತ್ತದೆಯೋ, ಯಾರು ತತ್ತ್ವದರ್ಶಿಯಾಗಿರುತ್ತಾನೋ, ಪರಮಾತ್ಮನನ್ನು ಮತ್ತು ಆತ್ಮತತ್ತ್ವವನ್ನು ಅರಿತುಕೊಂಡಿರುತ್ತಾನೋ ಅವನಿಗೆ ಮಾತ್ರ ಉಂಟಾಗುವಂತಹ ಪರಿವರ್ತನೆಯನ್ನು ಭಾಸ ಈ ಕ್ರಮದಲ್ಲಿ ತೋರಿಸಿದ್ದಾನೆ.

**ಉಪಸಂಹಾರ**

ಹೀಗೆ ಭಾಸ ತನ್ನ ನಾಟಕಗಳಲ್ಲಿ ತತ್ತ್ವದರ್ಶನಕ್ಕೆ ಸಂಬಂಧಪಟ್ಟ ಅಪರೂಪದ ಅಂಶಗಳನ್ನು ಅಡಕಮಾಡಿ ಲೋಕಕ್ಕೆ ತಿಳಿಸಿದ್ದಾನೆ. ಭಾಸನು ಈ ರೀತಿಯಾಗಿ ತತ್ತ್ವದೃಷ್ಟಿಯನ್ನು ಪಾತ್ರಗಳ ಮೂಲಕ ನಿರೂಪಿಸಿದ್ದಾನೆ. ಮೂಲ ಕಾವ್ಯಗಳಲ್ಲಿ ಕಂಡುಬರದ ವಿಶೇಷ ಸನ್ನಿವೇಶಗಳನ್ನು ಸೃಷ್ಟಿಸಿ ಲೋಕಕ್ಕೆ ತತ್ತ್ವದರ್ಶನದ ಸಂದೇಶವನ್ನು ನೀಡಿದ್ದಾನೆ.

**ಪರಾಮರ್ಶನ ಗ್ರಂಥಗಳು**


೧. ಭಾಸನಾಟಕಚಕ್ರಮ್ – ಚೌಕಂಬಾ ಪ್ರಕಾಶನ
೨. ಊರುಭಂಗಮ್ – ಮೋತಿಲಾಲ ಬನಾರಸಿದಾಸ್
೩. ಭಾಸಮಹಾಸಂಪುಟ – ಎಸ್.ವಿ.ಪರಮೇಶ್ವರಭಟ್ಟ
೪. ಸಂಸ್ಕೃತಭಾಷಾಶಾಸ್ತ್ರ – ಸಾಹಿತ್ಯಚರಿತ್ರೆ, ಕರ್ನಾಟಕ ಸರ್ಕಾರ, ಕ.ಪ.ಮು –೧೯೯೩
೫. ದಶರೂಪಕಮ್ – ಕೊಲಂಬಿಯ ಯೂನಿವರ್ಸಿಟಿ ಪ್ರೆಸ್
೬. ಪ್ರತಾಪರುದ್ರೀಯ – ಚೌಖಂಬಾ ಪ್ರಕಾಶನ
೭. ಭಾಸ – ಎ.ಆರ್.ಕೃಷ್ಣಶಾಸ್ತ್ರೀ

# ೬. ಯೋಗ – ಆಧ್ಯಾತ್ಮಿಕ – ಆರೋಗ್ಯ– ಒಂದು ಅಧ್ಯಯನ

**ಡಾ.ಜಯರೇವಣ್ಣ.ಎಂ.ವಿ**
ಸಹಾಯಕ ಪ್ರಾಧ್ಯಾಪಕರು, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ,
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,
ಚಾಮರಾಜಪೇಟೆ, ಬೆಂಗಳೂರು.

ಯೋಗವು ಅನಾರೋಗ್ಯವನ್ನು ಆರೋಗ್ಯವಾಗಿ ಪರಿವರ್ತಿಸುವ ಒಂದು ವೈಜ್ಞಾನಿಕ ಪ್ರಕ್ರಿಯೆಯಾಗಿದೆ. ನಮ್ಮೊಳಗೆ ಸುಪ್ತವಾಗಿರುವ ದಿವ್ಯಚೈತನ್ಯವನ್ನು ಅಭಿವ್ಯಕ್ತಗೊಳಿಸಿ ಆತ್ಮ ಸಾಕ್ಷಾತ್ಕಾರದ ಕಡೆಗೆ ಮುನ್ನಡೆಸುವ ವ್ಯವಸ್ಥೆಯೇ ಯೋಗ.

ಯೋಗವು ಒಂದು ವಿಶಿಷ್ಟವಾದ ದರ್ಶನ ಅದೊಂದು ಅದ್ಭುತವಾದ ಸಾಧನಾ ಮಾರ್ಗವಾಗಿದ್ದು, ಆಚಾರ–ವಿಚಾರಗಳು ಸಮಾನವಾಗಿ ಸಾಗುತ್ತವೆ. ಜ್ಞಾನ, ಭಕ್ತಿ, ಕರ್ಮ ಮುಂತಾದ ಸಿದ್ಧಾಂತಗಳ ತಳಹದಿಯ ಮೇಲೆಯೇ ಯೋಗದ ವಿಚಾರ ವಾಹಿನಿಯೂ ವಿಹರಿಸುತ್ತದೆ.

ಯೋಗ ಎಂಬೆರಡಕ್ಷರಗಳು ಸಂಸ್ಕೃತದ 'ಯುಜ್' ಧಾತುವಿನಿಂದ ಯೋಗವೆಂಬ ಪದ ಹುಟ್ಟಿದೆ. 'ಯುಜ್ಯತೆ ಅನೇನ ಇತಿಯೋಗಃ'– ಇದು ಯೋಗ ಶಬ್ಧದ ವ್ಯುತ್ಪತ್ತಿ. ಜೋಡಿಸುವುದು, ಹೊಂದಿಸುವುದು, ಕೂಡಿಸುವುದು, ಒಂದಾಗಿಸುವುದು, ಸೂಕ್ತವಾದುದು, ಯುಕ್ತವಾದುದು ಮುಂತಾದ ಅರ್ಥಗಳವೆ.

ಏನನ್ನು ಜೋಡಿಸುವುದು ಎಂದಾಗ ಮನಸ್ಸು ಮತ್ತು ಶರೀರವನ್ನು ಜೋಡಿಸಬೇಕು. ಬುದ್ಧಿ ಮತ್ತು ಭಾವನೆಯನ್ನು ಜೋಡಿಸಬೇಕು. ಹಾಗೂ ಜೀವಾತ್ಮ ಮತ್ತು ಪರಮಾತ್ಮನನ್ನು ಜೋಡಿಸಬೇಕು.

ಪತಂಜಲಿ ಮಹರ್ಷಿ ತನ್ನ ಪಾತಂಜಲ ಯೋಗ ಸೂತ್ರದಲ್ಲಿ ಹೇಳುತ್ತಾನೆ. **'ಯೋಗಶ್ಚಿತ್ತವೃತ್ತಿನಿರೋಧಃ'**

ಮನಸ್ಸಿನಲ್ಲಿ ಏಳುವ ಅಲೆಗಳ ನಿರೋಧವೇ ಯೋಗ. ಚಿತ್ತಚಾಂಚಲ್ಯದಿಂದ ವೃತ್ತಿಗಳ ವೇಗ ಹೆಚ್ಚುತ್ತದೆ. ದುಃಖ, ಮನಸ್ಸು ಸ್ಥಿರವಾಗಿ ನಿಂತರೆ ಅದೇ ಸುಖ ನಿರಾಯಾಸವಾಗಿ ಮನಸ್ಸನ್ನು ಸ್ಥಿರಗೊಳಿಸುವ ಕೌಶಲ್ಯವೇ ಯೋಗ. ಯೋಗವಾಸಿಷ್ಠದಲ್ಲಿ ವಸಿಷ್ಠ ಮಹರ್ಷಿರವರು– 'ಮನಃ ಪ್ರಶಮನೋಪಾಯಃ ಯೋಗ ಇತ್ಯಭಿಧೀಯತೇ' ಮನಸ್ಸನ್ನು ಪ್ರಶಾಂತಗೊಳಿಸುವ ಕ್ರಮಬದ್ಧ ಉಪಾಯವೇ ಯೋಗ. ಭಗವದ್ಗೀತೆಯಲ್ಲಿ– **'ಸಮತ್ವಂ ಯೋಗ ಉಚ್ಯತೇ'** ಸಮಸ್ಥಿತಿಯನ್ನು ಸಾಧಿಸುವುದೇ ಯೋಗ.

ಜಯ–ಅಪಜಯ, ಸುಖ–ದುಃಖ, ಮೌನ–ಅಪಮಾನ, ರಾಗ–ದ್ವೇಷ, ಇಚ್ಛೆ–ಅನಿಚ್ಛೆ ಮುತಾದ ದ್ವಂದ್ವ ಭಾವದಲ್ಲೂ ಸಮಚಿತ್ತತೆಯನ್ನು ಸಾಧಿಸುವುದೇ ಯೋಗ.

**'ಯೋಗಃ ಕರ್ಮಸು ಕೌಶಲಮ್'**

**ಕಾರ್ಯಕುಶಲತೆಯೇ ಯೋಗ**

**'ತಾಂ ಯೋಗ ಮಿತಿ ಮನ್ಯಂತೇ ಸ್ಥಿರಾಮಿಂದ್ರಿಧಾರಣಾಮ್'**

ಇಂದ್ರಿಯಗಳ ಸ್ಥಿರತೆ ಸಾಧಿಸಿ ಸಮಾಧಿ ಸ್ಥಿತಿಯಲ್ಲಿ ಇರುವುದೇ ಯೋಗ. ಶಾರೀರಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಸ್ತರಗಳೆಲ್ಲದರಲ್ಲೂ ವ್ಯಕ್ತಿಯು ಪರಿಪೂರ್ಣವಾಗಿ ವಿಕಸನಗೊಳ್ಳುವ ಪ್ರಕ್ರಿಯೆಯೇ ಯೋಗವೆನ್ನುತ್ತಾರೆ ಅರವಿಂದರು.

ತನ್ನ ಸಂಪೂರ್ಣ ವಿಕಾಸವು ಒಂದು ಜನ್ಮದಲ್ಲಿ ಅಥವೇ ಕೆಲವೇ ತಿಂಗಳಲ್ಲಿ ಕೆಲವೇ ಘಂಟೆಗಳಲ್ಲಿಯೂ ಮಾನವನು ಸಾಧಿಸಬಹುದಾದ ಸಾಧನವೇ ಯೋಗ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು.

ಯೋಗವೆಂಬುದು ಶರೀರವನ್ನು ಬಗ್ಗಿಸುವುದಲ್ಲ, ಕೇವಲ ವ್ಯಾಯಾಮ ಮಾಡುವುದೇ ಯೋಗಾಭ್ಯಾಸವಲ್ಲ, ಮನಸ್ಸನ್ನು ಬಗ್ಗಿಸುವುದು, ಮನಸ್ಸು ಚಂಚಲಗೊಳ್ಳದೇ ಸ್ಥಿರವಾಗಿದ್ದರೆ ಅದಕ್ಕಿಂತ ಮಿಗಿಲಾದದ್ದು ಏನು ಬೇಕಾಗಿಲ್ಲ. ಮನಸ್ಸು ಮರ್ಕಟದಂತೆ ಇದಕ್ಕಿಂತ ವೇಗವಾಗಿ ಚಲಿಸುವ ವಸ್ತು ಮತ್ತೊಂದು ಯಾವುದಿಲ್ಲ.

ನದಿಯು ಏಕಮುಖವಾಗಿ ಹರಿದರೆ ಸಮಾಜಕ್ಕೆ ಸಿಗುವ ಅನುಕೂಲ ಅತ್ಯಾಧಿಕ. ಆದರೆ ಉಭಯ ಮುಖವಾಗಿ ಹಲವಾರು ದಿಕ್ಕುಗಳಲ್ಲಿ ಹುಚ್ಚೆದ್ದು ಹರಿದಾಗ ಸಮಾಜಕ್ಕೆ ಕಂಟಕಪ್ರಾಯವಾಗುತ್ತದೆ. ಅದೇ ರೀತಿ ನಮ್ಮ ಮನಸ್ಸು ಒಂದೇ ದಿಕ್ಕಿನಲ್ಲಿ ಹೋದರೆ ಆತ್ಮ ಸಾಕ್ಷಾತ್ಕಾರವಾಗುತ್ತದೆ. ಹಲವಾರು ದಿಕ್ಕುಗಳಲ್ಲಿ ಹೋದರೆ ಮನಸ್ಸು ಅಲ್ಲೋಲಕಲ್ಲೋಲವಾಗಿ ಹೋಗಿ ತನ್ನನ್ನು ಚಿಂತೆಯಿಂದ ಚಿತೆಗೆ ಕರೆದುಕೊಂಡು ಹೋಗುತ್ತದೆ. ಚಿಂತೆ ಮಾಡಲು ಒಂದೇ ಮಾರ್ಗ ಅದರೆ ಚಿಂತನೆ ಮಾಡಲು ಅನೇಕ ಮಾರ್ಗಗಳಿವೆ. ಆದ್ದರಿಂದ ಚಿಂತೆಯನ್ನು ಬಿಟ್ಟು ಚಿಂತನೆ(ಯೋಜನೆ) ಮಾಡುವುದು ಯೋಗದ ಉದ್ದೇಶವಾಗಿದೆ.

**"ಮನಃ ಏವ ಮನುಷ್ಯಾಣಾಂ ಕಾರಣಬಂಧಮೋಕ್ಷಯೋಃ"** ದುಃಖಮೂಲದಿಂದ ದೂರ ಇರುವುದೇ, ಮನಸ್ಸಿನ ತರಂಗಗಳನ್ನು ಪ್ರಶಮನಗೊಳಿಸುವುದೇ, ಬುದ್ಧಿ, ಮನಸ್ಸು, ಹಾಗೂ ಭಾವನೆಗಳ ಒಂದು ಸಂಯಮವೇ ಹಾಗೂ ಸಮನ್ವಯವೇ ಯೋಗ ಎನ್ನುತ್ತಾರೆ.

ಶರೀರ ಮತ್ತು ಮನಸ್ಸು ಎಂದರೇನು?

ಈ ಶರೀರವೆಂದರೆ ಜೀವವಿರುವ ವಸ್ತು, ಜೀವವೆಂದರೆ ಪ್ರಾಣ, ಶರೀರದಲ್ಲಿ ಪ್ರಾಣವಿದ್ದರೆ ಅದು ಜೀವ. ಇಲ್ಲದಿದ್ದರೆ ಅದು ಶವ. ಈ ಪ್ರಾಣವಿರುವಂತಹ ಶರೀರವು ಈ ಭೂಮಿಯಲ್ಲಿ ಎಷ್ಟಿದೆ.

ಈ ಜೀವ-ಜಗತ್ತಿನಲ್ಲಿ ಕೂಡಿರುತ್ತಾನೆ.

ಈ ಜಗತ್ತು ಪಂಚಭೂತಗಳಿಂದ ಕೂಡಿದೆ.

ಪ್ರಪಂಚದಲ್ಲಿರುವಂತಹ ಜೀವಿಗಳು ಸಹ ಪಂಚಭೂತಗಳಿಂದಾಗಿದೆ.

**ಪಂಚಭೂತಗಳು ಜಗತ್ತು ಜೀವಿ**

| | |
|---|---|
| ಅ. ಭೂಮಿ | ಅ. ಶರೀರ(ಮೂಳೆ ಮತ್ತು ಮಾಂಸ) |
| ಆ. ನೀರು | ಆ. ರಕ್ತ |
| ಇ. ಅಗ್ನಿ | ಇ. ಜಠರ |
| ಈ. ವಾಯು | ಈ. ಮೂಗು (ಉಸಿರಾಟ)ಗಾಳಿ |
| ಉ. ಆಕಾಶ | ಉ. ನರಮಂಡಲ |

ಜಗತ್ತಿನಲ್ಲಿರುವ ಎಲ್ಲ ವಸ್ತುಗಳಲ್ಲು ನಾವಿದ್ದೇವೆ. ನಮ್ಮೊಳಗಿರುವ ಎಲ್ಲಾವು ಜಗತ್ತಿನಲ್ಲಿದೆ. ಆಗಾಗಿ ಜೀವಿ-ಜಗತ್ತು ಆಗಿದ್ದರೆ ಈ ಜೀವಿಯಲ್ಲಿದೆ. ಪಂಚಭೂತಗಳಿಂದ ಆಗಿರುವಂತದ್ದು. ಈ ಪಂಚಭೂತಗಳಿಂದ ಆಗಿರುವ ಈ ಶರೀರವನ್ನು ಮನಸ್ಸಿನ ಜೊತೆ ಜೋಡಿಸುವುದು.

ಶರೀರದಲ್ಲೆ ಇರುವ ಮನಸ್ಸನ್ನು ನಾವು ನಿಯಂತ್ರಿಸಬೇಕಾದರೆ ಇಂದ್ರಿಯಗಳನ್ನು ನಿಗ್ರಹಿಸಬೇಕು. ಇಂದ್ರಿಯಗಳಿಂದ ನಿಗ್ರಹಿಸಿ ಅವುಗಳನ್ನು ಹತೋಟಿಗೆ ತರುವಂತೆ ಮಾಡಿ ನಂತರ ಇಂದ್ರಿಯಗಳಿಂದ ಮನಸ್ಸನ್ನು ನಿಗ್ರಹಿಸಬೇಕು. ಆಗ ಮನಸ್ಸಿನ

ಅರಿವು ನಮಗೆ ಉಂಟಾಗುತ್ತದೆ. ಮನಸ್ಸನ್ನು ಶರೀರದಲ್ಲಿ ಕೇಂದ್ರೀಕರಿಸಬೇಕು. ಶರೀರ ಮತ್ತು ಮನಸ್ಸು ಒಂದೇ ರೀತಿಯ ಆಲೋಚನೆಯಲ್ಲಿ ಇರುವುದಕ್ಕೆ ಅನುಕೂಲವಾಗುತ್ತದೆ.

ಇಂದ್ರಿಯಗಳು ೧೦ ಅವುಗಳೆಂದರೆ,

| ಪಂಚಜ್ಞಾನೇಂದ್ರಿಯಗಳು | ಪಂಚಕರ್ಮೇಂದ್ರಿಯಗಳು |
|---|---|
| ಅ. ಕಣ್ಣು | ಅ. ಕಾಲು |
| ಆ. ಕಿವಿ | ಆ. ಕೈ |
| ಇ. ಮೂಗು | ಇ. ಬಾಯಿ |
| ಈ. ನಾಲಿಗೆ | ಈ. ಗುದ |
| ಉ. ಚರ್ಮ | ಉ. ಗುಹ್ಮ |

೧೦ ಇಂದ್ರಿಯಗಳನ್ನು ಒಳಗೊಂಡಿರುವುದೇ ಶರೀರ ಈ ಇಂದ್ರಿಯಗಳನ್ನು ಮನಸ್ಸಿನೊಂದಿಗೆ ಜೋಡಿಸುವುದು ಯೋಗ.

ಇಲ್ಲಿ ದಶ–ಇಂದ್ರಿಯವು ಶರೀರವೆಂಬ ರಥವಾಗಿ– ದಶರಥ ಈ ದಶ ಇಂದ್ರಿಯಗಳನ್ನು ಶರೀರವೆಂಬ ರಥದಲ್ಲಿ ಕೂರಿಸಿಕೊಂಡು ರಥವು ಅಂತರಮುಖವಾಗಿ (ಒಳಮುಖವಾಗಿ) ಹರಿದಾಗ ಒಳಗಿರುವ ಆತ್ಮ ರಾಮನಾಗುತ್ತಾನೆ. ಅದಕ್ಕೆ ಆತ್ಮರಾಮ ಎನ್ನುತ್ತಾರೆ. ಅಂದರೆ ದಶರಥನ ಮಗ ಶ್ರೀರಾಮ ಚಂದ್ರನಿಗೆ ನಾವು ಈ ಹತ್ತು ಇಂದ್ರಿಯಗಳನ್ನು ಮನಸ್ಸಿನ ಜೊತೆ ಜೋಡಿಸಿ ಯೋಗ ಮಾರ್ಗದಲ್ಲಿ ನಡೆದರೆ ರಾಮ ನಮ್ಮಲ್ಲೇ ಇರುತ್ತಾನೆ. ಅಕಸ್ಮಾತ್ ಈ ಇಂದ್ರಿಯಗಳನ್ನು ಅವುಗಳ ಇಷ್ಟಕ್ಕೆ ತಕ್ಕಂತೆ ಬಿಟ್ಟು ಬಿಟ್ಟರೆ ದಶಕಾತ ರಾವಣನಾಗುತ್ತದೆ. ಈ ಜೀವವು

ಅಂದರೆ, ಪ್ರೀತಿ, ಪ್ರೇಮ, ಸ್ನೇಹ, ವಾತ್ಸಲ್ಯ, ಮಮತೆ, ಮಮಕಾರ, ಸಹನೆ, ಸಹಬಾಳ್ವೆಯಿಂದ, ಕೂಡಿದ ಮನಸ್ಸು ರಾವಣನಂತೆ ಇರುತ್ತದೆ ಎಂಬುದು ಯೋಗವು ತಿಳಿಸುತ್ತದೆ.

ಅದೇ ರೀತಿಯಾಗಿ ಈ ಶರೀರ ಮನಸ್ಸನ್ನು ಜೋಡಿಸಿದ ರೀತಿಯಲ್ಲಿಯೇ ನಾವು ನಮ್ಮ ಜೀವಾತ್ಮ ಮತ್ತು ಪರಮಾತ್ಮನನ್ನು ಜೋಡಿಸುವುದು ಹೇಗೆಂದು ನೋಡೋಣ. ಈ ಇಂದ್ರಿಯಗಳು ಮನಸ್ಸು ಆತ್ಮ ಇವುಗಳಿಂದ ಕೂಡಿರುವುದೇ ಜೀವಾತ್ಮ.

ಯೋಗಶಾಸ್ತ್ರವೆಂಬುದರ ಬಗ್ಗೆ ತಿಳಿದುಕೊಳ್ಳೋಣ.

ಶಾಸ್ತ್ರವೆಂದರೆ– ಕ್ರಮಬದ್ಧವಾದ ಅಧ್ಯಯನ ಖ಼ಜ.ಥಿ.ಣಙಚಿಣಖಿ .ಣಙಜಥಿ ಔ ಇಟಿಠಿಟಙಜಜ

ಖ಼ಜ .ಥಿ.ಣಙಚಿಣಖಿ .ಣಙಜಥಿ ಔ ಥಿಠಚಿ ಎ ಛಿಚಿಟಟಙಜ ಥಿಠಚಿ ಖ಼ಚಿಣಡಿಚಿ. ಯೋಗಶಾಸ್ತ್ರವೆಂಬುದು ಒಂದು 'ದರ್ಶನಶಾಸ್ತ್ರ'

ಮಾನವರಿಗೆ ಶಾಶ್ವತಾನಂದವನ್ನು ಹೊಂದಲು ಬೇಕಾಗಿರುವ ವಿಚಾರವನ್ನು ವಿಸ್ತಾರವಾಗಿ ಚರ್ಚೆಮಾಡುವ ಶಾಸ್ತ್ರ ಗಂಥಗಳಿಗೆ ದರ್ಶನಗಳು ಎಂದು ಹೆಸರು.

ದರ್ಶನವೆಂದರೆ, ನೋಟ,ವಿಚಾರ, ವಿವೇಕ, ವಿಮರ್ಶೆ, ತರ್ಕ, ವಾದ–ವಿವಾದಗಳು ಎಂದರ್ಥ. "ದೃಶಿರ್–ಪ್ರೇಕ್ಷಣೇ" ಎಂಬ ಧಾತುವಿನಿಂದ ಹುಟ್ಟಿರುವ ಪದ ನಂತರ ದೃಶ್ಯತೇ ಅನೇನ ಇತಿ ದರ್ಶನಮ್; ದರ್ಶಯತಿ ಇತಿ ಚ ದರ್ಶನಮ್, ಮಾನವರಿಗೆ ಸತ್ಯ(ಪ್ರತ್ಯಕ್ಷ) ಸಾಕ್ಷಾತ್ಕಾರವನ್ನು ಮಾಡಿಸುವ ವೇದ ಪ್ರಾಮಾಣ್ಯ ವಿಚಾರ ಪ್ರಧಾನವಾದ ಶಾಸ್ತ್ರಗಳಿಗೆ ದರ್ಶನ ಎನ್ನುತ್ತಾರೆ.

ಕ್ರಿ.ಪೂ. ೫ ರಿಂದ ೮ ಶತಮಾನದ ಅವಧಿಯಲ್ಲಿ ಈ ದರ್ಶನೋದಯವಾಗಿದೆ ಎಂದು ತಿಳಿದಿದೆ. ಈ ದರ್ಶನಗಳನ್ನು ಆಸ್ತಿಕ ದರ್ಶನ ಮತ್ತು ನಾಸ್ತಿಕ ದರ್ಶನವೆಂದು ವಿಂಗಡಿಸಬಹುದು. "ಆಸ್ತಿ ಇತಿವಾದಿನಃ ಆಸ್ತಿಕಾಃ", "ನಾಸ್ತಿ ಇತಿವದಂತಃ ನಾಸ್ತಿಕಾಃ" ಇದೆ ಎನ್ನುವರು ಆಸ್ತಿಕರು ಇಲ್ಲ ಎನ್ನುವವರು ನಾಸ್ತಿಕರು. ವೇದ ಪ್ರಾಮಾಣ್ಯವನ್ನು ಒಪ್ಪುವವರು ಆಸ್ತಿಕರು ಒಪ್ಪದಿರುವವರು ನಾಸ್ತಿಕರು. ಭಾರತೀಯ ಸಂಸ್ಕೃತಿಯಲ್ಲಿ ವೇದ ಪ್ರಾಮಾಣ್ಯಕ್ಕೆ ಉಚ್ಯತಮಸ್ಥಾನವು ಇರುತ್ತದೆ. ಲೋಕಾಂತರ ಜನ್ಮಾಂತರಗಳಿಗೆ, ಧರ್ಮಾಧರ್ಮಗಳಿಗೆ ಈಶ್ವರಾಸ್ತಿತ್ವಕ್ಕೆ ಕರ್ಮ ಸಿದ್ಧಾಂತಕ್ಕೆ ಮೋಕ್ಷ ಸ್ವರೂಪ ನಿರ್ಣಯಕ್ಕೆ ವೇದಗಳೇ ಪ್ರಧಾನ ಪ್ರಮಾಣಗಳಲ್ಲವೇ? ಆಸ್ತಿಕ ದರ್ಶನಗಳು ವೇದಪ್ರಾಮಾಣ್ಯವನ್ನು ಒಪ್ಪುತ್ತವೆ. ಈ ಆಸ್ತಿಕ ದರ್ಶನಗಳನ್ನು ಪ್ರಧಾನವಾಗಿ ೬ ಎಂದು ಪರಿಗಣಿಸಿ ಅವುಗಳನ್ನು ಎರಡರಂತೆ ಕೂಡಿಸಿ ಮೂರರಲ್ಲೇ ಅಡಕ ಮಾಡಿರುತ್ತಾರೆ. ಇವುಗಳನ್ನು ಷಡ್ದರ್ಶನಗಳ ಎನ್ನುವರು.

ಅ. ಸಾಂಖ್ಯ ದರ್ಶನ– ಕಾಪಿಲ

ಆ. ಯೋಗ ದರ್ಶನ– ಪತಂತಜಲಿ

ಇ. ನ್ಯಾಯ ದರ್ಶನ– ಗೌತಮೀ

ಈ. ವೈಶೇಷಿಕ ದರ್ಶ್ನಾ – ಕ್ಣಾದ

ಉ. ಪೂರ್ವಮೀಮಾಂಸಾ– ಜೈಮುನಿ

ಊ. ವೇದಾಂತ ದರ್ಶನ– ಬಾದರಾಯಣ

ಇವುಗಳಲ್ಲಿ ಮೊದಲಿಗೆ ಯೋಗದರ್ಶನ ಬಗ್ಗೆ ತಿಳಿದುಕೊಳ್ಳೋಣ.

ಪತಂಜಲಿಗಿಂತ ಮುನ್ನ ಈ ಶಾಸ್ತ್ರವನ್ನು ಅನೇಕರು ಪರಿಚಯಿಸಿದ್ದಾರೆ. ಆದರೆ, ಪತಂಜಲಿಯವರು ಕ್ರಿ.ಶ. ೨ನೇ ಶತಮಾನದಲ್ಲಿ ಇದ್ದರು. ೧೯೬ ಸೂತ್ರಗಳನ್ನು ತಿಳಿಸಿದ್ದಾರೆ. ಬೇರೆಯವರ ಗ್ರಂಥಗಳು ನಮಗೆ ಲಭ್ಯವಾಗಲಿಲ್ಲ. ತ್ರಿಸಂಧಿಯಲ್ಲಿ ರೇವಣ್ಣ ಸಿದ್ಧೇಶ್ವರ ಅಗಸ್ತ್ಯರಿಗೆ ಅಷ್ಟಾಂಗ ಯೋಗ ಬೋಧನೆ ಮಾಡಿದ್ದರು ಎಂಬುದು (ಆ೫ ಕಾಗದ ಪ್ರತಿ – ಆಥಿ೮–೧–೨೭ ಮೂರು ಸಾವಿರ ಮಠ ಹುಬ್ಬಳ್ಳಿಯಲ್ಲಿ ಲಭ್ಯ) ತಿಳಿಯುತ್ತೆ.

**ಪತಂಜಲಿ :–** ಪತ–ಬೀಳುವುದು, ಅಂಜಲಿ–ಬೊಗಸೆ, ತಾಯಿ–ಗೋಣಿಕಾ ಮಾತೆ, ತಪಸ್ವಿನಿ, ಪತಿ–ಪತ್ನಿಯರ ಸಲ್ಲಾಪದಲ್ಲಿ ಕೇವಲ ಲೌಕಿಕ ಮಾತುಗಳೇ ಅಲ್ಲ ಭಾವಬಂಧನವನ್ನು ಬಿಡಿಸುವ ಆಧ್ಯಾತ್ಮ ವಿಚಾರಗಳು ಬರುತ್ತವೆ. ಯೋಗಾಧ್ಯಕ್ಷನಾದ ಶಿವನನ್ನು ಪಾರ್ವತಿಯು ವಿವಾಹದ ನಂತರದಲ್ಲಿ ನನಗೂ ಕೂಡ ಯೋಗವನ್ನು ತಿಳಿಸಬೇಕೆಂದು ಕೇಳಿದಾಗ ಒಂದು ಸಮಯವನ್ನು ನಿಗಧಿಸಿ ಯಾರು ಇಲ್ಲದಂತ ಸ್ಥಳದಲ್ಲಿ ಬೋಧನೆ ಮಾಡಲು ನದಿ ತೀರಕ್ಕೆ ಬಂದು ಬೋಧನೆ ಮಾಡುತ್ತಾನೆ. ಇದರಲಿ ತಲ್ಲೀನಳಾದ ಪಾರ್ವತಿ ನಿದ್ರೆ ಹೋಗುತ್ತಾಳೆ. ಪಕ್ಕದಲ್ಲಿದ್ದ ಮತ್ಸವು ಅವಳಂತೆ ಅನುಕರಣೆ ಮಾಡುತ್ತಾ ಶಿವನ ಬೋಧನೆಯನ್ನು ಕೇಳಿಸಿಕೊಳ್ಳುತ್ತದೆ. ಶಿವನಿಗೆ ಅನುಕರಣೆ ಕೇಳಿ ಅನುಮಾನದಿಂದ ಕಣ್ಣನ್ನು ತೆರೆದು ನೋಡಿದಾಗ ನೀರಿನ ಪಕ್ಕದಲ್ಲಿ ಮತ್ಸವು ತಕ್ಷಣ ನೀನು ಭೂಮಿಯಲ್ಲೇ ಆದಿಶೇಷನಾಗಿ ಹುಟ್ಟುವೆಂಬ ಶಪ/ಹಲವಾರು ಅಭಿಪ್ರಾಯದಂತೆ ಇದು ನೀನು ತಿಳಿದುಕೊಂಡ ಒಳ್ಳೆಯ ವಿಚಾರವನ್ನು ಭೂಲೋಕದಲ್ಲಿ ತಿಳಿಸು ಎಂದು ವರಾನ್ನು ಕೊಟ್ಟ ಎಂಬ ಅಭಿಪ್ರಾಯ.

ಒಂದು ದಿನ ಗೋಣಿಕಾ ಸಾಧ್ವಿಯೊಬ್ಬಳು ಎಂದಿನಂತೆ ಸೂರ್ಯಾಪಾಸನೆಗೆ ಹೋಗುವಾಗ ಒಬ್ಬ ತಪಸ್ವಿಯು ಅವಳ ಸೌಂದರ್ಯಕ್ಕೆ ಮಾರುಹೋಗಿ ನಿನಗೆ ಏನು ವರಬೇಕು ಕೇಳು ಕೊಡುವೆ ಎಂದಾಗ ಸಾಧ್ವಿ ತಿರಸ್ಕರಿಸಿ ಹೊರಟಾಗ ನಿನಗೆ ಮಹಾನ್ ತೇಜಸ್ವಿಯಾದ ಪುತ್ರ ಜನಿಸಲಿ ಎಂದನು. ನದಿಯ ನೀರಲ್ಲಿಳಿದು ಭಗಂತನಿಗೆ ಪ್ರಾರ್ಥನೆ ಸಲ್ಲಿಸುವಾಗ ಆಕೆಯ

ಅಂಜಲಿಗಳಲ್ಲಿ ಹಸುಗೂಸೊಂದು (ಅರ್ಧಶರೀರ ಮನುಷ್ಯ +೧/೨ ಹಾವಿನ ರೂಪದ್ದಲಿತ್ತು) ಬಿದ್ದಿತ್ತು'. ಮಹಾ ತೇಜಸ್ವಿಯೂ ಭಗವಾನ್ ಆದಿಶೇಷನ ರೂಪದಿಂದಲೂ ಇದ್ದ ಆ ಕೂಸನ್ನು ಕಂಡು ಗೋಣಿಕಾ ವಿಸ್ಮಿತಳಾದಳು. 'ಬೊಗಸೆ'ಗೆ (ಅಂಜಲಿ) 'ಬಿದ್ದವನು' (ಪತ್) ಆದ್ದರಿಂದ ಆತನಿಗೆ ಪತಂಜಲಿ ಎಂದೇ ಹೆಸರಾಯಿತು.

ಈ ಆದಿಶೇಷನ ಸ್ವರೂಪನಾದ ಪತಂಜಲಿಯು ಅಖಂಡ ಬ್ರಹ್ಮಚರ್ಯ ವ್ರತವನ್ನು ಪಾಲಿಸಿದನು. ಶರೀರದ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವ ವಿಧಾನವನ್ನು ತಿಳಿಸಲು ವೈದ್ಯಶಾಸ್ತ್ರವನ್ನು ಮಾನಸಿಕ ನೈರ್ಮಲ್ಯವನ್ನು ತಿಳಿಸಲು ಯೋಗಶಾಸ್ತ್ರವನ್ನು ವಾಕ್‌ಶುದ್ಧಿಯನ್ನು ತಿಳಿಸುವ ವ್ಯಾಕರಣ ಗ್ರಂಥವನ್ನು ರಚಿಸಿದನು. ಈ ವಿದ್ಯೆಯನ್ನು ತನ್ನ ಶಿಷ್ಯ ಪರಂಪರೆಗೂ ಕಲಿಸಿಕೊಟ್ಟನು.

ಮಹಾತೇಜಸ್ವಿಯಾಗಿದ್ದನು, ಈತನ ತೇಜಸ್ಸನ್ನು ಎದುರು ನಿಂತು ನೋಡವ ಶಕ್ತಿಯು ಯಾರಿಗೂ ಇರಲಿಲ್ಲವಂತೆ ಹಾಗಾಗಿ ಈತನು ತೆರೆಯ ಹಿಂದೆ ಕುಳಿತು ಶಿಷ್ಯರಿಗೆ ಬೋಧನೆ ಮಾಡುತ್ತಿದ್ದನಂತೆ ಗುರುಕುಲದಲ್ಲಿ ಆಹಾರ ಸಂಗ್ರಹಕ್ಕೆ ಕೆಲವು ಶಿಷ್ಯರು ಹೋದರಂತೆ, ಒಮ್ಮೆ ಪತಂಜಲಿಯು ತನ್ನ ಕೆಲವು ಶಿಷ್ಯರಿಗೆ ಬೋಧನೆ ಮಾಡುತ್ತಿದ್ದಾಗ, ಒಬ್ಬ ತುಂಟ ಶಿಷ್ಯ ಉದ್ಧಟತನದಿಂದಲೋ ಏನೋ ಆ ತೆರೆಯನ್ನು ಸರಿಸಿಬಿಟ್ಟನಂತೆ, ತಕ್ಷಣಕ್ಕೆ ಆಸಮಯದಲ್ಲಿದ್ದವರು ಸುಟ್ಟು ಭಸ್ಮವಾಗಿ ಬಿಟ್ಟರಂತೆ ಮುಂದೆ ಆಹಾರ ಸಂಗ್ರಹಕ್ಕೆ ಹೋಗಿದ್ದ ಶಿಷ್ಯರು ನೋಡಿ ಆಶ್ಚರ್ಯವಾದಾಗ ಗುರುಗಳ ಆಜ್ಞೆ ಮೇರೆಗೆ ಪತಂಜಲಿಯ ಯೋಗ ವಿದ್ಯೆಯನ್ನು ಪ್ರಚಾರ ಮಾಡಿರುವ ವಿಚಾರವೇ ಇನ್ನು ಮುಂದೆ ತಿಳಿಯಲಿದ್ದೇವೆ.

ಉಪನಿಷತ್ತಿನಲ್ಲಿ ಜೀವ –ಪರಮಾತ್ಮರ ಅವಿನಾಭಾವ ಸಂಬಂಧವನ್ನು ತಿಳಿಸುವ ಪ್ರಯತ್ನ ನಡೆಯುತ್ತದೆ. ಆದರೆ ಇಂದ್ರಿಯ ಶರೀರವು ಸಾಧನೆಗೆ ಮೂಲವಾಗಿರುವುದರಿಂದ ಇಂದ್ರಿಯ ನಿಗ್ರಹಕ್ಕೆ ವಿಚಾರ ಮಂಥನ ನಡೆಯುತ್ತದೆ. ಶರೀರವೇ ರಥ, ಆತ್ಮವೇ ಇದರಲ್ಲಿ ಕುಳಿತರಥಿಕ, ಬುದ್ಧಿಯೇ ರಥದ ಸಾರಥಿ ಹೇಳಿ ಮನಸ್ಸನ್ನು ನಿಗ್ರಹಿಸಬೇಕಾದರೆ ಔಚಿತ್ಯವನ್ನು ಹೇಳಲಾಗಿದೆ. ಕಠ, ಶ್ವೇತಾಶ್ವರತರ, ಶಿಶುಬ್ರಾಹ್ಮಣ ಮುಂತಾದವುಗಳಲ್ಲಿ ತಿಳಿಯಲಿದ್ದೇವೆ.

| ಒಂದನೇ ಲೋಕ (ಪಂಚಪ್ರಾಣಗಳು) | ಎರಡನೇ ಲೋಕ (ಪಂಚಕೋಶ) | ಮೂರನೇ ಲೋಕ (ಪಂಚಜ್ಞಾನೆಂದ್ರಿಯ) |
|---|---|---|
| ೧. ಉದಾನ | ೧. ಅನ್ನಮಯಕೋಶ | ೧. ನೇತ್ರ– ಕಣ್ಣು – ವಸ್ತುಗಳು |
| ೨. ಪ್ರಾಣ | ೨. ಪ್ರಾಣಮಯಕೋಶ | ೨. ನಾಸಿಕ–ಮೂಗು – ವಸ್ತುವಿನ ಸ್ಥಿತಿ |
| ೩. ವ್ಯಾನ | ೩. ಮನೋಮಯಕೋಶ | ೩. ವಾಕ್–ನಾಲಗೆ – ಮನಸ್ಸಿನ ಮೇಲೆ ಪರಿಣಾಮ |
| ೪. ಅಪಾನ | ೪. ವಿಜ್ಞಾನಮಯಕೋಶ | ೪. ಶ್ರವಣ–ಕಿವಿ – ವಸ್ತುವಿನಲ್ಲಿ ಅಡಗಿದ ತತ್ವ |
| ೫. ಸಮಾನ | ೫. ಆನಂದಮಯಕೋಶ | ೫. ಸ್ಪರ್ಶ–ತ್ವಚೆ – ಶ್ರದ್ಧೆಯಿಂದ ಅರ್ಪಿಸುವ ಗುರಿ |

**ಯೋಗದಲ್ಲಿ ನಾಲ್ಕು ಮಾರ್ಗಗಳಿವೆ– ಅವುಗಳು**

ಅ. ಕರ್ಮಯೋಗ– ಕರ್ಮಯೋಗವು ಯೋಗದ ಮುಖ್ಯ ಅಂಗವಾಗಿದೆ.

ಆ. ಭಕ್ತಿಯೋಗ, ಇ. ಜ್ಞಾನಯೋಗ, ಈ. ರಾಜಯೋಗ,

**ಕರ್ಮಯೋಗ:** ಕೆಲಸವೇ ಕರ್ಮ, ಉದಾ: ಅಜೀತ್ ಕುಮಾರ್‌ರವರು ಬಸವಣ್ಣ.

**ಭಕ್ತಿಯೋಗ–** ಶ್ರದ್ಧೆಯ ಕೆಲಸವೇ ಭಕ್ತಿ, ಉದಾ: ರಮಣ ಮಹರ್ಷಿ, ಅಕ್ಕಮಹಾದೇವಿ.

**ಜ್ಞಾನಯೋಗ–** ಭಕ್ತಿಯ ಅನುಭವವೇ ಜ್ಞಾನ, ಉದಾ: ಸ್ವಾಮಿವಿವೇಕಾನಂದರು.

**ರಾಜಯೋಗ–** (ಜ್ಞಾನದ ಅರಿವೇ ಅನುಭವವೇ) ಅಷ್ಟಾಂಗ ಯೋಗ.

ಅ–ಅಕ್ಷರ ಜ್ಞಾನದಲ್ಲಿ, ನು–ನುರಿತು, ಭ–ಭಗವಂತನ ಸಂಗಡ, ವ–ವರ್ತಮಾನ ಕಾಲವನ್ನು ವರ್ತಮಾನವಾಗಿಟ್ಟು ವರ್ತಿಸುವುದೇ ಅನುಭವ.

**ತ್ರಿಲೋಕ ಜ್ಞಾನವೆಂದರೇನು?**

ಮೂರು ಲೋಕ ಜಗತ್ತಿನ ವಿವರವನ್ನು ಅರಿಯುವ ವಿಷಯವೇ ತ್ರಿಲೋಕಜ್ಞಾನ. ನಮ್ಮ ದೇಹದಲ್ಲಿಯೇ ದೇವರು ಮೂರು ಲೋಕವನ್ನು ಸೃಷ್ಟಿಸುತ್ತಾನೆ.

ಅವುಗಳ ಬಗ್ಗೆ ಅರಿಯುವ ವಿಷಯವೇ ತ್ರಿಲೋಕ ಜ್ಞಾನ,

| **ಒಂದನೇ ಲೋಕ (ಪಂಚಪ್ರಾಣಗಳು)** | **ಎರಡನೇ ಲೋಕ (ಪಂಚಕೋಶ)** | **ಮೂರನೇ ಲೋಕ (ಪಂಚಜ್ಞಾನೆಂದ್ರಿಯ)** |
|---|---|---|
| ೧. ಉದಾನ | ೧. ಅನ್ನಮಯಕೋಶ | ೧. ನೇತ್ರ– ಕಣ್ಣು – ವಸ್ತುಗಳು |
| ೨. ಪ್ರಾಣ | ೨. ಪ್ರಾಣಮಯಕೋಶ | ೨. ನಾಸಿಕ–ಮೂಗು – ವಸ್ತುವಿನ ಸ್ಥಿತಿ |
| ೩. ವ್ಯಾನ | ೩. ಮನೋಮಯಕೋಶ | ೩. ವಾಕ್–ನಾಲಗೆ – ಮನಸ್ಸಿನ ಮೇಲೆ ಪರಿಣಾಮ |
| ೪. ಅಪಾನ | ೪. ವಿಜ್ಞಾನಮಯಕೋಶ | ೪. ಶ್ರವಣ–ಕಿವಿ – ವಸ್ತುವಿನಲ್ಲಿ ಅಡಗಿದ ತತ್ವ |
| ೫. ಸಮಾನ | ೫. ಆನಂದಮಯಕೋಶ | ೫. ಸ್ಪರ್ಶ–ತ್ವಚೆ – ಶ್ರದ್ಧೆಯಿಂದ ಅರ್ಪಿಸುವ ಗುರಿ |

೧೯೬ ಸೂತ್ರಗಳನ್ನು ಒಳಗೊಂಡಿರುವ 'ಪಾತಂಜಲ ಯೋಗಸೂತ್ರ'ವು ನಾಲ್ಕು ಪಾದಗಳಾಗಿ ವಿಭಜಿಸಲ್ಪಟ್ಟಿದೆ. ಸಮಾಧಿ ಪಾದ, ಸಾಧನ ಪಾದ, ಕೈವಲ್ಯ ಪಾದ, ಮತ್ತು ವಿಭೂತಿ ಪಾದ ಎಂದು ಅವುಗಳನ್ನು ಹೆಸರಿಸಲಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಯೋಗ ಸಾಧನೆಯಲ್ಲಿ ತೊಡಗಲು ಅನುಕೂಲವಾಗುವಂಥ ಎಂಟು ಅಂಗಗಳನ್ನು ಪತಂಜಲಿ ಸೂಚಿಸಿದ್ದಾನೆ. ಈ ಎಂಟು ಅಂಗಗಳ ಮೂಲಕ ಯೋಗವನ್ನು ಸಾಧಿಸುವ ಮಾರ್ಗಕ್ಕೆ ಅಷ್ಟಾಂಗ ಯೋಗ ಎಂದು ಹೆಸರು. ಅಷ್ಟಾಂಗ ಯೋಗದ ಎಂಟು ಅಂಗಗಳು ಹೀಗಿವೆ:

ಯಮ : ನಿಷೇಧಗಳು (ಮಾಡಬಾರದ್ದು)

ನಿಯಮ : ವಿಧಿಗಳು (ಮಾಡಬೇಕಾದ್ದು)

ಆಸನ : ಶಾರೀರಿಕ ಭಂಗಿಗಳು (ಅಂಗವಿನ್ಯಾಸ)

ಪ್ರಾಣಾಯಾಮ : ನಿಗ್ರಹ ಶಕ್ತಿ (ಇಂದ್ರಿಯಗಳ ಸಂಯಮ)

ಪ್ರತ್ಯಾಹಾರ : ನಿಗ್ರಹ ಶಕ್ತಿ (ಇಂದ್ರಿಯಗಳ ಸಂಯಮ)

ಧಾರಣಾ : ಏಕಾಗ್ರತೆ (ಮನಸ್ಸಿನ ಕೇಂದ್ರೀಕರಣಂ

ಧ್ಯಾನ : ವಿಕೇಂದ್ರೀಕರಣ (ವೈಶಾಲ್ಯ)

ಸಮಾಧಿ : ಐಕ್ಯತೆ (ಅತಿಮಾನಸ ಪ್ರಜ್ಞೆ)

ಯಮ ಮತ್ತು ನಿಯಮ ಯೋಗಿಯ ಕಾಮ ಮತ್ತು ಉದ್ದೇಶಗಳನ್ನು ನಿಗ್ರಹಿಸಿ ಸಮಾಜದಲ್ಲಿನ ಇತರರೊಡನೆಗೆ ಸಮರಸವಾಗಿರುವಂತೆ ಮಾಡುತ್ತದೆ. ಆಸನ ದೇಹವನ್ನು ಆರೋಗ್ಯಕರವಾಗಿ ಮತ್ತು ಬಲತರವಾಗಿ ಇರಿಸಿ ಪ್ರಕೃತಿಯೊಡನೆ ಸಮರಸವಾಗಿರುವಂತೆ ಮಾಡುತ್ತದೆ. ಈ ಮೊದಲ ಮೂರು ಹಂತಗಳು ಬಹಿರಂಗ ಸಾಧನೆಗಳು. ಪ್ರಾಣಾಯಾಮ ಮತ್ತು ಪ್ರತ್ಯಾಹಾರ ಉಸಿರಾಟವನ್ನು ಕ್ರಮಗೊಳಿಸಿ ಮನಸ್ಸಿನ ಹತೋಟಿ ಕೊಡುತ್ತದೆ.

ಇದು ವಿಷಯೇಂದ್ರಿಯಗಳಿಂದ ಇಂದ್ರಿಯಗಳನ್ನು ಮುಕ್ತಗೊಳಿಸುತ್ತದೆ. ಇವೆರಡೂ ಅಂತರಂಗ ಸಾಧನೆಯ ಅಂಗಗಳು. ಧಾರಣ, ಧ್ಯಾನ, ಸಮಾಧಿ ಇವು ಆತ್ಮನ ಅಂತರಂಗದೊಳಕೆ ಕೊಂಡೊಯ್ಯುತ್ತವೆ. ಈ ಹಂತಗಳು ಅಂತರಾತ್ಮ ಸಾಧನಗಳೆಂದು ಕರೆಯಲ್ಪಟ್ಟಿವೆ. ಸಮಾಧಿ ಅಷ್ಟಾಂಗ ಯೋಗದ ಕೊನೆಯ ಘಟ್ಟ. **'ತದಾ ದ್ರಷ್ಟುಃ ಸ್ವರೂಪವೇ ಅವಸ್ಥಾನಮ್'** ಎಂಬ ಮೂರನೆಯ ಸೂತ್ರದಲ್ಲಿ ಹೇಳಿದಂತೆ ಆಗ ನಾವು ಮೂಲ 'ಸ್ವರೂಪ ಸ್ಥಿತಿಯನ್ನೇ' ತಲುಪುತ್ತೇವೆ. ಇದೇ ಕೈವಲ್ಯ.

ಇಚ್ಛಾಶಕ್ತಿ ಅಥವಾ ಸಂಕಲ್ಪ ಶಕ್ತಿಯನ್ನು ಬಳಸಿ ಮನಸ್ಸಿನ (ಇಂದ್ರಿಯಗಳ ಚಕ್ರವರ್ತಿ) ಮೇಲೆ ಪ್ರಭುತ್ವ ಸಾಧಿಸುವುದೇ ಯೋಗ. ಚಿತ್ತ ಚಾಂಚಲ್ಯವನ್ನು ನಿರೋಧಿಸಿ ಸ್ಥಿರತೆ ಸಾಧಿಸುವುದು ಮತ್ತು ಮನಸ್ಸನ್ನು ಪ್ರಶಾಂತಗೊಳಿಸುವುದು ಯೋಗ ಮಾರ್ಗದ ಉದ್ದೇಶವಾಗಿದೆ.

**ಉಪಸಂಹಾರ**

ಯೋಗ ಮತ್ತು ಆರೋಗ್ಯ ಇವೆರಡರ ಪರಸ್ಪರ ಸಂಬಂಧ ಗಾಢವಾದದ್ದು. ಆರೋಗ್ಯದ ಸಂರಕ್ಷಣೆ ಹಾಗೂ ಸಂವರ್ಧನೆಯಲ್ಲಿ ಯೋಗದ್ದು ಮಹತ್ವದ ಪಾತ್ರ. ಆರೋಗ್ಯ ಮತ್ತು ಯೋಗ ಇವೆರಡನ್ನೂ ಅರ್ಥೈಯಿಸಿಕೊಂಡರೆ ಇವುಗಳ ನಡುವೆ ಸೇತುವೆ ನಿರ್ಮಿಸುವುದು ಸುಲಭ ಸಾಧ್ಯ. ಅಂದರೆ ಅನಾರೋಗ್ಯದಿಂದ ಉದ್ಭವಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಯೋಗವನ್ನು ಹೇಗೆ ಅನ್ವಯಿಸಿಕೊಳ್ಳಬಹುದು ಎನ್ನುವುದನ್ನು ಅರಿಯುವುದು, ಅರಿತದ್ದನ್ನು ಅನುಷ್ಠಾನಕ್ಕೆ ತರುವುದು ಎರಡೂ ಸುಲಭ. ಯೋಗವು ವ್ಯಕ್ತಿಯ ಬಾಹ್ಯ ಆರೋಗ್ಯಕ್ಕೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ಆಂತರಿಕ ಆರೋಗ್ಯಕ್ಕೂ ನೀಡುತ್ತದೆ.

ಆರೋಗ್ಯ ಸುಖದ ಮೂಲವಾದರೆ ಅನಾರೋಗ್ಯ ದುಃಖದ ಮೂಲ. ದುಃಖ ಜಗತ್ತಿನಲ್ಲಿ ಯಾರಿಗೆ ತಾನೆ ಬೇಕು? ಎಲ್ಲರೂ ಬಯಸುವುದು ಸುಖವನ್ನೇ. ಆರೋಗ್ಯ ಹದಗೆಟ್ಟರೆ ವ್ಯಕ್ತಿ ದುಃಖದ ಮಡುವಿನಲ್ಲಿ ಬಿದ್ದಂತೆ. ಹೀಗೆ ಬಿದ್ದವನು ಅಲ್ಲಿಂದ ಎದ್ದು ಬರಲು ಪ್ರಯತ್ನಪಡುತ್ತಾನೆ. ಈ ಪ್ರಯತ್ನದ ಮಾರ್ಗವೇ ಯೋಗವಾಗಿದೆ.

ಚಿಕಿತ್ಸೆಯನ್ನು ಅನೇಕ ಪದ್ಧತಿಗಳಲ್ಲಿ ಯಾವುದೊಂದೂ ಕಾಯಿಲೆಯೇ ಬಾರದಂತೆ ನೋಡಿಕೊಳ್ಳುವ ಚಿಕಿತ್ಸಾ ಪದ್ಧತಿಯನ್ನು ವಿವರಿಸಲಾಗಿಲ್ಲ. ಆದರೆ ಯೋಗ ಚಿಕಿತ್ಸೆಗೆ ಮೂರು ಆಯಾಮಗಳಿವೆ. ಒಂದು ಕಾಯಿಲೆಯೇ ಬಾರದಂತೆ ನೋಡಿಕೊಳ್ಳುವುದು. ಎರಡನೆಯದು ಬಂದ ಕಾಯಿಲೆಯನ್ನು ಗುಣಪಡಿಸುವುದು ಮತ್ತು ಸಮೃದ್ಧ ಆರೋಗ್ಯವನ್ನು ಒದಗಿಸುವುದು, ಹೀಗೆ ಮೂರು ಮಗ್ಗಲುಗಳಲ್ಲು ಉಳ್ಳ ಚಿಕಿತ್ಸಾಪದ್ಧತಿ ಬೇರಾವುದೇ ಇರಲಿಕ್ಕಿಲ್ಲ.

ಯೋಗವನ್ನು ಕೇವಲ ಚಿಕಿತ್ಸೆ ಎಂದು ಪರಿಗಣಿಸುವಂತಿಲ್ಲ. ಆರೋಗ್ಯವನ್ನು ಸಮೃದ್ಧಗೊಳಿಸುವುದರಿಂದಾಗಿ ಯೋಗ ಆರೋಗ್ಯದ ವರ್ಧಕ, ರೋಗವನ್ನು ಗುಣಪಡಿಸುತ್ತದೆಯಾದ್ದರಿಂದ ಯೋಗ ಒಂದು ಚಿಕಿತ್ಸೆ, ರೋಗವು ಬಾರದಂತೆ ನಿಗಾವಹಿಸುತ್ತದೆ. ಆದ್ದರಿಂದ ರೋಗ ನಿರೋಧಕವಾಗಿದೆ.

ಆರೋಗ್ಯ ಮತ್ತು ಯೋಗ ಇವೆರಡರ ಪರಸ್ಪರ ಸಂಬಂಧ ಗಾಢವಾದಾದ್ದು. ಆರೋಗ್ಯ ಸಂರಕ್ಷಣೆ ಹಾಗೂ ಸಂವರ್ಧನೆಯಲ್ಲಿ ಯೋಗದ್ದು ಮಹತ್ವದ ಪಾತ್ರ. ಆರೋಗ್ಯ ಮತ್ತು ಯೋಗ ಇವೆರಡನ್ನೂ ಅರ್ಥೈಸಿಕೊಂಡರೆ ಇವುಗಳ ನಡುವೆ ಸೇತುವೆ ನಿರ್ಮಿಸುವುದು ಸುಲಭ ಸಾಧ್ಯ. ಅಂದರೆ ಅನಾರೋಗ್ಯದಿಂದ ಉದ್ಭವಿಸುವ ಸಮಸ್ಯೆಗಳ ಪರಿಹಾರಕ್ಕಗಿ ಯೋಗವನ್ನು ಹೇಗೆ ಅನ್ವಯಿಸಿಕೊಳ್ಳಬಹುದು ಎನ್ನುವುದನ್ನು ಅರಿಯುವುದು, ಅರಿತದ್ದನ್ನು ಅನುಷ್ಠಾನಕ್ಕೆ ತರುವುದೂ ಯೋಗ ಮಾರ್ಗದ ಉದ್ದೇಶವಾಗಿದೆ.

**ಆಧಾರ ಗ್ರಂಥಸೂಚಿ**

೧. ಉಪನಿಷತ್‌ಭಾವಧಾರೆ – ಸೋಮನಾಥಾನಂದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೨೦೦೫.

೨. ಉಪನಿಷತ್ತುಗಳ ಸಂದೇಶ – ಸ್ವಾಮಿರಂಗನಾಥಾನಂದ, ಅನುವಾದಕರು ಪ್ರಭುಶಂಕರ್, ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೪.

೩. ಉಪನಿಷತ್ತುಗಳ ಪರಿಚಯ – ಸ್ವಾಮಿ ಹರ್ಷಾನಂದ, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು, ೨೦೦೦.

೪. ಋಗ್ವೇದ ಸಂಹಿತಾ – ಸಾಯಣ ಭಾಷ್ಯ ಸಮೇತ, ಶ್ರೀಜಯಚಾಮರಾಜೇಂದ್ರ ಗ್ರಂಥಮಾಲಾ. ಶ್ರೀರಂಗಪಟ್ಟಣ, ೨೦೦೯.

೫. ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗ – ಶ್ರೀ ಶ್ರೀ ಯೋಗಿಶಿವಾನಂದ ಪರಮಹಂಸ, ೨೦೦೫

೬. ಪಾತಂಜಲ ಯೋಗದರ್ಶನ – ವ್ಯಾಸಭಾಷ್ಯ ಸಹಿತ ಸ್ವಾಮೀ ಆದಿದೇವಾನಂದ: ಶ್ರೀ ರಾಮಕೃಷ್ಣ ಆಶ್ರಮ ಮೈಸೂರು, ೧೯೯೮.

೭. ಪ್ರಾಣಾಯಾಮ ಇದರ ತತ್ವಗಳು ಮತ್ತು ಅಭ್ಯಾಸ – ಸ್ವಾಮಿ ರಾಮದೇವ, ದಿವ್ಯ ಪ್ರಕಾಶನ, ಹರಿದ್ವಾರ.

೮. ಯೋಗ ಪ್ರವೇಶ – ಅಜೀತ್‌ಕುಮಾರ್, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೦೧.

೯. ಯೋಗ ಪ್ರದೀಪ – ಪಂ॥ ಸುಧಾಕರ ಚತುರ್ವೇದೀ, ವೈದಿಕ ಸಾಹಿತ್ಯ ಪ್ರಕಾಶನ ಸಮಿತಿ ಕುಂಜಿಬೆಟ್ಟು, ಉಡುಪಿ, ದ.ಕ., ೧೯೮೨.

೧೦. ಃ.ಏ.ಖ ಖಥಿಚಿಟಿಡಿಚಿಡಿ ಐಡಿಚಿ – ಆಊಚಿಟು ಖುಥ, ಖಚಿಊಚಿ ಒಡಿಚಿಬುಚಿರಿಚಿ ೦ ಆಡಿಟಿಚಿರ ಇಚಿಜಚಿಜುಚಿಥಿ ಐಡಿಜಡಿ–೨೦೦೧.

೧೧. ಇಟಿಛಿಥಿಛಿಟಡಿಚಿಚಿ ಡಿಚಿ ಥಿಡಿಚಿ – ಆಡಿ. ಖಚಿಟ ಏಣಚಿಡಿ ಖಚಿರಿ, ಛುಡಿಚಿಚಿಟಿಚಿ ರಿಡಿಜ ಗಿಚಿಡಿಚಿಟಿಚು

೧೨. ಉುಚಿಚಿಟಿಜಚಿ ಖಚಿಟುಚಿ – ಉಥಿಚಿಟ ರಿಡಿಚುಟಿಡಿ ಉಡಿ ಛುಡಿಚಿಚಿಟಿಚಿ ರಿಡಿಜ ಗಿಚಿಡಿಚಿಟಿಚು

೧೩. ಊಚಿಣುಚಿ ಖಚಿಣಟಿಚಿತಚಿಟು ಔಜಿ ಖಡಿಟಿಚಿಚಿ ಖಚಿಣಣಚಿ ಒಚುಚಿಥಿಡಿಜಡಿಚಿ ಇಜಾಡಿ ಗಿಚಿಇಣಚಿ ಖಚಿಜಥಿ, ಏಚಿಚಿಟಥಿಚಿಜುಚಿಟಿಚಿ–೧೯೮೨.

೧೪. ಊಚಿಣುಚಿ ಥಿಡಿಚಿ ರಿಡಿಚಿಜಿಚಿ ಛಿಡಿಚಿಣಡಿಥಿ ಛಿ ಖಿಚಿಟ ಒಣಣು ಛಿಚುಚಿಟಿಚಿಟಿಜಚಿ, ಥಿಡಿಚಿ ರಿಣಚಿಟಿಚಿಣಚಿ ಣಡಿಣಾ, ಖಚಿಡಿ, ಖಟಿಜಚಿ– ೨೦೦೮.

# ೭. ಭಾರತೀಯ ಕರ್ಮಸಿದ್ಧಾಂತದ ತತ್ತ್ವಮೀಮಾಂಸೆ

ಋಷಿದೇವ್ ಭಾರ್ಗವ್ ಎನ್.

ಸಹಾಯಕ ಪ್ರಾಧ್ಯಾಪಕಃ ಕರ್ನಾಟಕ ಸಂ. ವಿ.ವಿ.

ಚಾಮರಾಜಪೇಟೆ ಬೆಂಗಳೂರು.

"ಗಹನಾ ಕರ್ಮಣೋ ಗತಿಃ" ಈ ಗೀತೋಕ್ತಿಯ ಅನುವಾಗಿ ಕರ್ಮತತ್ತ್ವವು ಅತಿಗಹನವಾಗಿರುವ ತತ್ತ್ವವಾಗಿದೆ ಎಂಬುದನ್ನು ಮನಗಾಣಬಹುದು. ಕರ್ಮದ ಸಿದ್ಧಾಂತವು ಎಲ್ಲಾ ಪುರಾತನ ಧರ್ಮಗಳಲ್ಲಿಯೂ ಪ್ರತಿಪಾದಿತವಾದ ಒಂದು ಸಾಮಾನ್ಯ ತತ್ತ್ವಸಾರ ಇದಾಗಿದೆ. ಸಾಮಾನ್ಯ ವ್ಯವಹಾರದ ಸಮಯದಲ್ಲಿ ಬಳಸಲ್ಪಡುವ ಕರ್ಮಶಬ್ದವು, ಶಾಸ್ತ್ರೀಯ ಕರ್ಮತತ್ತ್ವದ ಸ್ಥೂಲರೂಪವೇ ಆಗಿದೆ. ಪಂಡಿತರಿಂದ ಪಾಮರರವರೆಗೂ ಈ ಕರ್ಮದ ಪ್ರಯೋಗವನ್ನು ತಮ್ಮ ದಿನನಿತ್ಯದ ವ್ಯವಹಾರದಲ್ಲಿ ಬಳಸುವುದನ್ನು ನಾವು ಕಾಣುತ್ತೇವೆ.

ಉದಾಹರಣೆಗೆ ಕಾಲ ಕಾಲಕ್ಕೆ ಸರಿಯಾಗಿ ಮಳೆ ಬಾರದಿದ್ದರೆ ಇಂದಿನ ಕಲಿಕಾಲದಲ್ಲಿ ಧರ್ಮ-ಕರ್ಮದ ಪಾಲನೆ ಇಲ್ಲದುದರ ಕಾರಣ ಬರ ಬಂದಿರುವುದಾಗಿ ಹೇಳುವುದನ್ನು ನಾವು ಸಾಮಾನ್ಯಜನರ ಬಳಕೆಯಲ್ಲಿ ಕಾಣುತ್ತೇವೆ. ಏಕೆಂದರೆ ಬರ ಅಥವಾ ಮಳೆಬಾರದಿರುವಿಕೆಗೆ ಯಾರೊಬ್ಬರ ಕರ್ಮದ ಕಾರಣವಿರಲಾರದು, ಅದು ಸಾಮಾಜಿಕ ಜೀವದಲ್ಲಿ ಮಾಡಲೇಬೇಕಾದ ಕೆಲ ಧಾರ್ಮಿಕ ಕಾರ್ಯಗಳು ಅಥವಾ ಪರೋಪಕಾರದ ಕೆಲಸಗಳು ಮಾಡಲಿಲ್ಲವಾದ್ದರಿಂದ ಸಕಲರಿಗೂ ಕಷ್ಟದಾಯಕವಾದ ದುರ್ಭಿಕ್ಷೆಯುಂಟಗಿದೆ ಎಂದರ್ಥ. ಈ ಮಾತುಗಳು ಬಹುಶಃ ಮಹಾಭಾರತದ ಕೆಲ ಪ್ರಸಂಗಗಳು ನಾಟಕರೂಪವಾಗಿಯೋ ಜಾನಪದ-ಯಕ್ಷಗಾನಾದಿಗಳ ಮುಖಾಂತರವೋ ಜನಮಾನಸದಲ್ಲಿ ಹಾಸಿಹೊಕ್ಕಾಗಿರುವುದು ನಾವು ಕಾಣುತ್ತೇವೆ.

ಆ ಮಹಾಭಾರತದ ಪ್ರಸಂಗ ಏನೆಂದರೆ ಅಜ್ಞಾತವಾಸದಲ್ಲಿದ್ದ ಪಾಂಡವರನ್ನುಹುಡುಕುವ ಪ್ರಸಂಗ, ಕಾಲದ ಮಿತಿಯಲ್ಲಿಯೇ ಅವರು ಏನಾದರೂ ಪ್ರಕಟವಾದರೆ ಪುನಃ ವನವಾಸದ ಶರತ್ತನ್ನು ವಿಧಿಸಬಹುದು ಮತ್ತು ಚಿರಕಾಲದವರೆಗೆ ಅವರನ್ನುಆಡಳತದಂದ ದೂರವಿರಿಸಬಹದು ಎಂಬುದು ಕೌರವರ ಲೆಕ್ಕಾಚಾರವಾಗಿರುತ್ತದೆ. ಆ ಸಂದರ್ಭವು ಪಾಂಡವರ ವಾಸಸ್ಥಾನವನ್ನು ತಿಳಿಯಲು ಕೌರವ ಪ್ರಮುಖನಾದ ದುರ್ಯೋಧದನು ಚಾರರ ಹಾಗೂ ತಮ್ಮ ಸ್ನೇಹಿತರ ಸಹಾಯದಿಂದ ಹುಡುಕಿ ನಿಷ್ಫಲರಾಗಿ ಹಿಂದಿರುವ ಪ್ರಸಂಗ ಕೌರವರ ರಾಜಸಭಯಲ್ಲಿ ನಡೆಯುತ್ತಿದ್ದು, ಅದೇ ಸಮಯದಲ್ಲಿ ಸಭೆಯಲ್ಲಿಯೇ ಉಪಸ್ಥಿತರಿದ್ದ ದೇವವ್ರತ ಭೀಷ್ಮರು ಹೀಗೆ ಹೇಳುವರು-"ಪಾಂಡವರು ಎಲ್ಲಿ ವಾಸವಿರುತ್ತಾರೋ ಅಲ್ಲಿ ಅತೃಷ್ಟಿ ಅನಾವಷ್ಟಿಯು ಇರುವುದಿಲ್ಲ. ಕಾಲಕಾಲಕಾಲಕ್ಕೆ ಮಳೆ ಬಾರುತ್ತಿರುತ್ತದೆ. ಇದರಿಂದ ಸಾಮಾನ್ಯಜನರು ಸಂತೋಷದಿಂದ ಇರುತ್ತಾರೆ ಅಂತಹ ರಾಜ್ಯವೆಂದರೆ ಅದು ವಿರಾಟ್ ನಗರ" . ಅನಂತರ ಅವರು

ವಿರಾಟ್ ನಗರದ ಮೇಲೆ ದಂಡೆತ್ತಿ ಹೋಗುವರು ಅವರ ಸಹಸ್ರಾರು ಹಸುಗಳನ್ನು ಅಪಹರಿಸಿ ಪಾಂಡವರನ್ನು ಪ್ರಕವಾಗುವ ಹಾಗೆ ಮಾಡುವುದು ಕೌರವರ ಅಂದಿನ ರಾಜತಂತ್ರವಾಗಿತ್ತು. ಹೀಗೆ ಮುಂದುವರೆದು ಮಹಾಭಾರತದ ಕುರುಕ್ಷೇತ್ರಯುದ್ಧಕ್ಕೂ ಈ ಪ್ರಸಂಗ ನಾಂದಿಯಾಗುತ್ತದೆ. ಅದೇನೇ ಇರಲಿ ಭೀಷ್ಮಪಿತಾಮಹರ ಮಹಾಭಾರತದ ಈ ಮಾತಿನ ಪ್ರಭಾವ ನಮ್ಮ ಜನರ ಮಾನಸದಲ್ಲಿ ಬಹುವಾಗಿ ಮತ್ತು ಆಳವಾಗಿ ಬೇರೂರರಬಹುದು. ಆದಕಾರಣ ಕರ್ಮದ ವ್ಯಾಪಕವಾದ ಪ್ರಭಾವ ಸಾಮೂಹಕವಾಗಿಯೂ ಆಗುವುದನ್ನು ನಾವು ಕಾಣುತ್ತವೆ.

ಕರ್ಮ ಮತ್ತು ಫಲಗಳು ಕಾರಣ ಮತ್ತು ಕಾರ್ಯಗಳು ಎಂಬಂತೆ ಎಂಬುದನ್ನು ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ. Any work, any action, any thought that produces an effect is called a Karma. Thus the law of Karma means the law of action, of inevitable cause and sequence. Whosesoever there is a cause, there an effect must be produced; this necessity cannot be resisted, and this law of karma, according to our philosophy, is true throughout the whole universe. Whatever we see, or feel or do whatever action there is anywhere in the universe. While being the effect of past work on the one hand, becomes on the other, a cause in its true, and produces its own effect. (Freedom chapter 7.page no 01)

ಕರ್ಮದ ಪ್ರಧಾನತೆ

ಕರ್ಮತ್ತ್ವದ ಮತ್ತು ಕರ್ಮಫಲಾದಿ ವಿಷಯಗಳ ಕೂಲಂಕಷವಾದ ದೃಷ್ಟಿಕೋಣವು ಜ್ಞಾನಕ್ಕೆ ಆಧಾರಭೂತವಾದ ಶ್ರುತಿ ಸ್ಮೃತಿಗಳಲ್ಲಿ ನಾವು ಹೇರಳವಾಗಿ ಕಾಣೂತ್ತೇವೆ. ಇಷ್ಟು ವಿಶದವಾದ ಕರ್ಮಸಿದ್ಧಾಂತದ ಪ್ರತಿಪಾದನೆಯು ಪ್ರಪಂಚದ ಬೇರಾವ ಭಾಷೆಯ ಸಾಹಿತ್ಯದಲ್ಲಿ ಕಂಡುಬರುವುದಿಲ್ಲ. ಹೀಗಾಗಿ ಕರ್ಮಸಿದ್ಧಾಂತವಾದದ ಮೂಲ ಭಾರತದ ಶಾಸ್ತ್ರಗ್ರಂಥಗಳು ಎಂಬುವುದರಲ್ಲಿ ಯಾವುದೇ ಸಂದೇಹವಿಲ್ಲ. ಈಶಾವಾಯ್ಸ್ಯೋಪನಿಷತ್ತಿನ ಒಂದು ಮಂತ್ರವು ಹೀಗೆ ಹೇಳುತ್ತದೆ.

ವಿದ್ಯಾಂ ಚ ಅವಿದ್ಯಾಂ ಚ ಯಸ್ತದ್ವೇದೋಭಯಂ ಸಹ ।

ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ ॥ ೧೧॥ ಈಶಾವಾಸ್ಯೋಪನಿಷದ್

ಈ ಪಂಡಿತ ಸುಧಾಕರ ಚತುರ್ವೇದಿಗಳು ಅರ್ಥೈಸಿದ್ದು ವಿದ್ಯೆ ಎಂದರೆ ಜ್ಞಾನ ಎಂಬುದಾಗಿಯೂ ಮತ್ತು ಅವಿದ್ಯೆ ಎಂದರೆ ಕರ್ಮ. ಕರ್ಮದಿಂದ ಮೃತ್ಯುವನ್ನೂ ಜ್ಞಾನದಿಂದ ಮೋಕ್ಷವನ್ನೂ ಪಡೆಯಬಹುದು ಎಂಬುದಾಗಿ ಇಲ್ಲಿ ಅವಿದ್ಯೆ ಎಂದರೆ ಕರ್ಮ. ಮೃತ್ಯುವನ್ನು ಗೆಲ್ಲಬೇಕಾದರೆ ಕರ್ಮವನ್ನು ಆಶ್ರಯಿಸಬೇಕು, ಎಂಬುದು ಇದರ ಸಾರ.

ಇದರ ಮುಂದುವರೆದ ಭಾಗವಾಗಿರುವ ಮಂತ್ರದಲ್ಲಿ ನಿಜವಾದ ಕರ್ಮದ ಸ್ಥಾನವನ್ನು ತೋರುವ

ದರ್ಪಣದಂತಿದೆ. ಕರ್ಮರಹಿತವಾದ ಜ್ಞಾನದ ವಿಷಯವಾಗಿ ಹೇಳಿರುವ ಈ ಮಂತ್ರವು ಕರ್ಮರಹಿತ ಜ್ಞಾನವು ಜ್ಞಾನರಹಿತ ಕರ್ಮಕ್ಕಿಂತಲೂ ಘೋರವಾದ ಅಂಧಕಾರಕ್ಕೆ ಕಾರಣವಾಗಿವುದನ್ನು ಇಲ್ಲಿ ಹೇಳಲಾಗಿದೆ–

ಅಂಧಂ ತಮಃ ಪ್ರ ವಿಶಂತಿ ಯೇ*ಸಂಭೂತಿಮುಪಾಸತೇ ।

ತತೋ ಭೂಯ ಇವ ತೇ ತಮೋ ಯ ಉ ಸಂಭೂತಾತ್ಮಂ ರತಾಃ ॥೧೨ ॥ ಈಶಾವಾಸ್ಯೋಪನಿಷದ್

ಹೀಗಾಗಿ ಕರ್ಮರಾಹಿತ್ಯಜ್ಞಾನವು ಜ್ಞಾನರಾಹಿತ್ಯಕರ್ಮಕಿಂತ ಘೋರ ಅಂಧತಮವಾದ ಕತ್ತಲಿನ ಲೋಕಕ್ಕೆ ಒಯ್ಯುತ್ತದೆ ಎನ್ನುತ್ತದೆ ಈ ಮಂತ್ರ. ಹೀಗಾಗಿ ಕರ್ಮವು ಅತ್ಯಾವಶ್ಯಕ. ಪರಮಾತ್ಮಪ್ರಾಪ್ತಿಯಲ್ಲಿ ತೊಡಗಿದವರು ತಮ್ಮ ಕರ್ತವ್ಯವನ್ನು ಬಿಡುವುದು ಸರಿಯಾದ ಮಾರ್ಗವಲ್ಲ ಎಂಬುದನ್ನು ನೋಡಿದಾಗ ಕರ್ಮದ ಮೂಲಕವೇ ಪರಮಪುರುಷಾರ್ಥವನ್ನು ಪಡೆಯುವುದು ನಿಜವಾದ ಮತ್ತು ಏಕೈಕ ಮಾರ್ಗ ಎಂಬುದು ವೇದಗಳು ಸಾರುತ್ತವೆ.

ಕರ್ಮದ ಮೂರು ಪ್ರಕಾರಗಳು

ಕರ್ಮದ ಮೂರು ಪ್ರಕಾರಗಳು ಸನಾತನ ದರ್ಮದಲ್ಲಿ ಕಾಣಬಹುದು.

೧. ಸಂಚಿತಕರ್ಮ- ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳನ್ನು ಸಂಚಿತಕರ್ಮ ಎನ್ನುತ್ತಾರೆ.

೨.ಪ್ರಾರಬ್ಧಕರ್ಮ- ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳ ಫಲವನ್ನು ಈ ಜನ್ಮದಲ್ಲಿ ಭೋಗಿಸುವುದನ್ನು ಪ್ರಾರಬ್ಧಕರ್ಮ ಎನ್ನುತ್ತಾರೆ.

೩.ಕ್ರಿಯಮಾಣಕರ್ಮ- ಯಾವುದೇ ವ್ಯಕ್ತಿಯ ದ್ವಾರಾ ವರ್ತಮಾನಕಾಲದಲ್ಲಿ ಮಾಡಲಾಗುತ್ತಿರುವ ಕರ್ಮವನ್ನು ಕ್ರಿಯಮಾಣಕರ್ಮ ಎನ್ನುತ್ತೇವೆ.

ಮನುವಿನ ಕರ್ಮಸಿದ್ಧಾಂತ (ಕ್ರಿಯಾವಲಂಬಿತವಾದ)

ಧರ್ಮಶಾಸ್ತ್ರಗಳ ಸಾಲಿನಲ್ಲಿ ಮನುಧರ್ಮಶಾಸ್ತ್ರವು ಸರ್ವಪ್ರಾಚೀನವಾಗಿದೆ. ಯಾಜ್ಞವಲ್ಕಪರಾಶರರು ಅನಂತರಕಾಲದವರು. ಭಾರತೀಯರಲ್ಲಿ ಕರ್ಮ ಎಂಬುದಕ್ಕೆ ಪರ್ಯಾಯವಾಗಿ ಧರ್ಮ, ಕರ್ತವ್ಯ, ಮಾಡಲುಯೋಗ್ಯವಾದ ಕೆಲಸ ಇತ್ಯಾದಿ ಅರ್ಥಗಳಲ್ಲಿಯೂ ಬಳಕೆಯಾಗಿರುವುದನ್ನು ನಾವು ಸಂಸ್ಕೃತ ಗ್ರಂಥಗಳಲ್ಲಿ ಹೇರಳವಾಗಿ ಕಾಣುತ್ತೇವೆ. ವೇದೋಕ್ತವಾದ ಕರ್ಮಗಳೇ ಪ್ರಥಮವಾಗಿ ನಾವು ಅನುಸರಿಸಬೇಕು. ವೇದನಿಷಿದ್ಧವಾದ ಕೆಲಸಗಳಿಂದ ನಾವು ಪರಿಣಾಮದಲ್ಲಿ ದುಃಖವನ್ನು ಅನುಭವಿಸುತ್ತೇವೆ. ಆದ್ದರಿಂದ ವೇದೋಕ್ತಕರ್ಮವನ್ನು ಬಿಟ್ಟು ಅನ್ಯಕಾರ್ಯಗಳಲ್ಲಿ ತೊಡಗಿದಲ್ಲಿ ಆತನನ್ನು ನಾಸ್ತಿಕ ಎಂಬುದಾಗಿ ತಿಳಿಯಲಾಗುತ್ತದೆ. ಇದನ್ನೇ ಮನುವು ತನ್ನ ಗ್ರಂಥದಲ್ಲಿ ಕರ್ಮದ ಉತ್ಪತ್ತಿ ಇತ್ಯಾದಿಗಳ ಬಗ್ಗೆ ಬಹಳ ವಿಷದವಾಗಿ ತಿಳಿಸಿದ್ದಾನೆ.

ವೇದೋಕ್ತಮಾಯುರ್ಮರ್ತ್ಯಾನಾಮಾಶಿಷಶ್ಚೈವ ಕರ್ಮಣಾಮ್ ।
ಫಲನ್ತ್ಯನುಯುಗಂ ಲೋಕೇ ಪ್ರಭಾವಶ್ಚಶರೀರಿಣಾಮ್ ॥ ಮನು.೧.೮೪

ವೇದೋಕ್ತವಾದ ಕರ್ಮಗಳು ಮನುಷ್ಯನ ಶ್ರೇಯಸ್ಸಿಗಾಗಿ ಅವನ ಈ ಕರ್ಮಗಗಳು ಅವನಿಗೆ ಮೋಕ್ಷದ ಅಧಿಕಾರಿಯನ್ನಾಗಿಸಲು ಸಮರ್ಥಾವಾಗುತ್ತವೆ. ಅದಕ್ಕಾಗಿ ವೇದೋಕ್ತ ಆಚಾರವನ್ನು ಪರಿಪಾಲನೆ ಮಾಡಬೇಕಾದುದು ವಿಪ್ರನ ಪರಮ ಕರ್ತವ್ಯವಾಗಿದೆ. ಆಚಾರವು ಶ್ರುತಿ ಮತ್ತು ಸ್ಮೃತಿ ಎರಡನ್ನೂ ಅವಲಂಬಿಸಿದೆ. ಆಚಾರದ ವಿಷಯವು ಪ್ರಥಮವಾಗಿ ಶ್ರುತಿ ಅನಂತರ ಸ್ಮೃತಿಗಳಲ್ಲಿ ಪ್ರತಿಪಾದಿತವಾಗಿವೆ. ಆದ್ದರಿಂದ ಶ್ರುತಿ ಮತ್ತು ಸ್ಮೃತಿಗಳಲ್ಲಿ ತಿಳಿಸಿದ ಹಾಗೆ ನಿತ್ಯವೂ ನಾವು ಧರ್ಮಾಚಾರಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು ಎಂಬುದು ಮನುವಿನ ಆದೇಶ.

ಆಚಾರಃ ಮರಮೋ ಧರ್ಮಃ ಶ್ರುತ್ಯುಕ್ತಃ ಸ್ಮಾರ್ತಾ ಏವ ಚ ।

ತಸ್ಮಾದಸ್ಮಿನ್ಸದಾ ಯುಕ್ತೋ ನಿತ್ಯಂ ಸ್ಯಾದಾತ್ಮವಾನ್ದ್ವಿಜಃ ॥ ೧೦೮

ಆಚಾರವು ಅಂದರೆ ಆ ಎಂಬ ನಿಪಾತಕ್ಕೆ ಆಸಮಂತಾತ್ (ಪರಿಪೂರ್ಣ) ಎಂದರ್ಥ. ಚಾರ ಎಂದರೆ ಕ್ರಿಯೆ ಆಚಾರ ಅಂದರೆ ಪರಿಪೂರ್ಣ ಮತ್ತು ಸರಿಯಾದ ಅಥವಾ ಶಾಸ್ತ್ರಸಮ್ಮತವಾದ ಕರ್ಮ, ಈ ಕರ್ಮವು ದ್ವಿಜನ ಉತ್ಥಾನಕ್ಕೆ ಕಾರಣೀಭೂತವಾದುವು ಆದ್ದರಿಂದ ಶಾಸ್ತ್ರಸಮ್ಮತವಾದ ಕರ್ಮವು ಏನೆಂಬುದನ್ನು ದ್ವಿಜನಾದವನು ಮೊದಲು ತಿಳಿದುಕೊಳ್ಳಬೇಕು. ಸುಮ್ಮನೆ ಮನಸಾ ಇಚ್ಚೆ ತೋಚಿದಂತೆ ಕರ್ಮಗಳನ್ನು ಮಾಡುತ್ತಾ ಹೋಗುವುದು ದೋಷಗಳಿಗೆ ಕಾರಣವಾಗಬಹುದು. ಮುಂದಿನ ಶ್ಲೋಕದಲ್ಲಿ ಮನುವು ಶಾಸ್ತ್ರಸಮ್ಮತವಲ್ಲದ ಆಚರಣೆಯನ್ನು ನಿಂದಿಸುತ್ತಾ ಹೀಗೆ ಹೇಳುತ್ತಾನೆ-

ಆಚಾರಾದ್ವಿಚ್ಯುತೋ ವಿಪ್ರೋ ನ ವೇದಫಲಮಶ್ನುತೇ

ಆಚಾರೇಣ ತು ಸಂಯುಕ್ತಃ ಸಂಪೂರ್ಣಫಲಭಾಗ್ಭವೇತ್ ॥ ೧೦೯

ಆಚಾರಚ್ಯುತನಾದ ದ್ವಿಜನು ವೇದದ ಯಾವುದೇ ಪ್ರಲವನ್ನು ಪಡೆಯುವುದಿಲ್ಲ, ಅಪಿತು ಶಸ್ತ್ರ ಸಮ್ಮತ ಆಚಾರದಿಂದ ವೇದಗಳ ಸಂಪೂರ್ಣ ಫಲವನ್ನು ನಿಶ್ಚಯವಾಗಿ ಪಡೆಯುವ ಅಧಿಕಾರಿಯಾಗುತ್ತಾನೆ. ಪಾಶ್ಚಾತ್ಯ ವಿಚಾರವಾದಿಗಳ ಮತದಲ್ಲಿ ಮನೋಗತವಾದ ಪರಿಶುದ್ಧತೆ ಇದ್ದರೆ ಸಾಕು ಎಂದಿರುವುದು ಭಾರತೀಯ ಕರ್ಮಫಲಸಿದ್ಧಾಂತವು ಮನುಷ್ಯನ ಕ್ರಿಯೆಯೇ ಮುಖ್ಯ ಎಂಬುದನ್ನು ನಾವು ಇಲ್ಲಿ ಪ್ರಮುಖವಾದ ಭೇದವನ್ನು ನಾವು ಇಲ್ಲಿ ತಿಳಿಯಬಹುದು. ಕರ್ಮಫಲವು ಕರ್ಮಾವಲಂಬಿತವಾದುದು ಭಾವನಾಲಂಬವಾಗಿರುವುದಲ್ಲ. ಉದಾಹರಣೆಗೆ ಅಹಿಂಸಾ ಭಾವನೆಯನ್ನು ಹೊಂದುತ್ತಾ ಪ್ರಾಣಿಯೊಂದರ ಹಿಂಸೆಮಾಡಿದರೆ ಕರ್ಮಫಲವು ಕರ್ಮಾವಲಂಬಿತವಾಗಿರುವುದೇ ವಿನಃ ಭಾವನಾತ್ಮಕವಾಗಿರುವುದಿಲ್ಲ, ಹೀಗಾಗಿ ಹಿಂಸೆಯ ಫಲವೇ ಸಿಗುತ್ತದೆ. ಎಂಬುದು ಇಲ್ಲಿ ಸಿದ್ಧಾಂತ.

ಮುಂದಿನ ಶ್ಲೋಕದಲ್ಲಿ ಜೀವಾತ್ಮನು ವಿವೇಕಯುಕ್ತನಾಗಿ ಈ ಪ್ರಪಂಚದಲ್ಲಿ ಕರ್ಮನಿರತನಾಗಬೇಕು. ಎಂಬುದನ್ನು ಮನುವು ಕೆಳಕಂಡಂತೆ ಹೇಳಿದ್ದಾನೆ.

ಕರ್ಮಣಾಂ ಚ ವಿವೇಕಾರ್ಥಂ ಧರ್ಮಾಧರ್ಮೌ ವ್ಯವೇಚಯತ್ ।

ದ್ವಂದ್ವೈರಯೋಚಯತಿಮಾಃ ಸುಖದುಃಖಾದಿಭಿಃ ಪ್ರಜಾಃ ॥ ಮನುಸ್ಮೃತಿ ೧.೨

ಜೀವಾತ್ಮನಿಗೆ ಸುಖದುಃಖಗಳು ಅವನ ಕರ್ಮಫಲದ ಕಾರಣದಿಂದ ಆದ್ದರಿಂದ ಇದನ್ನು ಸುಖದುಃಖ ಎಂಬ ದ್ವಂದ್ವಕ್ಕೆ ಕಾರಣವಾದುದು ಎಂಬುದಾಗಿಯೂ ಸತ್ಕರ್ಮವು ಸುಖಕ್ಕೆ ಮೂಲವಾದರೆ ದುಃಖಕ್ಕೆ ಮೂಲ ದುಷ್ಕರ್ಮವಾಗಿರುತ್ತದೆ. ಆದ್ದರಿಂದ ಜ್ಞಾನಿಯು ದ್ವಂದ್ವವನ್ನು ಜಯಿಸಲೇ ಬೇಕು.

ಜನ್ಮಾಂತರದಲ್ಲಿ ವಿವಿಧ ಯೋನಿಗಳ ಪ್ರವೇಶವನ್ನು ಆತ್ಮವು ತನ್ನ ತನ್ನ ಕರ್ಮಗಳಿಂದಲೇ ಪಡುಯುವ ವಿಷಯವನ್ನು ಮನು ಹೀಗೆ ಹೇಳಿದ್ದಾನೆ–

ಯಥಾಕರ್ಮ ಯಥಾಕಾಲಂ ಯಥಾಪ್ರಜ್ಞಂ ಯಥಾಶ್ರುತಮ್ ।

ಯಥಾಯುಗಂ ಯಥಾದೇಶಂ ಯಥಾವೃತ್ತಿಂ ಯಥಾಕ್ರಮಮ್ ॥ ಮನು.೧.೪೧

ಕರ್ಮತತ್ವವು ಸಂಪೂರ್ಣಭಾರತದ ವೈಚಾರಿಕ ಕ್ರಮದ ಸಾರವಾಗಿದೆ. ಅಂದರೆ ಯಾರಿಗೆ ಕರ್ಮತತ್ತ್ವದ ಕುರಿತು ನಂಬಿಕೆ ಇಲ್ಲವೋ ಅವನು ನಾಸ್ತಿಕ ಎಂಬುದಾಗಿಯೂ ನಮ್ಮ ಶಾಸ್ತ್ರಗಳು ಹೇಳುತ್ತವೆ. ಮನುಷ್ಯನಾದವನು ಅವನು ತನ್ನ ಕರ್ಮಕ್ಕನುಸಾರವಾಯೇ ವಿವಿಧ ದೇಹಗಳನ್ನು ಧಾರಣೆ ಮಾಡಿ ವಿವಿಧ ಯೋನಿಗಳಲ್ಲಿ ಜನ್ಮವನ್ನು ಪಡೆಯುತ್ತಾನೆ. ಈ ವಿಷಯವನ್ನು ಮನುವು ಈ ರೀತಿ ಪ್ರತಿಪಾದಿಸಿದ್ದಾನೆ.

ಕರ್ಮದ ಫಲವು ಕರ್ಮದ ತತ್ಕ್ಷಣವೇ ಜೀವಾತ್ಮನಿಗೆ ಲಭಿಸುವುದಿಲ್ಲ ಅಪಿ ತು ದೇಶಾಂತರದಲ್ಲಿ ಮತ್ತು ಕಾಲಾಂತರದಲ್ಲಿ ಪ್ರಾಪ್ತವಾಗುತ್ತವೆ. ಆದ್ದರಿಂದ ಕರ್ಮದ ಅನತಿಕಾಲದಲ್ಲಿಯೇ ಕರ್ಮದ ಫವನ್ನು ಜೀವಾತ್ಮನು ಅನುಭವಿಸುವುದಿಲ್ಲ. ಹಾಗೇನಾದರೂ ಆಗಿದ್ದರೆ ಇಂದೇ ಈಗಲೇ ಪ್ರಲಯವಾಗುತ್ತಿತ್ತೇನೋ? ಹೀಗಾಗಿ ಕರ್ಮದ ಫಲವನ್ನು ದೇಹಾಂತರಗಳಲ್ಲಿ ಯುಗಾಂತರಗಳಲ್ಲಿಯೂ ಕ್ರಮವಾಗಿ ಜೀವಾತ್ಮನು ಕರ್ಮದ ಫಲವನ್ನು ಅನುಭವಿಸಿತ್ತಾನೆ.

**ಕರ್ಮಸಿದ್ಧಾಂತ ಮತ್ತು ಪುನರ್ಜನ್ಮ**

ಕರ್ಮಸಿದ್ಧಂತದಲ್ಲಿ ಕರ್ಮದ ಫಲವು ಯಾವಾಗ ದೊರೆಯುತ್ತದೆ? ಎಂಬ ಪ್ರಶ್ನೆ ಬಹಳವಾಗಿ ಕೇಳಲ್ಪಡುವ ಪ್ರಶ್ನೆ ಮತ್ತು ಕಾಡುವ ವಿಚಾರ. ಪ್ರಪಂಚದಲ್ಲಿ ದುಷ್ಟರ ಪಾಲಿಗೆ ಯಾವಾಗಲೂ ಕೆಟ್ಟದಾಗುತ್ತದೆ ಎಂದು ಹೇಳುವ ಪ್ರಸಂಗವನ್ನು ನೋಡುವಾಗ ಅವರ ಪೂರ್ವ ಕರ್ಮದ ಫವನ್ನು ಭೋಗಿಸುತ್ತಾರೆ ಎಂದೆನಿಸುತ್ತದೆ. ಆದರೆ ಒಳ್ಳೆಯವ್ಯಕ್ತಿ ಎಂದು ಕೊಂಡವನಿಗೆ ಕೆಟ್ಟ ಅಥವಾ ಅವಾಂಛಿತ ಫಲ ದೊರೆತಾಗ ದೇವರ ಕರ್ಮಫಲದ ಸಿದ್ಧಾಂತವಾನ್ನು ತೆಗಳುವುದನ್ನೂ ನೋಡಿದ್ದೇವೆ. ಹಾಗಾದರೆ ಸತ್ಪುರುಷರೆನಿಸಿಕೊಂಡವರಿಗೆ ಏಕೆ ದುಃಖದಾಯಕ ಫಲಗಳು ಲಭಿಸುತ್ತವೆ? ಇದಕ್ಕೆ ಎರಡು ಉತ್ತರಗಳಿರಬಹುದು ಒಂದು– ದುಷ್ಟಜನರ ಸಂಸರ್ಗದಿಂದ ಅವರ ದುಷ್ಟಕರ್ಮಗಳ ಪ್ರಭಾವದಿಂದ ಅವರಿಗೆ ಕೆಟ್ಟ ಅನುಭವಗಳಾಗಿರಬಹುದು. ಎರಡನೆಯ ಸಂಭಾವನೆ ಅವರ ಪೂರ್ವಜನ್ಮದಲ್ಲಿನ ಕರ್ಮಗಳ ಫಲವನ್ನು ಭೋಗಿಸುತ್ತಿರಬಹುದು. ಎರಡೂ ಕಾರಣಗಳಲ್ಲಿ ಯಾವುದು ಸರಿಯಾದ ಕಾರಣ ಎಂಬುದು ತಿಳಿಯಲು ಸಾಧ್ಯವಿಲ್ಲ.

ವಿಶ್ವದ ಸೃಷ್ಟಿಯ ಉದ್ದೇಶ (ಕರ್ಮಫಲದಾನಕ್ಕಾಗಿ)

ಈ ವಿಶ್ವ ಸೃಷ್ಟಿಗೆ ಕರ್ಮಫಲದ ದಾನವೇ ಉದ್ದೇಶವಾಗಿದೆ ಎಂಬುದನ್ನು ಮನುವು ಹೇಳುತ್ತಾನೆ. ಹೀಗಾಗಿ ಭಾರತದ ಪುನರ್ಜನ್ಮ ಸಿದ್ಧಾಂತವೂ ಈ ವಿಚಾರಗಳ ಪ್ರತಿಪಾದನೆಗೆ ಪೂರಕವಾಗಿದೆ. ಪುನರ್ಜನ್ಮಾದಿಗಳು ಆತ್ಮನು

ತನ್ನ ಕರ್ಮದಿಂದ ಪಡೆದುಕೊಳ್ಳುತ್ತಾನೆ ಮತ್ತು ಪಾಪ ಮತ್ತು ಪುಣ್ಯವನ್ನು ಭೋಗಿಸಲು ಅನೇಕ ಜನ್ಮಗಳ ಯೋನಿಗೆ ಪ್ರಾಪ್ತನಾಗುತ್ತಾನೆ. ಹಾಗಾದರೆ ಪರಮಾತ್ಮನು ಜಗತ್ತಿನ ಸೃಷ್ಟಿಯನ್ನು ಈ ಕಾರಣದಿಂದಾಗೇ ಮಾಡಿದ್ದಾನೆಯೇ? ಎಂದರೆ ಔದು ಪರಮಾತ್ಮನು ಜೀವಿಗಳ ಫಲವನ್ನು ಕೊಡಲು ಈ ಪ್ರಪಂಚದ ಸೃಷ್ಟಿಮಾಡಿರಬಹುದು ಅನ್ನಿಸಿತ್ತದೆ. ಮನುವಿನ ಶ್ಲೋಕವೊಂದು ಇದನ್ನೇ ಹೇಳುತ್ತಿದೆ.

ಏವಮೆತೌರಿದಂ ಸರ್ವಂ ಮನ್ನಿಯೊಗಾನ್ಮಹಾತ್ಮಭಿಃ ।

ಯಥಾಕರ್ಮ ತಪೋಯೋಗಾತ್ ಸೃಷ್ಟಂ ಸ್ಥಾವರಜಂಗಮಮ್ ॥ಮನು. ೧.೪೨

ಪರಮಾತ್ಮನ ಈ ವಿಶ್ವದ ಸೃಷ್ಟಿಗೆ ಕರ್ಮದಾನವೇ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಯೇಷಾಂ ತು ಯಾದೃಶಂ ಕರ್ಮ ಭೂತಾನಾಮಿಹ ಕೀರ್ತಿತಮ್ ।

ತತ್ತಥಾ ವೋऽಭಿಧಾಸ್ಯಾಮಿ ಕ್ರಮಯೋಗಂ ಚ ಜನ್ಮನಿ ॥

ಪ್ರಸ್ತುತ ಶ್ಲೋಕವು ಪರಮಾತ್ಮಕರ್ತೃಕ ಪರಕವಾದಂತಹುದು ಎನ್ನ ಬಹುದು. ಕರ್ಮದ ಫಲವನ್ನು ನೀಡುವ ಸಂದರ್ಭದಲ್ಲಿ "ಅಭಿದಾಸ್ಯಾಮಿ' ' ಎಂದು ಪರಬ್ರಹ್ಮನೇ ವಿನಃ ಬೇರೆಲ್ಲರೂ ಕರ್ಮ ಬಂಧನದಲ್ಲಿ ತಮ್ಮನ್ನು ಬಂಧಿಸಿಕೊಂಡವರೇ ಆದುದರಿಂದ ಈ ಧ್ವನಿಯು ಪರಮಾತ್ಮ ಕರ್ತೃತ್ವದುದು ಎಂಬುದು.

ಮಹಾಭಾರತವು ಸಮಸ್ತ ಜ್ಞಾನಗಳಿಗೆ ಆಕರವಾಗಿದೆ. ಅಖಂಡ ಭಾರತವೇ ಮಹಾಭಾರತದಲ್ಲಿ ನೆಲೆಸಿದೆ. ಅತಃ ಅದರಲ್ಲಿಯ ಕರ್ಮಸಂಬಂಧಿತ ವಿಷಯಗಳು ಬಹಳ ಪ್ರಸ್ತುತವೆನಿಸುತ್ತವೆ.

ಮಹಾಭಾರತದಲ್ಲಿ ಕರ್ಮ ಸಿದ್ಧಾಂತ.

ಕರ್ಮಣಾಂ ಕೇ ಸಮಸ್ತಾನಾಂ ಶುಭಾನಾಂ ಭರತರ್ಷಭ ।

ಫಲಾನಿ ಮಹತಾಂ ಶರೇಷ್ಠ ಪರಬ್ರೂಹಿ ಪರಿಚ್ಛತಃ ॥

ಇಲ್ಲಿ ಕರ್ಮದ ಕುರಿತ ಜಿಜ್ಞಾಸೆಯು ಎದ್ದು ಕಾಣುತ್ತಿದೆ. ಯುಧಿಷ್ಠಿರನು ಭಿಷ್ಮಪಿತಾಮಹನಿಗೆ ಪ್ರಶ್ನಿಸುವ ಈ ಪರಿ ಕರ್ಮಸಿದ್ಧಾಂತವು ಎಷ್ಟು ಜಟಿಲ ಉಂಬುದನ್ನು ದರ್ಶಿಸುತ್ತದೆ. ಈ ಸಂದರ್ಭವು ಭೀಷ್ಮನ ಶರಶಯ್ಯೆಯ ಪ್ರಸಂಗವಾಗಿರುವುದು.

ಇದರ ಭಾವಾರ್ಥವು ಈ ರೀತಿಯಾಗಿದೆ ಹೇ ಭರತಶ್ರೆಷ್ಠನೇ ಸಮಸ್ತಶುಭಕರ್ಮ ಬಗ್ಗೆ ಮತ್ತು ಫಲಗಳ ಬಗೆಗೆ ನನಗೆ ಉಪದೇಶಿಸು ಎಂದು.

ರಹಸ್ಯಂ ಯದ್ ಋಷೀಣಾಂ ತು ತಚ್ಛೃಣುಷ್ವ ಯುಧಿಷ್ಠಿರ ।

ತೇನ ತೇನ ಶರೀರೇಣ ತತಸ್ತತಃ ಫಲಮುಪಾಶ್ನುತೇ ॥

ಹೇ ಯುಧಿಷ್ಠಿರ ಋಷಿಗಳಿಗೂ ಉಪನಿಶತ್ತುಗಳ (ರಹಸ್ಯವಿದ್ಯೆಗಳ) ರೀತಿಯಂತಿರುವ ಕರ್ಮಫಲಗಳ ಗುಢಜ್ಞಾನವನ್ನು ಕೇಳುವಂತವನಾಗು ಯಾವ ಕಾರಣಗಳಿಂದ ಜೀವಾತ್ಮನು ಫಲದ ರೂಪದಲ್ಲಿ ಯಥಾಕರ್ಮಕ್ಕೆ

ಶರೀರಗಳನ್ನು ಪಡೆಯುತ್ತಾನೆ ಎಂಬುದನ್ನು ಹೇಳುತ್ತೇನೆ ಕೇಳು. ಪ್ರಸ್ತುತ ಶ್ಲೋಕದಲ್ಲಿ ಕೌರವಪಿತಾಮಹನು ಕರ್ಮಫಲಗಳ ಸ್ವರೂಪವನ್ನು ಅತ್ಯಂತ ಗೂಢವಾದುದ ವಿಚಾರವನ್ನು ಹೇಳುತ್ತಿರುವನು.

ಭರತವರ್ಷದ ಸಾಂಸ್ಕೃತಿಕ ಮತ್ತು ವೈಚಾರಿಕಸಿದ್ಧಾಂತಗಳಿಗೆ ಕರ್ಮಸಿದ್ಧಾಂತವೇ ಪ್ರಧಾನವಾದುದು. ಎಲ್ಲಾ ಧಾರ್ಮಿಕ ಮತ್ತು ಸೈದ್ಧಾಂತಿಕ ಪ್ರಕ್ರಿಯೆಗಳಿಗೆ ಮತ್ತು ಕರ್ಮಸಿದ್ಧಾಂತವೇ ಆಧಾರವಾದುದು. ಮಹಾಭಾರತದ ಸಂಪೂರ್ಣಸಾರ ಕರ್ಮಸಿದ್ಧಾತವೇ ಪ್ರಧಾನವಾದ ಪ್ರತಿಪಾದ್ಯ ವಿಷಯವಾಗಿದೆ.

ಕರ್ಮದ ವ್ಯುತ್ಪತ್ತಿ ಮತ್ತು ಉತ್ಪತ್ತಿ.

ಕರ್ಮ ಎಂಬ ಶಬ್ದವು ಸಂಸ್ಕೃತದ ಡುಕೃಞ್ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಈ ಧಾತುವು ಕರಣೆ ಎಂದರೆ 'ಮಾಡುವುದು' ಎಂಬ ಕ್ರಿಯೆಯಾನ್ನು ಹೇಳುತ್ತದೆ. ಮನಿನ್ ಪ್ರತ್ಯಯದ ಜೊತೆ ಸಂಯೋಗವಾಗಿ ಕರ್ಮ ಎಂಬುದಾಗಿ ರೂಪ ವ್ಯಾಕರಣದ ವ್ಯುತ್ಪತ್ತಿಯಾಗಿರುತ್ತದೆ. ಕರ್ಮ ಎಂದರೆ ಮಾಡುವುದು ಅಥವಾ ಮಾಡಲ್ಪಡುವುದು ಎಂಬುದಾಗಿ ತಿಳಿಯಬಹುದು. The Concept of Karma in Hinduism ಎಂಬ ಕೃತಿಯಲ್ಲಿ ಪ್ರಸಿದ್ಧ ದಾರ್ಶನಿಕರಾದ ಜಯರಾಮ್ ವಿ. "Karma meaning action, is an important concept of Hinduism. Belief in Karma is deeply ingrained in the minds of Hindus, according to which actions will have consequences according to their nature."

ಸಂಕಲ್ಪಮೂಲಃ ಕಾಮೊ ವೈ ಯಜ್ಞಾಃ ಸಂಕಲ್ಪಸಮ್ಭವಾಃ ।

ವ್ರತಾನಿ ಯಮಧರ್ಮಾಶ್ಚ ಸರ್ವೇ ಸಂಕಲ್ಪಜಾಃ ಸ್ಮೃತಾಃ ॥೨.೩.

ಎಲ್ಲಾ ಕರ್ಮಗಳು ಕಾಮದಿಂದ ಅಥವಾ ಅಥವಾ ಸಂಕಲ್ಪದಿಂದಲೇ ಹುಟ್ಟುವುದು ಎಂಬುದೇ ಇದರ ತಿರುಳು. ಕೇವಲ ಸಂಕಲ್ಪಮಾತ್ರದಿಂದ ಕಾರ್ಯವು ಸಿದ್ಧಿಸುವುದಿಲ್ಲ ಯೋಜನೆಗಳು ಮತ್ತು ಇಂದ್ರಿಯಗಳ ಚೇಷ್ಟೆಯೂ ಮುಖ್ಯವಾಗಿರುವುದು. ಆದ್ದರಿಂದ ಕಾರ್ಯವು ಕಾಮಜವೂ ಸಂಕಲ್ಪಜನ್ಯವೂ ಆಗಿರುತ್ತದೆ, ಆದರಿಂದ ಎಲ್ಲಾ ಸಮಸ್ತ ಕಾರ್ಯಗಳಿಗೂ ಸಂಕಲ್ಪವೇ ಜನ್ಮಹೇತು. ಹೀಗಾಗಿ ಕರ್ಮದ ಮೂಲ ಉತ್ಪತ್ತಿ ಮಾನವನ ಮಸ್ತಿಷ್ಕದಲ್ಲಿ ಆಗುತ್ತದೆ. ಮಾನವನ ವಿಚಾರಗಳೇ ಕಾಲಾಂತರದಲ್ಲಿ ಕರ್ಮರೂಪವಾಗಿ ದೃಷ್ಟಿಗೋಚರವಾಗುವುದರಿಂದ ಮನುಷ್ಯ ತನ್ನ ವಿಚಾರಗಳನ್ನು ಸದಾ ಸಾತ್ವಿಕವಾಗಿಯೂ ಸಂಯಮವಾಗಿಯೂ ಮತ್ತು ಅರಿಷಡ್ವರ್ಗಗಳಿಂದ ರಹಿತವಾಗಿಯೂ ಮಾಡುವುದು ತನಗೂ ಮತ್ತು ಸಮಾಜಕ್ಕೂ ಒಳಿತು.

ಅಕಾಮಸ್ಯ ಕ್ರಿಯಾ ಕಾಚಿದ್ ದೃಶ್ಯತೇ ನೇಹ ಕರ್ಹಿಚಿತ್ ।

ಯದ್ಯದ್ಧಿ ಕುರುತೆ ಕಿಂಚಿತ್ತತ್ತತ್ಕಾಮಸ್ಯ ಚೇಷ್ಟಿತಮ್ ॥ಮನು ೨.೪.

ಸಂಕಲ್ಪದ ಹೊರತಾದ ಯಾವ ಕಾರ್ಯವೂ ಪ್ರಪಂಚದಲ್ಲಿ ಕಾಣಸಿಗುವುದಿಲ್ಲ, ಏನೇ ಕರ್ಯಗತವಾಗಿ ಮೂಡಿಬಂದರೂ ಅವೆಲ್ಲವೂ ಸಂಕಲ್ಪಮೂಲಕವೇ. ಕಾಮ ಅತವಾ ಇಚ್ಛೆಯೂ ಕೂಡಾ ಕರ್ಮಕ್ಕೆ ಮೂಲ ಎಂದು ಹೇಳಬಹುದು ಆದರೆ ಕಾಮಕ್ಕೂ ಸಂಕಲ್ಪವೇ ಮೂಲ.

ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।

ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಮ್ ॥ ೨.೧೨

ಧರ್ಮದ ಐದು ಲಕ್ಷಣಗಳ ವಿಷಯವಾಗಿ ಪ್ರಸ್ತಾಪಿಸುತ್ತಾ ಶ್ರುತಿಸ್ಮೃತಿ ಸಮ್ಮತವಾದ ಮತ್ತು ತನಗೆ ಪ್ರಿಯವಾದ (ಒಳಿತಾದ) ಕರ್ಮವನ್ನು ಮಾಡುವುದು ಧರ್ಮವಾಗಿರುವುದರಿಂದ ಧರ್ಮಪೂರ್ವಕ ಕರ್ಮವನ್ನು ಆಚರಿಸುವುದೇ ನಿಜವಾದ ಕರ್ಮಜ್ಞನ ಲಕ್ಷ್ಣವಾಗಿದೆ.

ವೇದೋಽಖಿಲೋ ಧರ್ಮಮೂಲಂ ಸ್ಮ್ರಿತಿಶೀಲೇ ಚ ತದ್ವಿದಾಮ್ ।

ಆಚಾರಶ್ಚೈವ ಸಾಧೂನಾಮಾತ್ಮನಸ್ತುಷ್ಟಿರೇವ ಚ ॥ ಮನು ೨.೬

ಎಲ್ಲಾ ಕರ್ಮಗಳಿಗೂ ವೇದಗಳೇ ಮೂಲ. ಯಾವುದೋ ಒಂದು ಕೆಲಸ ಕರ್ಮವಾಗುವುದಿಲ್ಲ ಕರ್ಮಮವೆಂದರೆ ವೇದಸಮ್ಮತವಾದುದು ಮಾತ್ರ. ಕೆಲಸ ಮತ್ತು ಕರ್ಮ ಸಮಾನಾಂತರ ಶಬ್ದವೆಂಬುದನ್ನು ಇಲ್ಲಿ ಸ್ವೀಕರಿಸಲಾಗುವುದಿಲ್ಲ, ಏಕೆಂದರೆ ಕೆಲಸ ಯಾವುದು ಬೇಕಾದರೂ ಆಗಬಹುದು ಆದರೆ ಕರ್ಮ ಎಂದರೆ ಅದು ಸತ್ಸಂಕಲ್ಪದಿಂದ ಹುಟ್ಟಿದ ಮತ್ತು ವೇದಾದಿಶಾಸ್ತ್ರಗಳ ಸಮ್ಮತವಾದ ತನಗೆ ಮತ್ತು ಸಮಾಜಕ್ಕೆ ಒಳಿತಾದ ಕೆಲಸ ಮಾತ್ರ ಕರ್ಮವೆನ್ನಿಸುತ್ತದೆ ಎಂಬುದು ಈ ಶ್ಲೋಕದ ತತ್ವವಿವರಣೆ. ಆಚರಣೆಗೆ ಯೋಗ್ಯವಲ್ಲದ ನಿಂದಿತ, ಹಿಂಸೆಯಿಂದ ಕೂಡಿದ, ಅಧಿಕ ನ್ಯೂನತೆಯ ದೋಷದಿಂದ ಕೂಡಿದ, ಸತ್ವಗುಣವಲ್ಲದ ಕೆಲಸಕ್ಕೆ ಕರ್ಮ ಎಂದು ಕರೆಯಲಾಗುವುದಿಲ್ಲ.

ಭಗದ್ಗೀತೆಯಲ್ಲಿ ಕರ್ಮ ಮತ್ತು ಫಲಗಳ ವಿಚಾರ.

ಮನುಷ್ಯ ಜನ್ಮದ ಮುಖ್ಯ ಧ್ಯೇಯ ಮೋಕ್ಷ. ಕರ್ಮವು ಅದಕ್ಕೆ ಸಾಧಕ, ಬಾಧಕವೂ ಹೌದು. ಅದಕ್ಕಾಗಿ –

ಯೋಗಸ್ಥಃ ಕುರು ಕರ್ಮಾಣಿ ಸಂಗಂತ್ಯಕ್ತ್ವಾ ಧನಂಜಯ ।

ಸಿದ್ಧ್ಯಸಿದ್ಧಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥ ಗೀತಾ೨.೪೮

ಈ ಶ್ಲೋಕದಲ್ಲಿ ಕೃಷ್ಣನು ಕರ್ಮವನ್ನು ಹೇಗೆ ಮಾಡಬೇಕು ಎಂದು ಹೇಳುತ್ತಾ ಸಮತ್ವವೇ ಯೋಗ ಎಂಬುದಾಗಿ ಹೇಳುತ್ತಾನೆ. ಮಾನಾಪಮಾನ ಜಯಾಪಜಯಗಳಲ್ಲಿ ಯಾರು ಸಮತತ್ವದಲ್ಲಿರುತ್ತಾನೋ ಅವನೇ ಯೋಗೀ ಎಂಬುದಾಗಿ ಧನಂಜಯನಿಗೆ ಹೇಳುತ್ತನೆ.

ಗೀತಾ ಗ್ರಂಥದ ಪ್ರಕಾರ ಜೀವಾತ್ಮನ ಜೀವನ ಇಂದು ಹೀಗಿರಲು ಕರ್ಮದ ಪ್ರಮುಖ ಪಾತ್ರ ಎಂಬುದಾಗಿ ಹೇಳಲಾಗಿದೆ.

ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।

ನ ಕರ್ಮಫಲಸಂಯೋಗ ಸ್ವಭಾವಸ್ತು ಪ್ರವರ್ತ್ತತೇ ॥ ಭಗವದ್ಗೀತಾ. ೫.೧೪

ಅರ್ಥ- ಅಲೈ ಅರ್ಜುನನೇ ನಾನು ಯಾರಿಗೂ ಕರ್ತೃತ್ವವನ್ನು ಕೊಡುವುದಿಲ್ಲ, ಅಂದರೆ ನಾನು ಯಾಜ ಜೀವಿಗೂ ಈ ಕರ್ಮವನ್ನು ಮಾಡು ಅಥವಾ ಮಾಡದಿರು ಎಂದು ಹೇಳುವುದಿಲ್ಲ. ನಾನು ಯಾರಿಗೂ ಈ ಕರ್ಮ ಮಾಡು

ಅಥವಾ ಮಾಡದಿರು ಎಂದು ಪ್ರೇರಣೆಯೂ ಮಾಡುವುದಿಲ್ಲ. ಜೀವಾತ್ಮನು ಮಾಡಿದ ಕರ್ಮಗಳಿಗೆ ನಾನು ಫಲವಾನ್ನೂ ನೀಡುವುದಿಲ್ಲ. ಜೀವನ ಸ್ವಭಾವವು ಕರ್ಮ ಮಾಡುವುದು ಹೇಗೋ ದೇವತೆಗಳ ಸ್ವಭಾವ ಅದರ ಫಲವನ್ನು ಕೊಡುವುದು.

ಅಂದರೆ ಕರ್ಮಮಾಡಲು ಜೀವಿಯು ಸರ್ವತಂತ್ರಸ್ವತಂತ್ರನಾಗಿದ್ದಾನೆ, ದೇವತೆಗಳು ಕರ್ಮಫಲವನ್ನು ನಿಷ್ಠುರವಾಗಿ ಜೀವಾತ್ಮನಿಗೆ ದಯಪಾಲಿಸುತ್ತಾರೆ. ಮೂಂದಿನ ಶ್ಲೋಕದಲ್ಲಿ ಶ್ರೀಕೃಷ್ಣನ ಇನ್ನೊಂದು ವಿಚಾರ ಕರ್ಮದ ಬಗ್ಗೆ ಗೀತೆಯಲ್ಲಿ ಹೀಗೆ ಹೇಳುತ್ತಾನೆ-

ನಾದತ್ತೇ ಕಸ್ಯಚಿತ್ಪಾಪಂ ನ ಚೈವ ಸುಕೃತಂ ವಿಭುಃ ।

ಅಜ್ಞಾನೇನ ಆವೃತಂ ಜ್ಞಾನಂ ತೇನ ಮುಹ್ಯತಿ ಜಂತವಃ ॥

ಅರ್ಥಾತ್ ಜೀವನು ತನ್ನ ಸ್ವೇಚ್ಛೆಯಿಂದ ಶುಭ ಮತ್ತು ಅಶುಭಕರ್ಮಗಳನ್ನು ಮಾಡುತ್ತಾನೆ. ಅದರಂತೆಯೇ ಪರಮಾತ್ಮನು ಎಂದೂ ಸುಖದುಃಖಗಳ ಫಲವನ್ನು ಕೊಡುವುದಿಲ್ಲ, ಜೀವಿಯೇ ಅವುಗಳನ್ನು ಸ್ವೇಚ್ಛೆಯಿಂದ ಪಡೆಯುತ್ತಾನೆ.

ಮಹಾಭಾರತ ಗ್ರಂಥದಲ್ಲಿ ಕರ್ಮದ ವಿಷಯವನ್ನು ಕುರಿತು ಇನ್ನೂ ಅನೇಕ ವಿಷಯಗಳ ಪ್ರಸ್ತಾಪ ನಮಗೆ ಅಲ್ಲಲ್ಲಿ ಸಿಗುತ್ತದೆ ಅವುಗಳ ಕೆಲ ಉದ್ಧರಣೆಗಳನ್ನು ಇಲ್ಲಿ ಕೊಟ್ಟರೆ ಅಸಾಂಪ್ರತಿಕವೇನನ್ನಿಸುವುದಿಲ್ಲ.

"ನಾನ್ಯಃ ಕರ್ತುಃ ಫಲಂ ರಾಜನುಪಭುಙ್ಕ್ತೇ" । ವನಪರ್ವ-೧೨೮.೧೪

ಹೇ ರಾಜನ್ ಕರ್ಮದ ಫಲವನ್ನು ಬೇರೊಬ್ಬನು ಭೋಗಿಸುವುದಿಲ್ಲ ಕರ್ತಾರನೇ ಅದರ ಭೋಕ್ತೃ.

"ಅವಶ್ಯಂ ಕ್ರಿಯಮಾಣಸ್ಯ ಕರ್ಮಣೋ ದೃಶ್ಯತೇ ಫಲಮ್" । ವನಪರ್ವ- ೨೧೬.೨೬

ಮಾಡಲಾಗುತ್ತಿರುವ ಕರ್ಮದ ಫಲವು ಅವಶ್ಯವಾಗಿ ಗೋಚರಿಸುವುದು.

"ಕರ್ಮಣಾ ಹ್ಯನುರೂಪೇಣ ಲಭ್ಯತೇ ಭುಕ್ತಿವೇತನಮ್" । ದ್ರೋಣಪರ್ವ ೧೧೪.೨೩

ಕರ್ಮಕ್ಕೆ ಅನುರೂಪವಾಗಿಯೇ ಭುಕ್ತಿ (ಭತ್ಯೆ) ಮತ್ತು ವೇತನಗಳು ಸಿಗುತ್ತವೆ. ಹಾಗಾದರೆ ಕರ್ಮವು ಕೇವಲ ಫಲಕ್ಕೆ ಮಾತ್ರ ಅನ್ವಯಿಸುವುದಿಲ್ಲ ಅಪಿತು ಅದರ ಪರಿಣಾಮಕ್ಕೂ ಅನ್ವಯಿಸುತ್ತದೆ.

೧.ಕರ್ಮ---೨.ಪರಿಣಾಮ---೩.ಫಲ. ಕ್ರಮವಾಗಿ ಈ ಮೂರು ತತ್ತ್ವಗಳು ನಮಗೆ ಕಾಣ ಸಿಗುತ್ತದೆ. ಈ ಸಂದರ್ಭದಲ್ಲಿ ಕರ್ಮದ ಫಲ ಬೇರೆ ಮತ್ತು ಅದರ ಪರಿಣಾಮ ಬೇರೆ ಎಂಬುದನ್ನು ಮನಗಾಣಬೇಕು. ಉದಾಹರಣೆಗೆ ಒಬ್ಬವ್ಯಕ್ತಿ ಅವನನ್ನು ದೇವದತ್ತ ಎಂದೆಸಿ ಆ ವ್ಯಕ್ತಿಯು ಯಜ್ಞದತ್ತನೆಂಬೊಬ್ಬರಿಗೆ ಸಾವಿನ ಅಂಚಿನಲ್ಲಿ ಒಂದು ಬಾಟಲ್ ರಕ್ತದ ದಾನ ಮಾಡಿದ ಎಂದು ಕಲ್ಪಿಸಿಕೊಳ್ಳೋಣ, ಯಜ್ಞದತ್ತನು ದೇವದತ್ತನ ರಕ್ತದಾನದ ಕಾರಣ ಬದುಕುಳಿದ. ಅದ್ದರಿಂದ ದೇವದತ್ತನಿಗೆ ಸಮಾಜದಲ್ಲಿ ಜೀವ ಉಳಿಸಿದ ಪುಣ್ಯಾತ್ಮ ಎಂದು ಪ್ರಶಂಸೆಗಳು ಅಥವಾ ಯಶಸ್ಸು ಸಿಕ್ಕಿತು

ಎಂದಾದರೆ ಪ್ರಶಂಸಾದಿಗಳು ಕರ್ಮದ ಪರಿಣಾಮವಷ್ಟೇ! ಅದರ ಫಲವಲ್ಲ. ಅದೇ ರೀತಿ ಇಲ್ಲಿಯೂ ಭತ್ಯೆ ಮತ್ತು ವೇತನಗಳು ಕರ್ಮದ ಪರಿಣಾಮದ ರೂಪವಾಗಿವೆ. ಇವುಗಳನ್ನು ಕರ್ಮದ ಫಲವೆನ್ನಲಾಗದು.

ಇನ್ನೊಂದು ರೀತಿಯ ಉದಾಹರಣೆಗೆ ಮೊರೆ ಹೋಗೋಣ. ಹತ್ತು ಜನ ಮುಗ್ಧ ಬಾಲಕರನ್ನು ಕೊಲೆಮಾಡಿದ ಆರೋಪಿಯೊಬ್ಬನಿಗೆ ಆರೋಪ ಸಾಬೀತಾಗಿ, ಅವನು ತಾನು ಮಾಡಿದ್ದಾಗಿಯೂ ಒಪ್ಪಿಕೊಂಡು ನ್ಯಾಯಾಲಯವು ಮರಣ ದಂಡನೆ ವಿಧಿಸಿ ಆದೇಶಿಸಿದರೆ ಅಪಯಶಸ್ಸು ಮತ್ತು ಮರಣದಂಡನೆ ಎಲ್ಲವೂ ಕರ್ಮದ ಪರಿಣಾಮವಾಗಿದೆ, ಕರ್ಮಫಲವಲ್ಲ. ಆ ಜಘನ್ಯ ಮತ್ತು ಘೋರ ಕರ್ಮದ ಫಲವನ್ನು ಜನ್ಮಾಂತರದಲ್ಲಿ ಅವಶ್ಯವಾಗಿ ಅವನು ಅನುಭವಿಸುತ್ತಾನೆ. ವೇದಗಳು ಪರಮಾತ್ಮನನ್ನು 'ರುದ್ರ' ಎಂಬುದಾಗಿಯೂ ಕರೆಯಲಾಗಿದೆ. ರುದ್ರನೆಂದರೆ ಅಳಿಸುವವನು ರೋದನೆ ಮಾಡಿಸುವವನು ಎಂದರ್ಥ. ಪಾಪಾತ್ಮನಿಗೆ ಅಥವಾ ಕುಕರ್ಮ ಮಾಡಿದವನಿಗೆ ರುದ್ರರೂಪಿಯಾದ ಪರಮಾತ್ಮನು ತನ್ನ ನಿಷ್ಠುರ ಕರ್ಮದ ಫಲವನ್ನು ಅವಶ್ಯವಾಗಿಯೇ ದಯೆಪಾಲಿಸುತ್ತಾನೆ.

> "ಕರೋತಿ ಯಾದೃಶಂ ಕರ್ಮ ತಾದೃಶಂ ಪ್ರತಿಪಾದ್ಯತೇ" – ಶಾಂತಿಪರ್ವ ೧೯೦.೨೨
>
> ಮನುಷ್ಯನು ಯಾವರೀತಿಯ ಕರ್ಮವನ್ನು ಮಾಡುತ್ತನೋ ಅದೇ ರೀತಿಯ ಫಲವನ್ನು ಪಡೆಯುತ್ತಾನೆ.
>
> "ನಾಕೃತ್ವಾ ಲಭತೇ ಕಶ್ಚಿತ್ ಕಿಂಚಿದತ್ರ ಪ್ರಿಯಾಪ್ರಿಯಮ್" । ಶಾಂತಿಪರ್ವ–೧೯೮.೩೦
>
> ಏನನ್ನೂ ಮಾಡದೆಯೇ ಪ್ರಿಯವಾಗಲೀ ಅಪ್ರಿಯವಾಗಲೀ ಫದರೂಪದಲ್ಲಿ ಸಿಗುವುದಿಲ್ಲ.

ಬೌದ್ಧಧರ್ಮದ ಕರ್ಮಸಿದ್ಧಾಂತ.

ಕರ್ಮಸಿದ್ಧಾಂತದ ವಿಷಯದಲ್ಲಿ ವೈದಿಕರಂತೆಯೇ ಬೌದ್ಧರೂ ಕರ್ಮಫಲಗಳನ್ನು ಒಪ್ಪುತ್ತಾರೆ. ಪ್ರತಿಯೊಂದು ಕರ್ಮವು ತನ್ನದೇ ಆದ ಫಲವೊಂದನ್ನು ಹೊಂದಿಕೊಂಡಿರುತ್ತದೆ. ನಾಗಾರ್ಜುನನ ಅಭಿಪ್ರಾಯದಂತೆ ಇದೂ ಸಹ ಸತ್ಯವಲ್ಲ. ಕರ್ಮದ ಫಲ ಸದ್ಯದಲ್ಲಿಯೇ ದೊರಕದೆಯೆ ಕಾಲಾಂತರದಲ್ಲಿ ದೊರೆಯುತ್ತದೆ ಎಂದಾದರೆ ಒಂದು ವೇಳೆ ಫಲದ ಅಂತ್ಯದವರುಗೂ ಕರ್ಮವಿದ್ದರೆ, ಅದು ನಿತ್ಯವಾಗಿಬಿಡುತ್ತದೆ ಇಲ್ಲವೆ ಫಲವು ಉಂಟಾಗುವವರೆಗೆ ಅದರ ಅಸ್ತಿತ್ವವನ್ನು ಒಪ್ಪದೆ, ಅದನ್ನು ವಿನಾಶಶಾಲಿ ಎಂದು ಅಂಗೀಕರಿಸಿದರೆ, ಅವಿದ್ಯಮಾನ ಅಥವಾ ಇಲ್ಲದಿರುವ ಕರ್ಮ ಯಾವ ರೀತಿಯಲ್ಲಿ ಫಲವನ್ನು ಉತ್ಪಾದಿಸಬಲ್ಲದು ? ಹಾಗೆಲ್ಲಾ ಕರ್ಮದ ಸ್ವಭಾವ ಎಂದರೆ ನಿಸ್ಸಂದೇಹವಾಗಿ ಅದು ಶಾಶ್ವತವಾಗಿ ಬಿಡುತ್ತದೆ .

ಬೌದ್ಧಧರ್ಮದ ಕ್ಷಣಿಕವಾದ ಮತ್ತು ಕರ್ಮಸಿದ್ದಾಂತ:

ತತ್ತ್ವಶಾಸ್ತ್ರಕ್ಕೆ ಬೌದ್ಧಧರ್ಮದ ಕ್ಷಣಿಕವಾದವು ಅತ್ಯಮೂಲ್ಯವಾದ ಕೊಡುಗೆಯಾಗಿದೆ. ಈ ಕ್ಷಣಿಕವಾದ ಕರ್ಮ ಮತ್ತು ಅವುಗಳ ಫಲಗಳ ನಿರಾಕರಣೆಯನ್ನೂ ಮಾಡುತ್ತದೆ. ಸಾಂಖ್ಯರ ಪ್ರಧಾನವಾದ, ಗೌತಮಾದಿಗಳ ಈಶ್ವರವಾದ, ಚಾರ್ವಾಕರ ಭೂತಚತುಷ್ಟಯವಾದ, ಜೈಮಿನಿಗಳ ವೈದಿಕರಾಶಿನಿತ್ಯತ್ವವಾದಗಳ ನಿರಾಕರಣೆಗೆ ಬೌದ್ಧಧರ್ಮದ

ಕ್ಷಣಿಕವಾದ ಪ್ರಧಾನ ಅಸ್ತ್ರವಾಯಿತು. ಈ ಸಿದ್ಧಾಂತದ ಪ್ರಕಾರ ಜಗತ್ತಿನಲ್ಲಿಬರುವ ಎಲ್ಲಾ ಪದಾರ್ಥಗಳೂ ಕ್ಷಣಿಕ ಎಂಬುದಾಗಿ ಅಂಗೀಕರಿಸಿರುವುದರಿಂದ ವ್ಯವಹಾರ ಮತ್ತು ಪರಮಾರ್ಥದ ಉತ್ಪತ್ತಿ ಎಂದಿಗೂ ಸಿದ್ಧಿಸುವುದಿಲ್ಲ. ವಸ್ತುಗಳು ಕ್ಷಣಿಕವಾಗಿರುವುದರಿಂದ ಯಾವುದೇ ಕ್ರಿಯೆಯನ್ನು ಉತ್ಪಾದಿಸಲು, ಮತ್ತೊಂದು ಕ್ಷಣದಲ್ಲಿ ಅವುಗಳು ಇಲ್ಲದಿರುವಿಕೆಯೇ ಫಲದ ಉತ್ಪತ್ತಿಗೆ ಯಾವುದೇ ಕ್ರಿಯೆಯು ಮತ್ತೊಂದು ಕ್ಷಣದಲ್ಲೂ ಇರುವುದು ಅತ್ಯಗತ್ಯ. ಆದರೆ ಬೌದ್ಧಧರ್ಮದ ಪ್ರಕಾರ ಕ್ರಿಯೆಯೆ ಕ್ಷಣಿಕ. ಆದ್ದರಿಂದ ಅದು ತನ್ನ ಫಲವನ್ನು ಉತ್ಪಾದಿಸದೆಯೇ, ಅತೀತದ ಗರ್ಭದೊಳಗೆ ವಿಲೀನವಾಗಿಬಿಡುತ್ತದೆ. ಈ ದೋಷವನ್ನು 'ಕೃತಪ್ರಾಣಾಶ' , ಅಂದರೆ ಮಾಡಿದ ಕರ್ಮದ ನಾಶ, ಕ್ರಿಯಾರಹಿತ ಪ್ರಣಿಯು ಸ್ವಯಂ ಮಾಡದೆಯೇ ಇರುವ ಕ್ರಿಯೆಯನ್ನು ಭೋಗಿಸಬೇಕಾಗಿರುತ್ತದೆ. ಈ ದೋಷಕ್ಕೆ 'ಅಕೃತಕರ್ಮಭೋ' ಎಂದು ಹೆಸರು. ಹೀಗಾಗಿ ಭವಭಂಗದ ದೋಷವೂ ಉಂಟಾಗುತ್ತದೆ. ಪ್ರಾಣಿಗಳು ಜಗತ್ತಿನಲ್ಲಿ ಕರ್ಮಫಲವನ್ನು ಅನುಭವಿಸುವುದಕ್ಕಾಗಿಯೇ ಜನಿಸುತ್ತವೆ. ಈ ವಾದದ ಪ್ರಕಾರ ಜೀವಿಯೊಂಬುದೊಂದು ಕ್ಷಣಿಕವೇ. ಯಾವ ಕರ್ಮವನ್ನು ಜೀವಿಯು ಮಾಡಿದೆಯೋ, ಅದರ ಫಲವನ್ನು ಭೋಗಿಸಲು ಅದಕ್ಕೆ ಅವಕಾಶವೇ ಇರುವುದಿಲ್ಲ. ಫಲವಾಗಿ ಅದರಲ್ಲಿ ಉತ್ತರದಾಯಿತ್ವದ ಅಭಾವವು ಉಂಟಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಪಂಚದ ಉತ್ಪತ್ತಿಗಾಗಿ ಸರಿಯಾದ ಕಾರಣವೂ ಸಿಗದಂತೆ ಅಗುತ್ತದೆ. ಆದ್ದರಿಂದ ಕ್ಷಣಿಕವಾದಾವನ್ನು ಅಂಗೀಕರಿಸಿದರೆ, ಪ್ರಪಂಚಭಂಗವಾಗುವ ಸಾಧ್ಯತೆ ಇರುವುದು. ಮೋಕ್ಷಸಿದ್ಧಾಂತಕ್ಕೂ ಇದರಿಂದ ತೋದರೆಯಾಗುವ ಸಾಧ್ಯತೆ ಇದೆ. ಬೌದ್ಧಧರ್ಮವು ಮೋಕ್ಷಪ್ರಾಪ್ತಿಗಾಗಿ ಅಷ್ಟಾಂಗಮಾರ್ಗವನ್ನು ಬೋಧಿಸುತ್ತದೆ. ಆದರೆ ಕರ್ಮಫಲ್ಲವು ಕ್ಷಣಿಕವಾಗಿರುವುದರಿಂದ ಮೋಕ್ಷಪ್ರಾಪ್ತಿ ಅಸಂಭವ.

ಈ ಕ್ಷಣಿಕವಾದವನ್ನು ಅಂಗೀಕರಿಸಿರುವುದರಿಂದ ಧಾರ್ಮಿಕವಿಷಯಗಳಲ್ಲಿ ಸಾಕಷ್ಟು ಅವ್ಯವಸ್ಥೆಯು ತಲೆದೂರುವುದನ್ನು ಜಯಂತಭಟ್ಟನು ತನ್ನ ನ್ಯಾಯಮಂಜರೀ ಎಂಬ ಗ್ರಂಥದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸುತ್ತನೆ.

ನಾಸ್ತ್ಯಾತ್ಮಾ ಫಲಭೋಗಮಾತ್ರಮಥ ಚ ಸ್ವರ್ಗಾಯ ಚೈತ್ಯಾರ್ಚನಮ್ ।
ಸಂಸಾರಾಃ ಕ್ಷಣಿಕಾ ಯುಗಸ್ಥತಿ ಭೃತಶ್ಚೈತೇ ವಿಹಾರಾಃ ಕ್ಛು ತಾಃ ॥
ಸರ್ವಂ ಶೂನ್ಯಮಿದಂ ವಸೂನಿ ಗುರವೇ ದೇಹೀತಿ ಚಾದಿಶ್ಯತೇ ।
ಬೌದ್ಧಾನಾಂ ಚರಿತಂ ಕಿಮನ್ಯದಿಯತೀ ದಂಭಸ್ಯ ಭೂಮಿಃ ಪರಾಃ ॥

ಯಾವಾಗ ಭೋಗಿಸಲು ವ್ಯಕ್ತಿಯೇ ಇರುವುದಿಲ್ಲ ಆಗ ಸ್ವರ್ಗ ಪ್ರಾಪ್ತಿಗಾಗಿ ಚೈತ್ಯವನ್ನು ಪೂಜಿಸಿ ಫಲವೇನು? ಪ್ರಪಂಚವೇ ಕ್ಷಣಿಕವಾಗಿರುವುದಾದರೆ ಅನೇಕ ಶತಮಾನಗಳವರೆಗೆ ಸ್ಥಿರವಾಗಿರಬಲ್ಲ ವಿಹಾರಗಳನ್ನು ಏಕೆ ನಿರ್ಮಿಸಬೇಕು? ಎಲ್ಲವೂ ಶೂನ್ಯವಾದರೆ ಗುರುವಿಗೆ ದಕ್ಷಿಣೆಯನ್ನು ನೀಡಬೇಕು ಎಂಬ ಉಪದೇಶ ಏತಕಾಗಿ? ನಿಜವಾಗಿಯೂ ಬೌದ್ದರದು ಅತ್ಯಂತ ಚರಿತ್ಯೆ. ಆದರೆ ಅದು ಮಾತ್ರ ದಂಭದ ಪರಾಕಾಷ್ಟೆ.

ಹೀಗೆ ಬೌದ್ಧರೂ ಕೂಡಾ ಸನಾತನ ಧರ್ಮದಲ್ಲಿ ಅಡಕವಾಗಿರುವ ಸಾಮಾನ್ಯ ಕರ್ಮಫಲ ಎಂದರೆ ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ ಅದಕ್ಕೆ ವ್ಯತಿರಿಕ್ತವಾದುದಕ್ಕೆ ಕೆಟ್ಟಫಲ ಎಂಬ ತತ್ತ್ವಿಕ ಅಂಶವನ್ನು ಅಂಗೀಕರಿಸುತ್ತರೆ. ಆದರೆ ಇದಕ್ಕೆ ವೇದಗಳ ಪ್ರಾಮಾಣ್ಯವನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾರೆ ಎಂಬುದೇ ಸಾರ.

ಹೀಗೆ ಬೌದ್ಧರ ಕರ್ಮಸಿದ್ಧಾಂತದ ಪರವಿರೋಧಗಳ ಸರಮಾಲೆ ಮುಂದೆ ನಡೆಯುತ್ತದೆ. ಇದರ ತತ್ವಗಳ ಅತಿಪ್ರಸಂಗವಿನಿಸುವುದರಿಂದ ಇದರ ಹೆಚ್ಚು ಪ್ರಪಂಚ ಇಲ್ಲಿ ಅಪ್ರಾಸಂಗಿಕವಾಗಿದೆ.

The Concept of Karma in Hinduism ಎಂಬ ಕೃತಿಯಲ್ಲಿ ಪ್ರಸಿದ್ಧ ದಾರ್ಶನಿಕರಾದ ಜಯರಾಮ್ ವಿ. According to buddhisum, Karma is an eternal law, which is responsible for the births and deths and the suffering of beings in the causatrive world or samsaara. While no one can really be free from the law of Karma, people can minimize its negative impact by leading to the three religions, The law of karma is applicable not only to humans but all beings, including plants, animals and microorganisms...

ಹೀಗಾಗಿ ಭಾರತೀಯರ ಕರ್ಮಸಿದ್ಧಾಂತ ಸಾರವಾನ್ನು ಗೀತೆಯು ಒಂದೇ ಮಾತಿನಲ್ಲಿ ಹೇಳಿರುವುದು

ಅವಶ್ಯಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ ।
ನಾಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ ॥

ಬಹುಶಃ ಕರ್ಮಸಿದ್ಧಾಂತದ ಸಾರವನ್ನು ಈ ಶ್ಲೋಕವು ಹೇಳಿರುವುದು ಎಂದರೆ ಸಮಂಜಸವೆನ್ನಿಸುತ್ತದೆ. ಕರ್ಮದ ಫಲದಿಂದ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವಶ್ಯವಾಗಿಯೇ ಅವರಿಗೆ ಕರ್ಮದ ಫಲವು ದೊರೆಯುತ್ತದೆ. ಇದರಲ್ಲಿ ಯಾವ ಸಂಶಯವಿಲ್ಲ. ಕಾಲಾಂತರದಲ್ಲಿಯಾದರೂ ಸರಿಯೆ ಪ್ರಾರಬ್ಧದ ಫಲವು ಯಾರನ್ನೂ ಬಿಡಲಾರದು ಎಂಬುವುದು ಕರ್ಮಸಿದ್ಧಾಂತದ ಸಾರವಾಗಿದೆ. ದಯಾನಂದ ಸರಸ್ವತಿಗಳ ಸತ್ಯಾರ್ಥಪ್ರಕಾಶದಲ್ಲಿ ನಾಸ್ತಿಕ ಮತ್ತು ಆಸ್ತಿಕಕರ ಲಕ್ಷಣವನ್ನು ಹೇಳುವ ಪ್ರಸಂಗದಲ್ಲಿ "ಯಾರು ಕರ್ಮದ ಸಿದ್ಧಾಂತವನ್ನು ಒಪ್ಪುವುದಿಲ್ಲವೋ ಅವನನ್ನು ನಾಸ್ತಿಕ ಎಂಬುದಾಗಿಯೂ ಕರ್ಮಸಿದ್ಧಾಂತವನ್ನು ಒಪ್ಪುವವರನ್ನ ಮಾತ್ರ ಆಸ್ತಿಕ ಎಂಬುದನ್ನು ಅವರು ಪ್ರತಿಪಾದಿಸುತ್ತಾರೆ.

ಜೈನರ ಕರ್ಮಸಿದ್ಧಾಂತ.

ಜೈನರ ಸಿದ್ಧಾಂತವು ಒಂದು ಪ್ರಾಚೀನ ದರ್ಶನವಾಗಿದೆ. ಭಾರತೀಯ ಭೂ ಭಾಗದ ಅವ್ಯೆದಿಕ ಅಥವಾ ವೇದಗಳ ಶಬ್ದಪ್ರಮಾಣವನ್ನು ನಿರಾಕರಿಸುವ ಧರ್ಮದಲ್ಲಿ ಅತಿ ಪ್ರಾಚೀನಧರ್ಮ ಎಂದು ಹೇಳಬಹುದಾದ ಧರ್ಮ. ಸನಾತನಧರ್ಮದಲ್ಲಿ ಅನೇಕ ರೀತಿಯ ಅಸಹಜತೆಯನ್ನು ಮನಗಂಡು ೨೪ ಜಿನ ತೀರ್ಥಂಕರರಿಂದ ಬೋಧಿತವಾದ ಹಿಂಸಾ ರಹಿತವಾದ ಒಂದು ಮಾರ್ಗ. ಇದರ ಪ್ರಕಾರ ಹಿಂಸಾ ಇತ್ಯಾದಿ ಕುಕರ್ಮಗಳಿಂದ ಜೀವಿಗಳು ಪ್ರಪಂಚದ ಕಾಲಚಕ್ರದಲ್ಲಿ ಸಿಲುಕಿದ್ದಾರೆ. ಇವರನ್ನು ಈ ಜನ್ಮ ಮತ್ತು ಮೃತ್ಯುವಿನ ಚಕ್ರದೋಷಗಳಿಂದ ಬಿಡುಗಡೆ ಗೊಳಿಸಲು ಒಂದು ತತ್ವದರ್ಶನವನ್ನು ಅನುಸರಿಸುವುದು ಜೈನಧರ್ಮದ ಮಾರ್ಗ ಎಂದು ಕರೆಯಲಾಗುತ್ತದೆ. ಕ್ರಿ.ಪೂ. ೬ನೆಯ

ಶತಮಾನದಲ್ಲಿ ಇದರ ಭಗವಾನ್ ಮಹಾವೀರ ದ್ವಾರಾ ಪುನಃ ಜೈನ ದರ್ಶನವು ಚಾಲನೆಗೆ ಬಂತು ಆದರೆ ಈ ಧರ್ಮ ಮಹಾವೀರನಿಗೂ ಶತಮಾನಗಳಷ್ಟು ಪ್ರಾಚೀನವಾದುದು.

ಪ್ರಸ್ತುತ ಜೈನಧರ್ಮದಲ್ಲಿ ಕರ್ಮದ ಸಿದ್ಧಾಂತದ ವಿಷಯವನ್ನು ನೋಡಿದಾಗ ಜೈನ ಧರ್ಮದಲ್ಲಿ ಕರ್ಮದ ಎಂಟು ಭೇದಗಳಿವೆ. ೧. ಜ್ಞಾನವರಣ ೨.ದರ್ಶನವರಣ. ೩.ವೇದನೀಯ. ೪. ಮೋಹನೀಯ ೫. ಆಯು ೬.ನಾಮ ೭.ಗೋತ್ರ ೮. ಅಂತರಾಯ ಎಂಬುದಾಗಿ ಎಂಟು ಕರ್ಮಭೇದಗಳಿವೆ.

ಇವುಗಳನ್ನು ಮುಖ್ಯವಾಗಿ ಎರಡು ಪ್ರಮುಖ ಭಾಗಗಳಾಗಿ ನೋಡುತ್ತರೆ.

೧. ಘಾತೀಯ ಅಥವಾ ನಾಶವನ್ನು ಹೊಂದುವ ಕರ್ಮಗಳು.

೨. ಅಘಾತೀಯ ಅಥವಾ ನಾಶರಹಿತವಾದ ಕರ್ಮಗಳು. ಎಂಬುದಾಗಿ ಎರಡು ಪ್ರಮುಖ ಪ್ರಭೇದಗಳಿವೆ.

ಇದರ ಇನ್ನೂ ಅನೇಕ ಪ್ರಭೇದಗಳನ್ನು ನೋಡಬಹುದು ಆದರೆ ಜೀವಿಗಳ ಬಂಧನವು ಅಂದರೆ ಶರೀರಗಳ ರೂಪದ ಪಂಜರದಲ್ಲಿ ಜೀವಿಗಳು ನರಳಾಡುತ್ತಿರುವುದಕ್ಕೆ ಕಾರಣ ದೂಷಿತಮನೋಭಾವ ಕಷಾಯಗಳ ಕಾರಣ ಜೀವಿಯು ಪುದ್ಗಲ ಅರ್ಥಾತ್ ಶರೀರದಿಂದ ಆಕ್ರಾಂತನಾಗಿ ಬಂಧತತ್ತ್ವಕ್ಕೆ ಪ್ರಾಪ್ತನಾಗಿದ್ದಾನೆ. ಜಿನ ಶಬ್ದ ಅರ್ಥವೇ "ಕರ್ಮತಾರಿನ್ ಜಯತಿ ಇತಿ ಜಿನಃ" ಅರ್ಥಾತ್ ಕರ್ಮದ ಕಾರಣಗಳಿಂದ ರಾಗದ್ವೇಷಗಳ ರೂಪಿ ಶತ್ರುಗಳನ್ನು ಯಾರು ಜಯಿಸಿದ್ದಾರೋ ಅವರೇ 'ಜಿನ' ಎಂಬುದಾಗಿ ಜೈನ ಗ್ರಂಥಗಳು ಸಾರುತ್ತವೆ. ಇವರ ಪ್ರಕಾರ ಆಚಾರವೆಂದರೆ ಧರ್ಮ, ವಿಚಾರವೆಂದರೆ ದರ್ಶನ.

ಚಾರ್ವಾಕರ ಮತದಲ್ಲಿ ಕರ್ಮಸಿದ್ಧಾಂತ.

ಚಾರ್ವಾಕರನ್ನು ನಮ್ಮ ಆಸ್ತಿಕ ದಾರ್ಶನಿಕರು 'ಆಚಾರ್ಯಚಾರ್ವಾಕ' ಎಂಬುದಾಗಿ ಮಾನ್ಯ ಮಾಡುತ್ತಾರೆ. ಚಾರು ಎಂದರೆ ಸುಂದರವಾದ ಎಂದರ್ಥ ವಾಕ ಎಂದರೆ ಮಾತನಾಡುವವ. ಸೂದರವಾದ ಮತ್ತು ಚಕತ್ಕಾರವಾದ ಮಾತುಗಳನ್ನು ಆಡುವವನು ಚಾರುವಾಕ ಎಂದರ್ಥ. ಸುಂದರವಾದ ಮಾತುಗಳೆಂದರೆ ಸರ್ವೇ ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರುವ, ಸರ್ವಸ್ವೀಕೃತ ಮತ್ತು ಸರ್ವಜನವಿದಿತವಾದ ತತ್ತ್ವಗಳನ್ನು ತನ್ನ ಚಮತ್ಕಾರದ ಮಾತುಗಳಿಂದ ನಿರಾಕರಿಸುತ್ತಿದ್ದ ಆಚಾರ್ಯರೇ ಚಾರ್ವಾಕರು. ನಾಸ್ತಿಕ ದರ್ಶನಗಳಲ್ಲಿ ಇವನ ಯಾವುದಾದರೊಂದು ಗ್ರಂಥದ ಉಲ್ಲೇಖ ನಮಗೆ ಕಂಡುಬಂದಿಲ್ಲ. ಆಸ್ತಿಕ ದರ್ಶನಕಾರರು ಅವನ ಮಾತುಗಳನ್ನು ಉಲ್ಲೇಖಿಸಿ ಖಂಡಿಸಿರುವ ಕಾರಣ ಅವರ ಸಿದ್ಧಾಂತದ ಕೆಲ ವಾಕ್ಯಗಳು ಆಸ್ತಿಕದರ್ಶನ ಗ್ರಂಥಗಳಲ್ಲಿ ಅಲ್ಲಲ್ಲಿ ಸಿಗುತ್ತವೆ. ಇವನ ಪ್ರಕಾರ ಕರ್ಮದ ಫಲ ಎಂದೂ ನಮಗೆ ಸಿಗುವುದಿಲ್ಲ. ಆದ್ದರಿಂದ ನೀನು ಕೆಟ್ಟ ಕೆಲಸಗಳನ್ನು ಮಾಡಿದರೂ ಒಳ್ಳೆಯ ಕೆಲಸಗಳನ್ನು ಮಾಡಿದರೂ ನಿನೆಗೆ ಸಾಂದರ್ಭಿಕವಾಗಿ ನಿನಿಗೆ ಪ್ರಾಪ್ತಿಯಾಗುತ್ತದೆ. ಯಜ್ಞಯಾಗಾದಿಗಳಿಂದವಾಗಲೀ ಧರ್ಮ ಕರ್ಮಗಳಿಂದಾಗಲೀ ಏನೂ ಪ್ರಯೋಜನವಿಲ್ಲ. ದೇವರೆಂಬ ಯಾವ ವಸ್ತುವೂ ಇಲ್ಲ. ಯಜ್ಞಯಾಗಾದಿಗಳಿಂದ ಸ್ವರ್ಗ ಸಿಗುತ್ತದೆಯಾದರೆ

ಪಶುಬಲಿಯನ್ನು ಕೊಡುವ ಸ್ಥಾನದಲ್ಲಿ ಯಜಮಾನನ ಬಲಿಯನ್ನೇ ಕೊಡಿರಿ. ಯಜಮಾನ ಮೋಕ್ಷಕ್ಕೆ ಹೋಗಲಿ! ಎಂದಾಗಿ ಚಾರ್ವಾಕರ ವಾದಗಳ ಸರಣಿ ಮುಂದುವರೆಯುತ್ತದೆ.

ಅನೈತಿಕ-ನಾಸ್ತಿಕದರ್ಶನ- ಚಾರ್ವಾಕರ ದರ್ಶನವನ್ನು ನಾವು ನೈತಿಕತೆಯೇ ಇಲ್ಲದ ನಾಸ್ತಿಕ ದರ್ಶನಾವಾಗಿದೆ. ನಾಸ್ತಿಕಧರ್ಮಗಳಲ್ಲಿ ಬೌದ್ಧ ಮತ್ತು ಜೈನ ಧರ್ಮಗಳ ಸಾಲಿಗೆ ಚಾರ್ವಾಕರ ದರ್ಶನವನ್ನು ಸರಿಸಮಾನವಾಗಿ ನೋಡಲಾಗದು ಏಕೆಂದರೆ ಶೀಲಕ್ಕೆ ಮತ್ತು ಚಾರಿತ್ರ್ಯಕ್ಕೆ ಜೈನಬೌದ್ಧಾದಿದರ್ಶನಗಳು ಎಷ್ಟು ಪ್ರಾಮುಖ್ಯತೆಯನ್ನು ನೀಡುತ್ತವೆ ಎಂದರೆ ಸನಾತನಧರ್ಮಕ್ಕಿಂತಲೂ ಮುಂದುವರೆದುದನ್ನು ನಾವು ಕಾಣುತ್ತೇವೆ. ಆದರೆ ಚಾರ್ವಾಕನ ವಾದವು ಅನೈತಿಕತೆಯನ್ನು ಒಂದು ದರ್ಶನವಾಗಿ ಪ್ರಚಾರವಂತಹ ಹೇಯವಾದ ಮಾರ್ಗವಾಗಿದೆ. ಹೇಯವೆಂದರೆ ತ್ಯಾಜ್ಯವೆಂಬುದಿಲ್ಲಿ ಅಭಿಪ್ರಾಯ. ಹೀಗಾಗಿ ನಾಸ್ತಿಕದರ್ಶನದಲ್ಲಿ ಎರಡು ವಿಧ ಒಂದು ನೈತಿಕತೆಯನ್ನು ಸಾರುವ ನಾಸ್ತಿಕಧರ್ಮ ಎರಡನೆಯದು ಅನೈತಿಕತೆಯನ್ನು ಸಾರುವ ನಾಸ್ತಿಕಧರ್ಮ. ಚಾರ್ವಾಕರ ಧರ್ಮವನ್ನು ಎರಡನೆಯ ವಿಧದಲ್ಲಿ ಸೇರಿಸಲು ಯೋಗ್ಯವಾದುದು. ಈ ದರ್ಶನದ ತಿರುಳ ರೂಪವಾಗಿ ಚಾರ್ವಾಕರ ಈ ಶ್ಲೋಕವನ್ನು ನೋಡೋಣ

ಯಾವಜ್ಜೀವೇತ್ ಸುಖಂ ಜೀವೇತ್ ಋಣಂ ಕೃತ್ವಾ ಘೃತಂ ಪಿಬೇತ್ ।
ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ ? ॥

ಎಂಬುದು ಚಾರ್ವಾಕರ ಸಿದ್ಧಾಂತ ಸಾರ. ಇದರ ಅರ್ಥ ಎಲ್ಲಿಯವರೆಗೆ ಬದುಕುವೆಯೊ ಅಲ್ಲಿಯವರೆಗೆ ಸುಖವಾಗಿ ಬಾಳು. ಸಾಲವನ್ನಾದರೂ ಮಾಡಿ ತುಪ್ಪದ ಊಟವನ್ನು ಮಾಡು. ಈ ರೀತಿಯ ತತ್ವವಾಕ್ಯಗಳನ್ನೊತ್ತ ಚಾರ್ವಾಕದರ್ಶನವು ನಾಸ್ತಿಕದರ್ಶನಗಳಲ್ಲಿ ನೈತಿಕತೆಯನ್ನೂ ಮೀರಿದ ತತ್ವದರ್ಶನಾಗಿವೆ.

ಪುನರ್ಜನ್ಮದ ಬಗ್ಗೆ ಇವರ ಅಭಿಪ್ರಾಯ-

ನೈವ ಸ್ವರ್ಗೋ ನಾಪವರ್ಗೋ ವಾ ನೈವಾಽ ತ್ಮಾ ಪಾರಲೌಕಿಕಃ ।
ನೈವ ವಾರ್ಣಾಶ್ರಮಾದೀನಾಂ ಕ್ರಿಯಾಶ್ಚ ಫಲದಾಯಿಕಾಃ ॥
ಗಚ್ಛತಾಮಿಹ ಜನ್ತೂನಾಂ ವ್ಯರ್ಥಂ ಪಾಥೇಯಕಲ್ಪನಮ್ ।
ಗೇಹಸ್ಥ ಕೃತಶ್ರಾದ್ಧೇನ ಪಥಿತೃಪ್ತಿರವಾರಿತಾ ॥
ಯದಿ ಗಚ್ಛೇತ್ ಪರಂ ಲೋಕಂ ದೇಹಾದೇಹವಿನಿರ್ಗತಃ ।
ಕಸ್ಮಾದ್ಭೂಯೋ ನ ಚಾಯಾತಿ ಬಂಧುಸ್ನೇಹಸಮಾಕುಲಃ ।

ಹೀಗೆ ಚಾರ್ವಾಕನು ತನ್ನ ವಾದವನ್ನು ಮುಂದುವರೆಸುತ್ತಾನೆ. ಸಾರಾಂಶವಾಗಿ ನಾವು ಚಾರ್ವಾಕನ ವಾದವನ್ನು ಹೀಗೆ ತಿಳಿಯಬಹುದು. ವಾರ್ವಾಕನು ಶಬ್ದಪ್ರಮಾಣವನ್ನು ಸಾರಾಸಗಟಾಗಿ ತಳ್ಳಿಹಾಕುತ್ತಾನೆ. ಶಬ್ದಪ್ರಮಾಣವೆಂದರೆ ವೇದ ಮತ್ತು ಧರ್ಮಶಾಸ್ರಗಳ ಪ್ರಮಾಣ. ಈ ಯಾವುದೇ ಶಾಸ್ತ್ರಗಳ ಪ್ರಮಾಣವನ್ನು

ಅಂಗೀಕರಿಸದೆಯೆ ತನ್ನದೇ ಆದ ವಾದವನ್ನು ಮಂಡಿಸುವ ಈತ ನೈತಿಕತೆಯ ಶೂನ್ಯತೆಯೆ ಪ್ರಪಂಚ ಆದ್ದರಿಂದ ಯಾರೂ ಶಾಶ್ವತವಲ್ಲದ ಜಗತ್ತಿನಲ್ಲಿ ಕರ್ಮಫಲಕ್ಕೆ ಅಂಜಿ ನೈತಿಕತೆಗೆ ಕಟ್ಟುಬಿದ್ದು ಕೆಲಸ ಮಾಡಬೇಕಾಗಿಲ್ಲ. ನಿನಗೇನು ಅನಿಸಿತ್ತದೆಯೋ ಅದೆಲ್ಲವನ್ನು ನೀನು ಮಾಡು ಎಂದು ಜನಸಾಮಾನ್ಯರಿಗೆ ಹೇಳಿದರೆ ಸಮಾಜದ ಸಾಸ್ಥ್ಯ ಹಾಳಾಗದೇ ಇರುವುದರಲ್ಲಿ ಸಂದೇಹವೇ ಇಲ್ಲ.

ಜೈನಬೌದ್ಧಧರ್ಮಗಳೂ ನಾಸ್ತಿಕಧರ್ಮವೇ ಆಗಿದ್ದರೂ ನೈತಿಕತೆಗೆ ಅಪಾರವಾದ ಇಂಬು ನೀಡಿ ಸಾಮಾಜಿಕಸಾಸ್ಥ್ಯವನ್ನು ಕಾಪಾಡುವ ಸನಾತನ ಕರ್ಮಸಿದ್ಧಾಂತವನ್ನೇ ಕಿಂಚಿತ್ ಮಾರ್ಪಾಡಿನೊಂದಿಗೆ ಸ್ವೀಕರಿಸುದರು.

ಉಪಸಂಹಾರಃ

ಪ್ರತಿಕ್ಷಣವೂ ನಾವು ಬೀಜವನ್ನು ಬಿತ್ತುತ್ತೇವೆ. ಒಳ್ಳೆಯದು ಅಥವಾ ಕೆಟ್ಟದ್ದು ಯಾವುದಾದರೂ ಆಲೋಚನೆಗಳಾಗಿಯೋ ಮಾತುಗಳಲ್ಲಾಗಿಯೋ ಅಥವಾ ಕೃತಿಗಳಲಾಗಿಯೊ ಹೀಗೆ ನಾವು ಮಾಡುವ ಪ್ರತಿಯೊಂದು ಕಾರ್ಯವೂ ಕರ್ಮಫಲವನ್ನು ನೀಡಲು ಯೋಗ್ಯವಾದ ಬೀಜಗಳೇ ಸರಿ ಹೀಗೆಂದು ನನ್ನ ಪೂಜ್ಯಗುರುಗಳಾದ ಆಚಾರ್ಯ ಪ್ರದ್ಯುಮ್ನರು ಹೇಳುತ್ತಿದ್ದರು. ಹೀಗಾಗಿ ನಮ್ಮ ಪ್ರಯೊಂದು ವಿಚಾರ ಜಾಗ್ರತೆಯಿಂದ ಮತ್ತು ಅಪ್ರಮತ್ತರಾಗಿ ಮಾಡುವುದು ಒಳಿತು. ಏಕೆಂದರೆ ಕರ್ಮದ ಫಲದಬಗ್ಗೆ ಜೀವಾತ್ಮನ ನಿಯಂತ್ರಣವ್ವು ದಿಲ್ಲ. ಗೀತೆಯಲ್ಲಿಯೂ ಹೇಳಿದಂತೆ ಕರ್ಮಾಣ್ಯೇವಾಧಿಕಾರಸ್ತೇ.. ಅಂದರೆ ಕರ್ಮದಲ್ಲಿ ಮಾತ್ರ ನಿನಗೆ ಅಧಿಕಾರ ಫಲದಲ್ಲಿಲ್ಲ ಎಂಬುದು ಆದ್ದರಿಂದ ಕರ್ಮವನ್ನು ಕಾಮಕ್ರೊಧಾದಿಗಳರಹಿತವಾಗಿ ದ್ವೇಷ ಅಸೂಯೆ ಮುಕ್ತನಾಗಿ ಕರ್ಮಗಳನ್ನು ಮಾಡುವುದೇ ಸರಿ ಇಲ್ಲವಾದರೆ ಕರ್ಮಫಲ ದೊರೆತಾಗ ದುಃಖದಾಯಕವಾಗಿರುತ್ತದೆ. ಎಲ್ಲರಿಗೂ ಭಗವಂತನು ಕರ್ಮದ ಫಲವನ್ನು ಕಿಂಚಿತ್ ಅಧಿಕವಾಗಿಯೇ ಕೊಡುತ್ತಾನೆ ಒಳ್ಳೆಯದಾದರೂ ಕೆಟ್ಟದ್ದಾದರೂ ಹೀಗೆ ಅನುಭವಿಗಳು ಹೇಳುತ್ತಾರೆ. ಆದ್ದರಿಂದ ಕರ್ಮಗಳನ್ನು ಮಾಡುವಾಗ ಸಾವದಾನದಿಂದ ಸಮಾನಮನಸ್ಕರಾಗಿ ಶುದ್ಧಚಿತಾಂತಃಕರಣಯುಕ್ತರಾಗಿ ಮಾಡಿ ಶುಭಫಲಗಳನ್ನೇ ನೀಡುವ ಕರ್ಮಗಳನ್ನು ಮಾಡಲು ಜಗತ್ತಿನ ಎಲ್ಲರೂ ಸಂಕಲ್ಪ ಮಾಡಿದರೆ ಈ ಧರೆಯೇ ಸ್ವರ್ಗತುಲ್ಯವಾದೀತು.

> ಯಥಾ ಧೇನುಸಹಸ್ರೇಷು ವತ್ಸೋ ವಿಂದತಿ ಮಾತರಮ್ ।
> ಏವಂ ಪೂರ್ವ ಕೃತಂ ಕರ್ಮ ಕರ್ತಾರಮನುಗಚ್ಛತಿ ॥ ಮಹಾಭಾರತಂ

ಪರಾಮರ್ಶನ ಗ್ರಂಥಗಳು

ಮೂಲ ರಾಮಾಯಣಮ್ ಚೌಖಂಭಾ ಸುರಭಾರತೀ ಪ್ರಕಾಶನಮ್ ವಾರಾಣಸೀ
ಮಹಾಭಾರತ ಸಂಪಾದಕರು ೦ಣಊಡಿ ಷಟಿಚಿಟಃಣಙಇ
ಶ್ರೀಮದ್ಭಗವದ್ಗೀತಾ ಗೀತಾ ಪ್ರೆಸ್ ಗೋರಖ್ ಪುರ್

ಸರ್ವದರ್ಶನ ಸಂಗ್ರಹಃ ಪ್ರಾಚ್ಯ ವಿದ್ಯಾ ಸಂಶೋಧನಾ ಮಂದಿರ ಮುಂಬೈ ೧೯೨೪

ನ್ಯಾಯಮಂಜರೀ ಜಯಂತ ಭಟ್ಟ, ಚೌಖಂಬ ಪ್ರಕಾಶನಮ್ ೧೯೭೧ ಸಂಪಾದನಂ ಸೂರ್ಯ ನಾರಾಯಣ ಶುಕ್ಲ

ಮನುಸ್ಮೃತಿ ಚೌಖಂಭಾ ಸುರಭರತೀ ಪ್ರಕಾಶನಮ್ ವಾರಾಣಸೀ

ಈಶಾವಾಸ್ಯೋಪನಿಶತ್ ಗೀತಾ ಪ್ರೆಸ್ ಪಬ್ಲಿಕಶನ್ ಗೊರಖ ಪುರ್

# ೮. ಶಿವತತ್ವರತ್ನಾಕರದಲ್ಲಿನ ಅಲಂಕಾರ ವಿಚಾರ

**Bheemanaik S.**
Assistant Professor, Department of Alankarasahstra, Karnataka Samskrit University
Pampamahakavi Road, Chamarajpete, Bangalurlu.

**ಪೀಠಿಕೆ**

ಸಂಸ್ಕೃತಭಾಷೆ ಅತೀ ಪ್ರಾಚೀನವಾದದ್ದು ಅದರಲ್ಲಿರುವ ಸಾಹಿತ್ಯ ಪ್ರಕಾರಗಳಲ್ಲಿ ಋಗ್ವೇದ ಸಂಹಿತೆಯ ವಿಶ್ವದಲ್ಲಿಯೇ ಆದಿ ಗ್ರಂಥವಾಗಿದೆ ಎಂದು ವಿದ್ವಾಂಸರು ಮುಕ್ತಕಂಠದಿಂದ ಸಾರಿರುವ. ಈ ಸಾಹಿತ್ಯ ಪ್ರಕಾರವು ಕವಿಗಳಿಗೆ ಪ್ರೇರಣೆಯಾಗಿದೆನ್ನಬಹುದು. ಕವಿಯು ತನ್ನೆಲ್ಲಾ ಭಾವನೆಗಳಿಗೆ ಸೌಂದರ್ಯವನ್ನು ತುಂಬಿ ಕಾವ್ಯ ರಚನೆ ಮಾಡಿದ್ದಾನೆ. ಈ ಸಾಹಿತ್ಯದಲ್ಲಿ ಸೌಂದರ್ಯಗಳ ಅಂಶಗಳನ್ನು ಸಹೃದಯನು ಪರಿಶೀಲಿಸಿ ತಾನು ಕವಿಯಾಗುತ್ತಿದ್ದನು. ಇಂತಹ ಕವಿಗಳ ಕೃತಿಗಳಲ್ಲಿ ಅಡಗಿರುವ ಚಮತ್ಕಾರಗಳನ್ನು ಪ್ರತ್ಯೇಕಿಸಿ ಚಿಂತಿಸಿ ಪರಿಶೀಲನೆ ಮಾಡುವ ಸಲುವಾಗಿಯೇ ಅಲಂಕಾರ ಶಾಸ್ತ್ರ ಉದಯವಾಯಿತು.

ಅಲಂಕಾರ ಶಬ್ಧಕ್ಕೆ ಯ್ಕೊಧಿಡಿಶ್ಯೆ ಂಟ್ಟೆ ಔ ೦ಿƒ¡ಿಗ ಮನುಷ್ಯನು ಸೌಂದರ್ಯಾಭಿವೃದ್ಧಿ ಮಾಡಿಕೊಳ್ಳುತ್ತಾನೆಯೋ ಹಾಗೆಯೇ ಒಂದು ಕಾವ್ಯವು ಉಪಮಾದಿ ಅಲಂಕಾರಗಳಿಂದ ಹೆಚ್ಚಿನ ಶೋಭೆಯನ್ನು ಪಡೆಯುತ್ತದೆ. ಕಾವ್ಯದಲ್ಲಿ ರಮಣೀಯತೆ, ಸೌಂದರ್ಯ, ಚಾರುತ್ವವೆಂಬುದು ಏನೇನಿದೆಯೋ ಅವೆಲ್ಲಾ ಅಲಂಕಾರವೇ ಆಗಿದೆ. ಬಾಮಹನು ಕಾವ್ಯ ಲಕ್ಷಣ, ಸ್ವರೂಪ, ಗುಣ ರೀತಿ ಇತ್ಯಾದಿ ವಿಷಯಗಳನ್ನು ಪ್ರಸ್ತಾಪಿಸಿದ್ದರೂ ಅವನ ಒಲವು ಅಲಂಕಾರಗಳ ಕಡೆಗೆ " ನ ಕಾಂತಮಪಿ ನಿರ್ಭೂಷಂ ವಿಬಾತಿ ವನಿತಾ ಮುಖಮ್" ತರುಣಿಯ ಮುಖವು ರಮಣೀಯವಾಗಿದ್ದರೂ ಅಲಂಕಾರಗಳಿಲ್ಲದೆ ಶೋಭಿಸುವುದಿಲ್ಲ ಎಂಬ ಮಾತು ಅವನು ಕಾವ್ಯಕ್ಕೆ ಅಲಂಕಾರಗಳು ಅನಿವಾರ್ಯವೆಂದು ಭಾವಿಸಿದ್ದಾನೆ.

ಕಾವ್ಯಕ್ಕೆ ಶಬ್ಧ ಮತ್ತು ಅರ್ಥಗಳೇ ಶರೀರ. ರಸವೇ ಆತ್ಮ ಎಂಬುವುದು ಅಲಂಕಾರಿಕರ ಅಭಿಪ್ರಾಯ. ಕೆಲವು ವಿದ್ವಾಂಸರು "ವಾಕ್ಯಂ ಕಾವ್ಯಂ" ಎಂದು ಹೇಳುವರು ಮತ್ತೆ ಕೆಲವರು "ಶಬ್ಧಃ ಕಾವ್ಯಂ" ಎನ್ನುವರು ಮತ್ತೆ ಕೆಲವರು " ಶಬ್ಧಾರ್ಥೌ ಕಾವ್ಯಂ" ಎಂದು ಮುಂತಾಗಿ ಕಾವ್ಯಾ ಲಕ್ಷಣವನ್ನು ಹೇಳುವರು. ಕಾವ್ಯಯ ರಚನೆ ಶಬ್ಧ ಮತ್ತು ಅರ್ಥಗಳಿಗೆ ಚಮತ್ಕಾರ ನೀಡುವುದೇ ಅಲಂಕಾರ. ಕಾವ್ಯದಲ್ಲಿ ಸೌಂದರ್ಯವೇ ಮುಖ್ಯ ಆಕರ್ಷಣೆ ಎಂಬುದನ್ನು ಸಾಮಾನ್ಯವಾಗಿ ನೋಡಬಹುದು. ಅಲಂಕಾರ ಪದಕ್ಕೆ ನಾಲ್ಕು ರೀತಿಯ ವಿವರಣೆಗಳನ್ನು ನೋಡಬಹುದು.

೧. 'ಅಲಂಕಾರೋತಿ ಕಾವ್ಯ ಶರೀರಂ ಇತಿ ಅಲಂಕಾರಃ' ಯಾವುದನ್ನು ಕಾವ್ಯ ಶರೀರವಾದ ಶಬ್ದಾರ್ಥಗಳನ್ನು ಅಲಂಕರಿಸಲ್ಪಡುತ್ತದೆಯೋ ಅದು ಅಲಂಕಾರ.

೨. 'ಅಲಂಕಾರೋತಿ ಕಾವ್ಯ ಶರೀರಂ ಅನೇನ ಇತ್ಯಾಲಂಕಾರ' ಯಾವ ಸಾದನದ ಮುಕಾಂತರ ಕಾವ್ಯಾ ಶರೀರವಾದ ಶಬ್ಧಾರ್ಥಗಳು ಅಲಂಕರಿಸಲ್ಪಡುತ್ತದೆಯೋ ಅದು ಅಲಂಕಾರ.

೩. 'ಅಲಂಕ್ರಿಯತೆ ಇತಿ ಅಲಂಕಾರಃ' ಅಲಂಕರಿಸಲ್ಪಡುವುದೇ ಅಲಂಕಾರ ಎನಿಸುತ್ತದೆ.

೪. 'ಅಲಂಕರಣಂ ಅಲಂಕಾರಹ' ಅಲಂಕರಿಸುವಿಕೆ ಅಲಂಕಾರವೆನಿಸುತ್ತದೆ. ಈ ವ್ಯುತ್ಪತ್ತಿಗಳಿಂದ ಶಬ್ಧಾರ್ಥಗಳು ಅಲಂಕಾರವಾಗುತ್ತವೆ.

ಸಂಸ್ಕೃತ ಸಾಹಿತ್ಯದಲ್ಲಿ ನಾಟಕ, ಕಥೆ, ಕಾದಂಬರಿ, ಮಹಾ'ಕಾವ್ಯ, ವಿಶ್ವಕೋಶಗಳು ತಮ್ಮದೇ ಆದ ಶೈಲಿಯಲ್ಲಿ ಬೆಳಕು ಕಂಡವು. ಮಹಾಕಾವ್ಯ ಮತ್ತು ವಿಶ್ವಕೋಶಗಳಲ್ಲಿ ಕಂಡುಬರುವ ಅಲಂಕಾರಗಳೆಂದರೆ.

**ಮಹಾ ಕಾವ್ಯಗಳಲ್ಲಿನ ಅಲಂಕಾರಗಳು**

'ವಾಗರ್ಥವೀವ ಸಂಪೃತ್ಕೌ ವಾಗರ್ಥ ಪ್ರತಿಪತ್ತಯೆ ।

ಜಗತಃ ಪಿತರೌ ವಂದೇ ಪಾರ್ವತಿ ಪರಮೇಶ್ವರೌ ॥ (ರಘುವಂಶ)

ಮಹಾಕವಿ ಕಾಳಿದಾಸನ ಈ ಮೇಲಿನ ಪದ್ಯ ಭಾಗದಲ್ಲಿನ ಉಪಮಾಲಾಂಕಾರವು ಶಿವ ಪಾರ್ವತಿಯರ ಸಹಚಾರ್ಯವನ್ನು ಶಬ್ಧ ಮತ್ತು ಅರ್ಥಕ್ಕೆ ಹೋಲಿಸುವ ಅತಿ ಸುಂದರ ಕಲ್ಪನೆಯನ್ನು ಹೊಂದಿದೆ.

'ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ।

ತ್ರೈಲೋಕ್ಯನಗರಾರಂಭಮೂಲಸ್ತುಂಭಯ ಶಾಂಭವೇ ॥ (ಹರ್ಷ ಚರಿತೆ)

ಹರ್ಷ ಚರಿತೆಯನ್ನು ಬಾಣ ಭಟ್ಟನು ಶಂಭುವನ್ನು ಮೂರು ಲೋಕಗಳ ಆದಿಗೆ ಮೂಲ ಸ್ಥಂಭವಾಗಿದ್ದಾನೆ ಎಂದು ವರ್ಣಿಸುವಲ್ಲಿ ರೂಪ ಅಲಂಕಾರವನ್ನು ಒಳಗೊಂಡಿದೆ.

**ವಿಶ್ವಕೋಶ**

ಸಂಸ್ಕೃತ ಸಾಹಿತ್ಯ ಪ್ರಕಾರಗಳಲ್ಲಿ ಕೋಶಗಳು ಪ್ರಮುಖ ಪಾತ್ರವನ್ನು ವಹಿಸುತ್ತದೆ. 'ದೇಶ ಸುತ್ತು ಕೋಶ ಓದು' ಎಂಬ ನಾಣ್ಣುಡಿಯಂತೆ ದೇಶವನ್ನು ಸುತ್ತಿದರೆ ಆ ದೇಶದ ಸಾಂಸ್ಕೃತಿ, ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಅರಿವಾಗುತ್ತದೆ. ಕೋಶಗಳನ್ನು ಓದಿದರೆ ಜೀವನಕ್ಕೆ ಉಪಯುಕ್ತವಾದ ಅನೇಕ ವಿಚಾರಗಳ ಜ್ಞಾನ ಉಂಟಾಗುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ನಾಟಕ, ಕಥೆ, ಕಾದಂಬರಿ, ಮಹಾಕಾವ್ಯ, ವಿಶ್ವಕೋಶಗಳು ತಮ್ಮದೇ ಆದ ಶೈಲಿಯಲ್ಲಿ ಬೆಳಕು ಕಂಡವು. ೩ನೇ ಸೋಮೇಶ್ವರನ ಮಾನಸೋಲ್ಲಾಸ ವಿಶ್ವಕೋಶ, ಕೆಳದಿಯ ಬಸಪ್ಪನಾಯಕನ "ಶಿವತತ್ವ ರತ್ನಾಕರ" ವಿಶ್ವಕೋಶಗಳು ಜೀವನ ಶೈಲಿ, ರಾಜರ ಆಡಳಿತ, ಸಂಸ್ಕೃತಿ, ರಾಜಕೀಯ ವಿಷಯ,ಕಲೆ, ಸಾಹಿತ್ಯ, ಗಜಶಾಸ್ತ್ರ, ಯೋಗಶಾಸ್ತ್ರ, ಪಕ್ಷಿಶಾಸ್ತ್ರ ಎಲ್ಲಾ ವಿಷಯಗಳು ಒಳಗೊಂಡಂತಹ ಒಂದು ವಿಶ್ವಕೋಶವಾಗಿದೆ.

ಕೆಳದಿಯ ಬಸಪ್ಪನಾಯಕನ ಶಿವತತ್ವ ರತ್ನಾಕರ ವಿಶ್ವಕೋಶವು ೯ ಕಲ್ಲೋಲ ೧೦೮ ತರಂಗದ ಒಂದು ಬೃಹತ್ ವಿಶ್ವ ಕೋಶವಾಗಿದೆ. ಈ ವಿಶ್ವಕೋಶದಲ್ಲಿ ೭ನೇ ಕಲ್ಲೋಲದ ೫ನೇ ತರಂಗದಲ್ಲಿ ೭೨ ಅಲಂಕಾರಗಳನ್ನು ಪ್ರಸ್ತಾಪಿಸಿ ಪ್ರಾಚೀನತಮವಾದ ಭರತನ ನಾಟ್ಯಶಾಸ್ತ್ರದಲ್ಲಿ ನಾಲ್ಕು ಸ್ವತಂತ್ರ ಅಲಂಕಾರಗಳನ್ನು ಮಾತ್ರವೇ ಉಪಮಾ, ರೂಪಕ, ದೀಪಕ ಮತ್ತು ಯಮಕ ಇವೇ ಆ ಅಲಂಕಾರಗಳು, ಭಾಮಹನ ಕಾಲಕ್ಕೆ ಸುಮಾರು ೩೮ ಅಲಂಕಾರಗಳು ಅಸ್ತಿತ್ವದಲ್ಲಿದ್ದು ಭರತ ಭಾಮಹರ ಮಧ್ಯದ ೫-೬ ಶತಮಾನಗಳ ಅಂತರದಲ್ಲಿ ಅನೇಕ ಅಲಂಕಾರಗಳು ಬಂದು ಹೋಗಿ ದಂಡಿಯು ೩೭ ಅಲಂಕಾರಗಳನ್ನು, ವಾಮನರು ೩೧ ಮತ್ತು ಉದ್ಭಟನು ೪೧ ಅಲಂಕಾರಗಳನ್ನು ಚರ್ಚಿಸಿದ್ದಾನೆ. ಇಷ್ಟೇ ಅಲ್ಲದೇ ಒಬ್ಬರು ಹೇಳದೇ ಬಿಟ್ಟಂತಹ ಅಲಂಕಾರಗಳನ್ನು ಬೇರೊಬ್ಬರು ಅಂಗೀಕರಿಸಿರುವುದರಿಂದ ಒಟ್ಟು ಅಲಂಕಾರಗಳ ಸಂಖ್ಯೆ ಐವತ್ತನ್ನು ಮೀರುತ್ತದೆ. ಹೀಗೆ ಕ್ರಮವಾಗಿ ವಿಕಸಗೊಂಡ ಅಲಂಕಾರಗಳು ಸಂಖ್ಯೆ ಮಮ್ಮಟನ ಕಾಲಕ್ಕೆ ಸುಮಾರು ಅರವತ್ತರ ಹತ್ತಿರಕ್ಕೆ ಬರುತ್ತದೆ. ಇವರ ಸಮಕಾಲೀನನಾದ ಬಸವಪ್ಪನಾಯಕನು ಶಿವತತ್ವ ರತ್ನಾಕರದಲ್ಲಿ ೭ನೇ ಕಲ್ಲೋಲದ ೫ನೇ ರತಂಗದಲ್ಲಿ ೭೨ ಅಲಂಕಾರಗಳನ್ನು ಪ್ರಸ್ತಾಪಿಸಿದ್ದಾನೆ. ಇವುಗಳಲ್ಲಿ ಅನುಪ್ರಾಸ, ಯಮಕ, ಖಡ್ಗಬಂಧ, ಮುರುಜಬಂಧ ಒಟ್ಟು ನಾಲ್ಕು ಶಬ್ಧಾಲಂಕಾರಗಳು ಮಿಕ್ಕ ೬೮ ಅರ್ಥಾಲಂಕಾರಗಳು, ಉಪಮಾಲಂಕಾರ, ಅನ್ವಯಾಲಂಕಾರ, ಉಪಮೇಯೋಪಮಾ, ಸ್ಮರಣಾಲಂಕಾರ, ರೂಪಕ, ಪರಿಣಾಮ, ಸಂದೇಹ, ಬ್ರಾಂತಿಮಧಾಲಂಕಾರ, ಅಪಹ್ನುತಿ, ಉಲ್ಲೇಖ, ಉತ್ಪ್ರೇಕ್ಷೆ, ಅತಿಶಯೋಕ್ತಿ,

ಸಹೋಕ್ತಿ, ವಿನೋಕ್ತಿ, ಸಮಸೋಕ್ತಿ, ವಕ್ರೋಕ್ತಿ, ಸ್ವಭಾವೋಕ್ತಿ, ವ್ಯಂಜ್ಯೋಕ್ತಿ, ಮಿಲನ, ಸಾಮಾನ್ಯ, ತದ್ಗುಣ, ಅತದ್ಗುಣ, ಅದಿಕ, ವಿರೋದ, ವಿಭಾವನ, ಅಸಂಗತಿ, ವಿಚಿತ್ರ, ವಿಷ್ಮ, ಸಮಸೋಕ್ತಿ, ದೀಪಕ, ಪ್ರತಿಪ, ಕಾವ್ಯಲಿಂಗ, ಯಥಾಸಂಖ್ಯೆ, ಹೀಗೆ ಅರ್ಥಾಲಂಕಾರವನ್ನು ಬಸಪ್ಪನಾಯಕನು ತನ್ನ ವಿಶ್ವಕೋಶದಲ್ಲಿ ನಿರುಪಿತವಾಗಿದೆ.

**ಶಬ್ಧಾಲಂಕಾರಗಳು**

ಪರಿವೃತ್ತಿ ಅಹಃ ಬದಲಾವಣೆಯನ್ನು ಸಹಿಸದ ಶಬ್ಧಗಳನ್ನು ಆಶ್ರಯಿಸಿರುವ ಅಲಂಕಾರಗಳು ಶಬ್ಧಾಲಂಕಾರಗಳು, ಅರ್ಥ ಚಮತ್ಕಾರಿಯಾದ ಶಬ್ಧವನ್ನು ಅದೇ ಅರ್ಥದ ಬೇರೆ ಪದದಿಂದ ಬದಲಾಯಿಸಿದಾಗ ಚಮತ್ಕಾರವು ಅದೃಶ್ಯವಾಗುವಂತಿದ್ದರೆ. ಅದು ಶಬ್ಧಾಲಂಕಾರವಾಗುತ್ತದೆ.

ಅನುಪ್ರಾಸ, ಯಮಕ, ಖಡ್ಗಬಂಧ, ಮುರುಜಬಂಧ, ಶಬ್ಧಾಲಂಕಾರಗಳಾಗಿರುತ್ತವೆ.

**ಪದ್ಮಚಿತ್ರ ಲಕ್ಷಣ**

ಣಿೃೀಶಿಡಿೆಶಿಡ್ರಿ್ಬ್ರ ಛಖೆ೦್ಲ್ಖಿಙಜೆಸಿಛಡ್ರೆ ।

ಥೆಣ್ಭ್ಬೀಬೆಗೆಇಡಿೀಣ್ಭ್ಬಿೀಟಿ ಟೆಬ್ರೊ ಥಙೀ್ಹ್ಬೆಬ್ಲುೀಛಡ್ರೆ ।

ಎಂಟು ಕಮಲದ ದಳಗಳು ಒಂದೇ ಕೇಂದ್ರಕ್ಕೆ ಸೇರಿದಂತೆ ಹರಡಿಕೊಂಡಾಗ ಮಧ್ಯದ ಸಂಧಿ ಭಾಗದಲ್ಲಿ ಒಂದು ಅಕ್ಷರವು ಇದ್ದು ದಳಗಳ ಕೊನೆಯಲ್ಲಿ ಎಂಟು ಅಕ್ಷರಗಳು ಇರುತ್ತವೆ. ಒಂದನೆಯ ದಳದ ಕೊನೆಯಿಂದ ಆರಂಭಿಸಿ ಮೊದಲನೆಯ ಅಕ್ಷರ, ಕೇಂದ್ರವು ಎರಡನೆಯ ಅಕ್ಷರ ಮೂರನೆಯ ಅಕ್ಷರ ಈ ರೀತಿ ಹದಿನಾರು ಅಕ್ಷರಗಳ ಪದ್ಯ.

೦ೀಥ್ಯೆ ಟ್ಷೆ೦ೀಥೆಗಗಥೆ೦ೀತಿಫ್ೃಣೆ೦ೀ ।

೦ೃಣೆೊಡೆ ದ್ಜೆ೦ೀಣೆಖ್ಯ ಖ್ಭಾೆ೦ೀ ಠ್ಯೆ ಥೆ೦ೀ ॥

**ಗೋಮೂತ್ರ ಚಿತ್ರಲಕ್ಷಣ**

ೃತಿಡಿೀಚಿೆಟಡಿೀ್ಯಟಡಿೆಗ್ಯಚ್ಖೆ೦ೆಚಿ್ಭಡ್ಝಿಭೃಶಿಟೆಖ್ಭಶಿಡಿೀ್ಭ ।

ಅಡ್ಡ ಅಡ್ಡಲಾಗಿ ಮತ್ತು ವಕ್ರ ವಕ್ರವಾಗಿ ಒಂದು ಗೆರೆ ಮೂಡುವಂತೆ ದ್ವಿಪದಿಯಲ್ಲಿ ಶ್ಲೋಕವನ್ನು ರಚಿಸಿದರೆ ಅದನ್ನು ಗೋಮೂತ್ರಿಕಾ ಎಂದು ಕರೆಯುತ್ತೇವೆ.

ಡ್ಜಖುಟೀ್ಯ ಡ್ಕಖಾೆನ್ಭಿೀಡೆಟೆ_¡ೆಥಙ್ಭೆ ಜೆಡ್ಭೆಖಙೆಡ್ರೆ ।

ಡೆಖ್ಯಟೀ್ಯ ಡ್ಕೆಖಯೆೊನ್ಭಿೆಡೆಟೆ_¡ೆಡಿೀಡ್ಜ್ಭೊ ಖ್ಭು॥

**ಸರ್ವತೋಭದ್ರ**

ಣ್ಯೆೀಟ್ರ್ಬ್ಯಟೆ ಛಿ ಶಿೆ೦ಡಿ್ರೊ ಥೆಣ್ರೀಣೆೀ ಥೆಣ್ೀಖಚಿಚಿ್ರೈ ।

ಇಬ್ರ್ಯ ಥೆಣೆ್ಯೆ೦ೆಖ್ಭಾ ಖ್ಭತಿಛಗ್ರಾ ೃಖ್ಭಾ ೦ೆಣ್ಬೆ ।

ಪದಬಂಧದಲ್ಲಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ, ಕೆಳಗಿನಿಂದ ಮೇಲಕ್ಕೆ, ಮೇಲಿನಿಂದ ಕೆಳಕ್ಕೆ ಯಾವ ರೀತಿ ಓದಿದರೂ ಅಕ್ಷರಗಳು ಒಂದೇ ಆಗಿರುತ್ತವೆ. ಆದ್ದರಿಂದ ಇದಕ್ಕೆ ಸರ್ವತೋಭದ್ರ ಎಂದು ಕರೆಯುತ್ತೇವೆ.

ಗಥೆಥೆ್ರಗಥೆಥೆಗಥೆಡಿಬೆನಿ ನಿಬೆಡಿಬೆ ।

ಥೆಬೆಣೆತಿ ತಿಣೆಬೆಥೆ ಗನಿತೆಥಾೆಥಾೆ ತಿನಿೆಗ॥

**ಖಡ್ಗಬಂಧ**

ಡೆಿಗೌಿಗದೆಧಿಗೆಢ್ಛರಿಢ್ಚಚ್ರೆಗೆಥೆಿಗ್ರಾಃಫ್ಝೆ ।

ಥೆಿಗೆಣಾಃಫ್ಡಿಿಣ್ಕೆಿಟೆಿತ್ತೂ ೨ಖ್ಟೆಿಃಫ್ರಾ ನಿಿಡೆ ॥

ಡೆಿಪೆಿ ಟಪಿಿಟೊ ಥೊಬೆ್ಃಮ್ಡಿೂ ಶ್ಞಿಇಿಪೆಥೊಠ್ಞೆಿಡೆ ।

ಡೆಿಟಡಿಿಇಿ ಥ್ಫೆಡೆ ಗೆಡೆಿಃೂದೊ ಢ್ಛಕಖಡಿಿಖ್ಫಡ್ಕೆಖಡ್ರೈ ॥

**ಮುರಜ ಬಂಧ**

ಥೆಗ್ಃಿ ಠೆಷ್ಟಿಗ್ರಾಠಿ ೨ಗ್ಃಿಠೆಃಿಗಾಿ ।

ಣೆಿಗ್ಃಿಠೆಷ್ಟಿಡ್ರೊಖಃಗ್ಃಿ ಠೆಷ್ಟಿಡೆಃಿ ॥

**ಚಕ್ರ ಚಿತ್ರ ಲಕ್ಷಣ**

ಛಿಪಾಿಡಿಿಗ್ಞಿಃ ಟೆಖೆಠಿಡಿೂ ಟ್ಯೆಡ್ರೂ ಟೆಿಖಶಿಢ್ಬಿಟೆ ಛಿ ॥

ಃಿಚೊ ಖ್ಞನಿಃಿಣೊ ಛಿಢ್ಞಿಛಿಬಿಡೆಣ್ಯ್ಫಮೆ್ರ ।

ಚಕ್ರದ ಅರಗಳು ನಾಲ್ಕು ಇರುವಂತೆ ಶ್ಲೋಕದಲ್ಲಿ ನಾಲ್ಕು ಪಾದಗಳಿದ್ದು ಅವನ್ನು ಬಲಭಾಗದಿಂದ ಆರಂಭಿಸಿ ನಾಲ್ಕು ಅಥವಾ ಮೂರು ಪಾದಗಳ ಅಕ್ಷರಗಳನ್ನು ಒಂದರ ಕೆಳಕ್ಕೆ ಮತ್ತೊಂದನ್ನು ಬರೆಯುತ್ತಾ ಚಕ್ರದ ಹೊರ ಆವರಣದಲ್ಲಿ ಎರಡು ಪಾದಗಳಲ್ಲಿರುವ ಅಕ್ಷರಗಳನ್ನು ರೂಪಿಸುವುದೇ ಚಿಕ್ರ ಚಿತ್ರ.

**ಪದ್ಮಬಂಧ**

ಬಾಸತೇ ಪ್ರತೀ ಬಾಸರ

ರಸಾಭಾತಾಹತಾ ವಿಭಾ ।

ಭಾವಿತಾತ್ಮ ಶುಭವದೇ

ದೇವತಾಸ ಬತ ತೇ ಸಭಾ ॥

ಎಂಟು ಕಮಲದ ಧಳಗಳು ಒಂದೇ ಕೇಂದ್ರಕ್ಕೆ ಸೇರಿದಂತೆ ಹರಡಿಕೊಂಡಾಗ ಮಧ್ಯದ ಸಂಧಿ ಭಾಗದಲ್ಲಿ ಒಂದು ಅಕ್ಷರವು ಇದ್ದು ಎಂಟು ದಳಗಳ ಕೊನೆಯಲ್ಲಿ ಎಂಟು ಅಕ್ಷರಗಳು ಇರುತ್ತವೆ. ೧ನೇ ದಳದ ಕೊನೆಯಿಂದ ಆರಂಭಿಸಿ ಮೊದಲನೇ ಅಕ್ಷರ ಕೇಂದ್ರವೂ ಎರಡನೇ ಅಕ್ಷರ ಮೂರನೇ ಅಕ್ಷರ ಈ ರೀತಿ ಹದಿನಾರು ಅಕ್ಷರಗಳ ಪದ್ಯ.

**ಅರ್ಥಾಲಂಕಾರ**

ಅರ್ಥ ಪ್ರಾಧ್ಯಾನ್ಯತೆಯನ್ನು ಹೊಂದಿ ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಅಲಂಕಾರಗಳಿಗೆ ಅರ್ಥಾಲಂಕಾರಗಳೆಂದು ಕರೆಯುತ್ತೇವೆ.

ಅಲಂಕಾರಶಾಸ್ತ್ರದ ಚರಿತ್ರಯಲ್ಲಿಯೇ ಅತ ಹೆಚ್ಚು ಪ್ರಾಚೀನ ತಮವಾದ ಅಲಂಕಾರವೆಂದರೆ ಉಪಮೇಯೋ ವೇದಗಳಲ್ಲಿ ಉಪಮಾಲಂಕಾರ ಅದರ ಅನೇಕ ಪ್ರಭೇದಗಳ ಲಕ್ಷ್ಯಗಳು ಯಥೇಚ್ಛವಾಗಿ ದೊರಕುತ್ತದೆ.

**ಉಪಮಾಲಂಕಾರ**

ಇಟೆಡೆಿಟ್ಯೆಟೆಡ್ಯೆಡಿಿಥ್ಡಿ ಚ್ಚಿಃಿ್ಯಂಪೆ: ೦ಟಿಟಣೆಡಿಿ:

ಉಪಮಾನದೊಡನೆ ಉಪಮೇಯ್ಕಕಿರುವ ಗುಣಲೇಶದ ಸಾಮ್ಯವೇ ಉಪಮಾಲಂಕಾರ.

ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರ.

**ಅನನ್ವಯ**

ಥೆ"ಡಹಿ"ಡ್ಷಟಡೆ" ಐಛಥಿ"ೖಟಡ್ಯೆಡಿ"ೖೈಟಡೆ"ಟ"ೖ

ಒಂದೇ ವಸ್ತುವಿನಲ್ಲಿ ಉಪಮೇಯತ್ವ ಮತ್ತು ಉಪಮಾನತ್ವಗಳೆರಡನ್ನು ವರ್ಣಿಸಿದರೆ ಅದು ಅನನ್ವಯ. "ಆಗಸವು ಆಗಸದಂತೆಯೇ ಇದೇ. ಸಾಗರಕ್ಕೆ ಸಾಗರವೇ ಉಪಮೆಯಾಗಿದೆ. ರಾಮಾಯಣರ ನಡುವಿನ ಯುದ್ಧವಾದರೊ ರಾಮರಾವಣರ ನಡುವಿನ ಯುದ್ಧದಂತೆಯೇ ಇದೇ" ಎಂಬಲ್ಲಿ ಆಕಾಶ, ಸಾಗರ ಮೊದಲಾವುಗಳಿಗೆ ಅವುಗಳನ್ನೇ ಉಪಮಾನವಾಗಿ ಹೇಳಿದ್ದಾರೆ. ಅನ್ಯವಸ್ತುವಿನೊಡನೆ ಸಾಮ್ಯವೇ ಅನನ್ವಯವಾಗಿದೆ.

**ವಕ್ರೋಕ್ತಿ**

ಥೆ"ಕ್ಷಹಿ"""ನಿ"ಿ"" ಣೆಧಿ"ೖನ

ಸಾದೃಶ್ಯ ಮೂಲಕವಾದ ಲಾಕ್ಷಣಿಕ ಪ್ರಯೋಗಗಳಲಅ ಅಭೇದ ಮೊದಲಾದವುಗಳನ್ನು ವರ್ಣಿಸಿದರೆ ಅದು ವಕ್ರೋಕ್ತಿ ಅಲಂಕಾರ.

ಲಕ್ಷಣಾ ಪ್ರಯೋಗಗಳನ್ನು ಅನೇಕ ರೀತಿಗಳಲ್ಲಿ ಮಾಡಬಹುದಾದರೂ ಸಾದೃಶ್ಯವನ್ನು ಆಧರಿಸಿ ಸಹೃದಯರಂಜಕವಾಗುವಂತೆ ವರ್ಣಿಸಿದರೆ ಅದನ್ನು ವಕ್ರೋಕ್ತಿ ಅಲಂಕಾರವಾಗುತ್ತದೆ.

**ಅಪಹ್ನುತಿ**

ಥೆಡ್ಯೆಟ" ಣೆಥ್ಛಟ""ಟಡಿ""ಟೆ"ಟೈ

ಸಮಾನವಾದ ವಸ್ತುವು ಇನ್ನೊಂದು ವಸ್ತುವನ್ನು ಅಪಲಾಪ ಮಾಡುವುದೇ ಅಪಹ್ನುತಿ.

ಸಮಾನವಾದ ವಸ್ತುವಿನಿಂದ ಎಂದರೆ ಉಪಮಾನದ ವಾಕ್ಯಾರ್ಥದಿಂದ ಇನ್ನೊಂದು ವಸ್ತುವನ್ನು ಎಂದರೆ ಉಪಮೇಯವನ್ನು ಮರೆಮಾಚುವುದು ಅಪಹ್ನುತಿ ಅಲಂಕಾರ.

**ಸಮಸ್ನೋಕ್ತಿ**

ಪ್ರಸ್ತುತ ವೃತ್ತಾಂತದ ವರ್ಣನೆಯನ್ನು ವಿಶೇಷಣಗಳ ಸಾಮ್ಯದಿಂದ ಅಪ್ರಸ್ತುತವಾದ ಅರ್ಥವನ್ನು ಸೂಚಿಸಿದರೆ ಅದು ಸಮಸೋಕ್ತಿ.

"ಈ ಯುವತಿಯ ಮುಖ ನೋಡು, ಚಂದ್ರನು ಅವಳನ್ನು ಚುಂಬಿಸುತ್ತಿರುವಂತೆ" ಕಾಣಿಸುತ್ತಿದೆ. ಎಂಬ ವಾಕ್ಯದಲ್ಲಿ ಪೂರ್ವ ದಿಕ್ಕಿನಲ್ಲಿ ಕೆಂಪಾಗಿದೆ. ಅದಕ್ಕೆ ಕಾರಣ ಚಂದ್ರೋದಯ ಎಂಬುದು ಅಪ್ರಸ್ತುತದ ಮೂಲಕ ಹೀಗೆ ವಿವರಿಸುವದರಿಂದ ಸಮಸೋಕ್ತಿ ಅಲಂಕಾರವಾಗುತ್ತದೆ.

**ಸಂದೇಹ**

ಇಟಡೆ"ಟ""ೖಟಡ್ಯೆಡಿ"ಥೊದೆಡಿ"ೖ ಥೊಖ್ಯಫ..:

ಚಾರುತ್ವಾತಿಶಯಕ್ಕಾಗಿ ಉಪಮಾನ ಉಪಮೇಯಗಳಲ್ಲಿ ಸಂಶಯವನ್ನು ವ್ಯಕ್ತಪಡಿಸುವುದೇ ಸಂದೇಹಾಲಂಕಾರ ಕವಿಯ ಒಪ್ಪಿಗೆಯಿಂದ ವಿಷಯ ಮತ್ತು ವಿಷಯಗಳ ನಡುವೆ ಸಾದೃಶ್ಯ ಅಥವಾ ಹೋಲಿಕೆ ಇರುತ್ತದೆ. ಅವುಗಳ ನಡುವೆ ಸಂದೇಹ ಉಂಟಾಗುವುದು ಇದು ಸಂದೇಹ ಅಲಂಕಾರ.

**ಸಸಂದೇಹ ಅಲಂಕಾರ**

ಒಂದು ವಸ್ತುವನ್ನು ಇನ್ನೊಂದು ಅಥವಾ ಮತ್ತೊಂದು ಸದೃಶವಾದ ವಸ್ತು ಎಂದು ಸಂದೇಹವನ್ನು ತಾಳುವುದೇ ಸಸಂದೇಹ.

"ಪಂಕಜಂ ವಾ ಸುಧಾಂಶುರ್ವಾ ಇತಿ ಆಸ್ಮಾಕಂ ತು ನ ನಿರ್ಣಯಃ"

ಹೆಂಡತಿಯ ಮುಖವನ್ನು ನೋಡಿದಾಗ ಇದು ಕಮಲವೋ ಅಥವಾ ಚಂದ್ರವೋ ಎಂಬ ಸಂದೇಹವುಂಟಾಗಿ ನಿರ್ಣಯಕ್ಕೆ ಬರಲು ಕಷ್ಟವಾಗುವುದೇ ಸಸಂದೇಹಾಲಂಕಾರ.

**ದೀಪಕ**

ಇಟೆಡೆ'ಟ್ಯೀಟೆಡ್ಯೆಡಿ'ಣೆ'ಐಡ್ಯಿತಿಣ್ಯೆ ಛ್'ಕಬ'ಡಿ'' ಖುಟೆಛಡ್ರೆ

ಉಪಮಾನ ಮತ್ತು ಉಪಮೇಯಗಳಿಗೆ ಸಮಾನಧರ್ಮದಿಂದಾಗಿ ಒಂದೇ ಕ್ರಿಯಾ ಪದವನ್ನು ಬಳಸಿ ವರ್ಣಿಸಿದರೆ ದೀಪಾಲಂಕಾರ.

'ಮರಿಯಾನೆಯು ಮದದಿಂದ ಕಂಗೊಳಿಸಿದರೆ ರಾಜನು ಪ್ರತಾಪದಿಂದ ಕಂಗೋಳಿಸುತ್ತಾನೆ. " ಮದೇನ ಭಾತಿ ಕಲಭಃ ಪ್ರತಾಪೇನ ಮಹೀಪತಿ" ಇಲ್ಲಿ ಪ್ರಸಕ್ತ ರಾಜನನ್ನು ಆ ಪ್ರಕೃತವಾದ ಮರಿಯಾನೆಗೆ ಹೋಲಿಸಿ ಇಬ್ಬರಲ್ಲೂ ಕಾಂತಿ ಇದೆ ಎಂದು ಒಂದೇ ಧರ್ಮವನ್ನು ಅನ್ವಯಿಸಿ ವಿವರಿಸಿದ್ದರಿಂದ ದೀಪಕಾಲಂಕಾರ.

**ತುಲ್ಯಯೋಗಿತಾ**

ಕಣ್ಣೆದೆಸ್ಯಿಟ' ಥೆ'ಡಊ''ರಿ'ಡ್ಯೆಛ್ಕ''ಬ'ಡಿ''ಯಿಚ್ಛಿ''ಟ್ಟೆಡಿರಿ''ಕಚಿ'ೀ'

ವಿಶಿಷ್ಟವಾದ ವಸ್ತುವಿನೊಡನೆ ಸಾಮ್ಯವನ್ನು ಒತ್ತಿ ಹೇಳುವುದಕ್ಕಾಗಿ ಒಂದೇ ಕಾಲದಲ್ಲಿ ಒಂದೇ ಕ್ರಿಯೆಯ ಸಹಯೋಗವನ್ನು ವರ್ಣಿಸುವುದೇ ತುಲಯಯೋಗಿತಾ ಅಲಂಕಾರ. ಚಂದ್ರನು ಉದಯಿಸುವ ಸಂದರ್ಭದಲ್ಲಿ ಕಮಲಗಳೂ, ಸ್ವಚ್ಛಂದ ವಿಹಾರಕ್ಕೆ ಅಡ್ಡಿಯಾದುದರಿಂದ ಲಂಪಟೆಯರ ವದನಗಳೂ ಸಂಕೋಚ ಹೊಂದಿವೆ ಎಂಬುದು ಉದಾ:- "ಸಂಕುಚಂತಿ ಸರೋಜಾನಿ ಸ್ವೈರಿಣೀವದನಾನಿ ಚ" ಇಲ್ಲಿ ವರ್ಣ್ಯ ಅಥವಾ ಪ್ರಕೃತ ಕಮಲ ಅವರ್ಣ್ಯ ಅಥವಾ ಅಪ್ರಕೃತ ಲಂಪಟೆಯರ ಮುಖ ಎರಡರಲ್ಲೂ ಒಂದೇ ಧರ್ಮವಾದ ಮುದುಡಿಕೊಳ್ಳುವುದು ಎಂದು ಅನ್ವಯ ಹೇಳಿದ್ದರಿಂದ ತುಲ್ಯಯೋಗಿತಾ.

**ಸಂಸೃಷ್ಟಿ**

೦'ಫ್ಟಿಛ'ಗಫಡಿ''ರ್ೂಛ'ಗಡಿ''ಕಟ'ೀರೊ ಥೊದ್ರೆಲ್ಕುಸ್ಕಿ

ಒಂದಕ್ಕಿಂತ ಹೆಚ್ಚು ಅಲಂಕಾರಗಳು ಸೇರಿ ಮತ್ತೊಂದು ಅಲಂಕಾರವು ಜನಿತವಾದರೆ ಅದು ಸಂಸೃಷ್ಟಿಯೆನಿಸುತ್ತದೆ. ಅಲಂಕಾ'ರಗಳನ್ನು ಮಿಶ್ರವಾಗಿಯಾದರೂ ಅಥವಾ ಶುದ್ಧವಾಗಿಯಾದರೂ ಪ್ರಯೋಗಿಸಬಹುದು. ಶುದ್ಧವಾಗಿ ಬಳಸುವುದೆಂದರೆ ತಿಲತಂಡುಲ ನ್ಯಾಯದಂತೆ ಅವುಗಳನ್ನು ಬೇರೆ ಬೇರೆಯಾಗಿ ಪ್ರತ್ಯೇಕ್ಷಿಸಲು ವಿಶ್ಲೇಷಿಸಬಹುದು. ಮಿಶ್ರವಾಗಿಯೆಂದರೆ ಅಲಂಕಾರಗಳನ್ನು ಪ್ರತ್ಯೇಕಿಸಲು ಅಸಾಧ್ಯವಾದಂತೆ ಸಂಯೋಜಿಸಿರುವುದು. ಹೀಗೆ ಶುದ್ಧವಾಗಿ ಮಿಶ್ರವಾಗಿಯಾಗಲೀ ಅಲಂಕಾರಗಳನ್ನು ಮಿಶ್ರಣ ಮಾಡುವುದನ್ನು ಸಂಸೃಷ್ಟಿ ಎನ್ನುತ್ತೇವೆ.

**ಉಪಸಂಹಾರ**

ಒಟ್ಟಾರೆಯಾಗಿ ಬಸಪ್ಪನಾಯಕನ ಶಿವತತ್ವರತ್ನಾಕರ ವಿಶ್ವಕೋಶದಲ್ಲಿ ಅನೇಕ ಸಂಸ್ಕೃತಿ ಅಲಂಕಾರ ಗ್ರಂಥಗಳನ್ನು ಅಭ್ಯಾಸಿಸಿ ಸಾಹಿತ್ಯ ವಿಷಯಕ್ಕೆ ಹೆಚ್ಚು ಒತ್ತನ್ನು ನೀಡಿದ್ದಾನೆ ಹಾಗೂ ಬಸಪ್ಪನಾಯಕನು ಮಗನಿಗೆ ಉಪದೇಶ ಮಾಡುವಾಗ ೭ನೇ ಕಲ್ಲೋಲ ೫ನೇ ತರಂಗದಲ್ಲಿ ಅಲಂಕಾರ ವಿಷಯವನ್ನು ಚರ್ಚಿಸಿ ಸಾಹಿತ್ಯ ವಿಷಯಕ್ಕೆ ಹೆಚ್ಚು ಒತ್ತನ್ನು ನೀಡಿದ್ದಾನೆ. ಶಬ್ದಾಲಂಕಾರ ಮತ್ತು ಅರ್ಥಾಲಂಕಾರಕ್ಕೆ ಸೇರಿದ ಸುಮಾರು ೭೨ ಅಲಂಕಾರ ಉಪಮಾ, ಅನನ್ವಯ, ಸ್ಮೃತಿ, ರೂಪಕ, ಪರಿಣಾಮ, ವಿನೋಕ್ತಿ, ಸಮಸೋಕ್ತಿ, ವಕ್ರೋಕ್ತಿ, ಅಧಿಕ, ದೀಪಕ, ದೃಷ್ಟಾಂತ, ನಿದರ್ಶನ, ಪ್ರತಿಪ, ಅನುಮಾನ, ಕಾವ್ಯಲಿಂಗ,

ಉತ್ತರಾಲಂಕಾರ, ಸಮಾದಿ, ಮಾಲಾದೀಪಕ, ಈ ರೀತಿಯಾಗಿ ಅಲಂಕಾರ ವಿಷಯವನ್ನು ತಿಳಿಸಿ ಇದು ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ಸಾಹಿತ್ಯ ಆಸಕ್ತರಿಗೆ ತುಂಬಾ ಅನುಕೂಲಕರವಾಗುತ್ತದೆ.

**ಆಕರ ಗ್ರಂಥಗಳು**

ಶಿವತತ್ತ್ವ ರತ್ನಾಕರ ೫ ಸಂಪುಟ – ಮಲ್ಲೇಪುರಂ ಜಿ. ವೆಂಕಟೇಶ

ಮಮ್ಮಟನ ಕಾವ್ಯ ಪ್ರಕಾಶ – ಡಾ.ಕೆ. ಕೃಷ್ಣಮೂರ್ತಿ

ಕಾವ್ಯಾಲಂಕಾರ ಸೂತ್ರ ವೃತ್ತಿ – ಡಾ. ಕೆ.ಕೃಷ್ಣಮೂರ್ತಿ

ಕನ್ನಡ ಕಾವ್ಯಾಲಂಕಾರ – ಡಾ. ಕೆ. ಕೃಷ್ಣಮೂರ್ತಿ

ಅಲಂಕಾರ ತತ್ತ್ವ – ಪ್ರಾ.ಎಂ.ಎ. ಹೆಗಡೆ